ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 17

ಸಂಚಿಕೆ 24

ಐಕ್ಯರಂಗ

ರೂ. 2.00

11 ಜೂನ್ 1995



ಕೊನೆಗೂ ಕೇಂದ್ರ ಸರಕಾರಕ್ಕೆ ಒಳ್ಳೆ ಬುದ್ಧಿ ಬಂತು!

ಕಾಶ್ಮೀರದಲ್ಲಿ ಚುನಾವಣೆ ಕುರಿತು ಎಡಪಕ್ಷಗಳು

ಜಮ್ಮು-ಕಾಶ್ಮೀರದಲ್ಲಿ ಕೇವಲ ಆಡಳಿತಾತ್ಮಕ ಕ್ರಮಗಳನ್ನು ಅವಲಂಬಿಸಿಕೊಂಡು ಜುಲೈ ಮಧ್ಯದಲ್ಲಿ ಚುನಾವಣೆ ನಡೆಸಿಯೇ ತೀರುತ್ತೇನೆಂದು ಹಠ ತೊಟ್ಟಿದ್ದ ನರಸಿಂಹ ರಾವ್ ಸರಕಾರಕ್ಕೆ ಕೊನೆಗೂ ಒಳ್ಳೆ ಬುದ್ಧಿ ಬಂತು. ಅಲ್ಲಿ ಚುನಾವಣೆಗಳು ನಡೆಯಬೇಕಾದರೆ ಅವುಗಳಲ್ಲಿ ಜನ ಪಾಲುಗೊಳ್ಳುವಂತಾಗಬೇಕಾದರೆ ಅಗತ್ಯ ರಾಜಕೀಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಎಡಪಕ್ಷಗಳು ಮೊದಲಿಂದಲೂ ಪ್ರತಿಪಾದಿಸಿಕೊಂಡು ಬಂದಿವೆ.

ಚರಾರ್-ಎ-ಷರೀಫ್‌ನ ದರ್ಗಾ ಧ್ವಂಸವಾದ ದುರಂತ ಘಟನೆಯ ನಂತರ ಕಾಶ್ಮೀರ ಕಣಿವೆಯಲ್ಲಿ ಪರಿಸ್ಥಿತಿ ಹದಗೆಟ್ಟಿದೆ, ಸರಕಾರ ಅಲ್ಲಿ ಪಾಕಿಸ್ತಾನಿ ಬೆಂಬಲಿತ ಉಗ್ರಗಾಮಿಗಳ ದುಷ್ಟ ಚಟುವಟಿಕೆಗಳನ್ನು ತಡೆಯುವಲ್ಲಿ ಸಂಪೂರ್ಣ ಸೋತಿದೆ ಎಂದು ಖೇದ ವ್ಯಕ್ತಪಡಿಸಿರುವ ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ. ಹಾಗೂ ಫಾರ್ವರ್ಡ್ ಬ್ಲಾಕಿನ ಮುಖಂಡರು ಒಂದು ನಿರ್ದಿಷ್ಟ ಸಮಯ ಚೌಕಟ್ಟಿನೊಳಗೆ ಚುನಾವಣೆ ನಡೆಸಬೇಕಾದರೆ ಅದಕ್ಕೆ ಸಿದ್ಧತೆಯಾಗಿ ಕೇಂದ್ರ ಸರಕಾರ ಕೆಲವು ತುರ್ತು ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯ ಎಂದಿದ್ದಾರೆ.

⊙ ಮೊದಲನೆಯದಾಗಿ, ಚರಾರ್-ಎ-ಷರೀಫ್ ದರ್ಗಾವನ್ನು ಮತ್ತೆ ಕಟ್ಟಲು ಹಾಗೂ ಆ ಪಟ್ಟಣದಲ್ಲಿ ಸುಟ್ಟು ಹೋದ ಮನೆಗಳನ್ನು ಮತ್ತೆ ಕಟ್ಟಲು ಎಲ್ಲಾ ಪರಿಣಾಮಕಾರಿ ಹಾಗೂ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು.

⊙ ಎರಡನೆಯದಾಗಿ, ರಾಜ್ಯಪಾಲರನ್ನು ಬದಲಿಸಿ ಆಡಳಿತದ ಪುನರ್ ವ್ಯವಸ್ಥೆ ಮಾಡಬೇಕು. ರಾಜ್ಯಪಾಲರಿಗೆ ಒಂದು ರಾಜಕೀಯ ನೋಟ ಇರಬೇಕು. ಆಡಳಿತವನ್ನು ಸ್ಪಂದನಶೀಲಗೊಳಿಸಲು ಹಾಗೂ ಜನಗಳು ಅದನ್ನು ತಲುಪಲು ಸಾಧ್ಯವಾಗುವಂತೆ ಮಾಡಲು ರಾಜಕೀಯ ಹಿನ್ನೆಲೆಯ ಜನಗಳ ಒಂದು ಸಲಹಾ ಸಮಿತಿ ರಚಿಸಬೇಕು.

⊙ ಮೂರನೆಯದಾಗಿ, ಭಾರತ ಸಂಘದೊಳಗೆ ಗರಿಷ್ಠ ಸ್ವಾಯತ್ತತೆಯನ್ನು ನೀಡುವ ಮಹತ್ವದ ಪ್ರಶ್ನೆಯನ್ನು ಕೈಗೆತ್ತಿಕೊಳ್ಳಬೇಕು. 1975ರಲ್ಲಿ ಶೇಖ್ ಅಬ್ದುಲ್ಲಾ ಮತ್ತು ಇಂದಿರಾಗಾಂಧಿಯವರ ನಡುವೆ ಆದ ಒಪ್ಪಂದ ಸಂವಿಧಾನದ 370ನೇ ಕಲಮಿನಡಿಯಲ್ಲಿ ಹೆಚ್ಚು ಸ್ವಾಯತ್ತತೆ ನೀಡುವ ಬಗ್ಗೆ ಹೇಳಿತ್ತು. ಈ ವಿಷಯದಲ್ಲಿ ಕೇಂದ್ರ ಸರಕಾರ ಮುನ್ನೆಜ್ಜೆಯಿಡಬೇಕು.

⊙ ನಾಲ್ಕನೆಯದಾಗಿ, ಕಾಶ್ಮೀರೀ ಸ್ವಂತಿಕೆಯ ರಕ್ಷಣೆಯನ್ನು ಪ್ರತಿಪಾದಿಸುವ ವಿಭಾಗಗಳೊಂದಿಗೆ ಒಂದು ಮಾತುಕತೆ ಆರಂಭಿಸಲು ಗಂಭೀರ ಪ್ರಯತ್ನ ನಡೆಸಬೇಕು. ಪಾಕಿಸ್ತಾನದಿಂದ ನೇರವಾಗಿ ಬೆಂಬಲಿತರಾದ, ಪೋಷಿಸಲ್ಪಡುತ್ತಿರುವ ಶಕ್ತಿಗಳನ್ನು ಎದುರಿಸಿ ಅವರನ್ನು ಜನರಿಂದ ದೂರ ಮಾಡಲು ಸರ್ವತೋಮುಖ ಪ್ರಯತ್ನ ನಡೆಸಬೇಕು.

⊙ ಕೊನೆಯದಾಗಿ, ಕಾಶ್ಮೀರದಲ್ಲಿ ಮತ್ತು ದೇಶದ ಇತರೆಡೆ ಉಗ್ರಗಾಮಿ ಚಟುವಟಿಕೆಗಳು ಹೇಗೆ ಕಾಶ್ಮೀರ ಕಣಿವೆಯಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಜೀವನವನ್ನು ಅಸ್ತವ್ಯಸ್ತಗೊಳಿಸಿವೆ ಎಂಬುದರ ಬಗ್ಗೆ ಬೃಹತ್ ಪ್ರಚಾರ-ಪ್ರಕ್ಷೋಭೆ ನಡೆಸಿ ಜನರನ್ನು ಜಾತ್ಯಾತೀತತೆ ಮತ್ತು ರಾಷ್ಟ್ರೀಯ ಐಕ್ಯತೆಯ ರಕ್ಷಣೆಗೆ ಅಣಿನೆರಸಬೇಕು ಎಂದು ಎಡಪಕ್ಷಗಳು ಸಲಹೆ ಮಾಡಿವೆ.

ಎಲ್ಲಾ ದೇಶಪ್ರೇಮಿ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳು ಮುಂದೆ ಬಂದು ಕಾಶ್ಮೀರಿ ಜನತೆಯ ಕುಂದುಕೊರತೆಗಳನ್ನು ನಿವಾರಿಸಬೇಕು ಹಾಗೂ ಕಾಶ್ಮೀರಿ ಸಮಸ್ಯೆಗೆ ಒಂದು ಪ್ರಜಾಸತ್ತಾತ್ಮಕ ಪರಿಹಾರ ಪಡೆಯಬೇಕು ಎಂದು ಎಡಪಕ್ಷಗಳು ಕರೆ ನೀಡಿವೆ.

ಹೋರಾಟಗಳನ್ನು ತೀವ್ರಗೊಳಿಸಿ

ರಾವ್ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಎಡಪಕ್ಷಗಳು ಕಳೆದ ವರ್ಷ ಆರಂಭಿಸಿದ ಆಂದೋಲನದ ವಿಮರ್ಶೆ ನಡೆಸಿದ ಎಡಪಕ್ಷಗಳ ಮುಖಂಡರ ಈ ಸಭೆ ಈ ನೀತಿಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲು ತ್ತಲೇ ಕೋಮುವಾದಿ ಶಕ್ತಿಗಳನ್ನು ಎದುರಿಸಲು ಕ್ರಮ ಕೈಗೊಳ್ಳಬೇಕೆಂದು ನಿರ್ಧರಿಸಿತು.

ಹರ್ಕಿಶನ್ ಸಿಂಗ್ ಸುರ್ಜಿತ್, ಇಂದ್ರಜಿತ್ ಗುಪ್ತ, ಚಿತ್ತಬಸು, ಅಬನಿ ರಾಯ್, ಎಂ.ಫಾರೂಕಿ, ಅತುಲ್ ಕುಮಾರ್ ಅಂಜನ್, ಡಿ.ಡಿ. ಶಾಸ್ತ್ರಿ ಸೀತಾರಾಂ ಯೆಚೂರಿ ಹಾಗೂ ಪ್ರಕಾಶ್ ಕಾರಟ್ ಈ ಸಭೆಯಲ್ಲಿ ಭಾಗವಹಿಸಿದ ಮುಖಂಡರು.

ದೇಶವನ್ನು ಅಪಾಯದಿಂದ ರಕ್ಷಿಸಲು ಕಾರ್ಮಿಕ ಸಂಘಗಳ ಐಕ್ಯತೆ

ಬೆಳ್ಳಿಹಬ್ಬದ ಸಂದರ್ಭದಲ್ಲಿ ಸಿಐಟಿಯು ಅಧ್ಯಕ್ಷರ ಕರೆ

ಇಪ್ಪತ್ತೈದು ವರ್ಷಗಳ ಹಿಂದೆ ಸಿಐಟಿಯು ದೇಶದ ಕಾರ್ಮಿಕ ಆಂದೋಲನದೆದುರು "ಐಕ್ಯತೆ ಮತ್ತು ಹೋರಾಟ"ದ ಘೋಷಣೆಯಿಟ್ಟಿತ್ತು. ಈಗಲೂ ಆ ಘೋಷಣೆ ಅಷ್ಟೇ ಪ್ರಸ್ತುತವಾಗಿದೆ - ವಿಶೇಷವಾಗಿ ನರಸಿಂಹರಾವ್ ಸರಕಾರದ ಹೊಸ ಆರ್ಥಿಕ ನೀತಿಗಳ ದುಷ್ಪರಿಣಾಮಗಳ ಹಿನ್ನೆಲೆಯಲ್ಲಿ. ಈ ಇಪ್ಪತ್ತೈದು ವರ್ಷಗಳಲ್ಲಿ "ಐಕ್ಯತೆ ಮತ್ತು ಹೋರಾಟ"ದ ಘೋಷಣೆಗೆ ಕಾರ್ಯರೂಪ ಕೊಡಲಾಗಿದೆ. ಕೊಡಲಾಗುತ್ತಿದೆ. ಕಾರ್ಮಿಕ ಸಂಘಗಳು ಈಗ ರಾಷ್ಟ್ರೀಯ ಹಿತಾಸಕ್ತಿಗಳನ್ನು ರಕ್ಷಿಸಲು ಒಟ್ಟಾಗಿ ಬರುತ್ತಿವೆ ಎಂದು ಸಿಐಟಿಯು ಅಧ್ಯಕ್ಷ ಇ. ಬಾಲಾನಂದನ್ ಹೇಳಿದ್ದಾರೆ. ಅವರು ಮೇ 30 ರಂದು ಸಿಐಟಿಯುನ ಬೆಳ್ಳಿಹಬ್ಬದ ಸಂದರ್ಭದಲ್ಲಿ ಕಲ್ಕತ್ತೆಯಲ್ಲಿ ಏರ್ಪಡಿಸಿದ್ದ ಒಂದು ಬೃಹತ್ ರ್‍ಯಾಲಿಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

"ನಾವೀಗ ಒಂದು ಕಾರ್ಮಿಕ ಸಂಘಗಳ ಮಹಾ ಒಕ್ಕೂಟದ ಬಗ್ಗೆ ಚರ್ಚಿಸುತ್ತಿದ್ದೇವೆ. ಇದು ಕಾರ್ಮಿಕ ಸಂಘಗಳು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಂಡೇ ಹೋರಾಟಕ್ಕೆ ಒಂದಾಗಿ ಬರಲು ಸಾಧ್ಯವಾಗುವ ವೇದಿಕೆ" ಎಂದ ಕಾಂ. ಬಾಲಾನಂದನ್‌ರವರು ಕಾರ್ಮಿಕರು ಹಲವು ಸಂದರ್ಭಗಳಲ್ಲಿ ಸರಕಾರದ ದುಷ್ಟ ನೀತಿಗಳನ್ನು ಎದುರಿಸಿ ಹೋರಾಡಿದ್ದಾರೆ, ಅವನ್ನು ಹಿಮ್ಮೆಟ್ಟಿಸಿದ್ದಾರೆ, ದೇಶವನ್ನು ಅಪಾಯದಿಂದ ರಕ್ಷಿಸುವಲ್ಲಿ ಎಲ್ಲಾ ಕಾರ್ಮಿಕ ಸಂಘಗಳನ್ನು ಒಟ್ಟಿಗೆ ತರಲು ಸಿಟಿಯು ಕೈಲಾದ ಕ್ರಮಗಳನ್ನೆಲ್ಲಾ ಕೈಗೊಳ್ಳುತ್ತದೆ ಎಂದು ಹೇಳಿದರು.

ಒಂದು ಉದಾಹರಣೆ

ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಸಿಐಟಿಯು ಉಪಾಧ್ಯಕ್ಷರಾದ ಹಾಗೂ ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿಗಳಾದ ಜ್ಯೋತಿ ಬಸುರವರು ನರಸಿಂಹರಾವ್ ಸರಕಾರದ ಆರ್ಥಿಕ ನೀತಿಯನ್ನು ಹಾಗೂ ವಿದೇಶೀ ತಂತ್ರಜ್ಞಾನವನ್ನು ಅವಲಂಬಿಸುವುದನ್ನು ತೀವ್ರವಾಗಿ ಟೀಕಿಸಿದರು. ಈ ನೀತಿಯ ದಿವಾಳಿಕೋರತನಕ್ಕೆ ಚಿತ್ತರಂಜನ್ ಲೋಕೋಮೋಟಿವ್ ವರ್ಕ್ಸ್‌ನ ಉದಾಹರಣೆ ನೀಡಿದರು. ರೈಲ್ವೆಗೆ ಲೋಕೋ ಇಂಜಿನ್ ತಯಾರಿಸುವ ಈ ಕಾರ್ಖಾನೆಗೆ ಆರ್ಡರುಗಳೇ ಇಲ್ಲ, ಆದರೆ ಅತ್ತ ವಿದೇಶಗಳಿಂದ ಲೋಕೋ ಇಂಜಿನ್‌ಗಳನ್ನು ಖರೀದಿ ಮಾಡಬೇಕೆಂದು ಹೇಳಲಾಗುತ್ತಿದೆ. ಚಿತ್ತರಂಜನ್ ಕಾರ್ಖಾನೆಯ ಕಾರ್ಮಿಕರಿಗೆ ಈಗ ಅತಿವೇಗದ ಲೋಕೋಗಳನ್ನು ತಯಾರಿಸುವ ತರಬೇತಿಯಿಲ್ಲದಿದ್ದರೂ ದೇಶಕ್ಕೆ ಇಂತಹ ಲೋಕೋ ಪಡೆಯುವ ತರಾತುರಿಯೂ ಏನಿಲ್ಲ, ಒಂದೆರಡು ವರ್ಷ ಚಿತ್ತರಂಜನ್ ಕಾರ್ಖಾನೆಯ ಕಾರ್ಮಿಕರು ಸೂಕ್ತ ತರಬೇತಿ ಪಡೆಯುವವರೆಗೆ ದೇಶ ಖಂಡಿತಾ ಕಾಯಬಲ್ಲುದು ಎಂದರು.


ಮೂರು ತಿಂಗಳು ಬೆಳ್ಳಿಹಬ್ಬ ಆಚರಣೆ

ಮೇ 30 ರಂದು ದೇಶದ ಇತರೆಡೆಯೂ ಸಿಐಟಿಯು ನ ಬೆಳ್ಳಿ ಹಬ್ಬದ ಆಚರಣೆ ಆರಂಭವಾಯಿತು. ಇವು ಆಗಸ್ಟ್ 30 ರವರೆಗೆ ನಡೆಯುತ್ತವೆ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ. ಎಂ.ಕೆ. ಪಂಧೆ ಐ.ಎನ್.ಎನ್. ಸುದ್ದಿ ಸಂಸ್ಥೆಯೊಂದಿಗೆ ಮಾತನಾಡುತ್ತಾ ತಿಳಿಸಿದ್ದಾರೆ. ಈ ಮೂರು ತಿಂಗಳಲ್ಲಿ ಕಾರ್ಮಿಕ ಆಂದೋಲನ ಹಾಗೂ ಕಾರ್ಮಿಕ ವರ್ಗದ ಸಮಸ್ಯೆಗಳನ್ನು ಕುರಿತಂತೆ ವಿಚಾರ ಸಂಕಿರಣಗಳು, ಚರ್ಚೆಗಳು, ಸಭೆಗಳನ್ನು ನಡೆಸಲಾಗುವುದು ಎಂದು ಅವರು ಹೇಳಿದ್ದಾರೆ. ಕಲ್ಕತ್ತೆಯಲ್ಲಿ ಸಿಐಟಿಯು ಜನರಲ್ ಕೌನ್ಸಿಲ್ ಮೇ 31 ರಿಂದ ಜೂನ್ 2 ರವರೆಗೆ ಸಭೆ ಸೇರಿ ಕಳೆದ ಸಮ್ಮೇಳನದ ನಂತರದ ಬೆಳವಣಿಗೆ

ಪುಟ 8ಕ್ಕೆ

13 ರಾಜ್ಯಗಳ 26 ವಿಧಾನಸಭೆಗಳ ಉಪಚುನಾವಣೆಗಳ ಫಲಿತಾಂಶ ಬಂದಿದೆ. ಇದರಲ್ಲಿ ಸುಮಾರು ಮೂರನೇ ಒಂದರಷ್ಟು ಅಂದರೆ 10 ಸ್ಥಾನಗಳನ್ನು ಪಡೆದಿರುವುದೇ ಕಾಂಗ್ರೆ ಮುಖಂಡರಿಗೆ ನಿಟ್ಟುಸಿರು ಬಿಡುವಂತಾಗಿದೆ. ಕರ್ನಾಟಕದ ಯಲಹಂಕವೂ ಸೇರಿದಂತೆ ಜನತಾದಳಕ್ಕೆ 4, ಬಿಜೆಪಿಗೆ 3, ಸಮಾಜವಾದಿ ಪಕ್ಷಕ್ಕೆ 3, ಎಡರಂಗಕ್ಕೆ 3, ತೆಲುಗುದೇಶಂಗೆ 2 ಸ್ಥಾನ ದೊರೆತಿವೆ.

ವಾರದ ವ್ಯಂಗ್ಯ ಚಿತ್ರ — ಟೈಂಸ್ ಆಫ್ ಇಂಡಿಯಾದಲ್ಲಿ ಆರ್.ಕೆ. ಲಕ್ಷ್ಮಣ್



ಇತಿಹಾಸ

ವರ್ತಮಾನ

ಫ್ಯಾಸಿಸಂ-ವಿರುದ್ಧ ಯುದ್ಧದಲ್ಲಿ ಭಾರತೀಯ ಸೈನಿಕರ ಕೊಡುಗೆ

-ಇದು ಇತಿಹಾಸದ ಮರಳಲ್ಲಿ ಹೂತುಹೋಗದಿರಲಿ

ಮೇ 8ರಂದು ಯುರೋಪಿನಲ್ಲಿ ಎರಡನೇ ಮಹಾಯುದ್ಧದ ವಿಜಯದ ಸ್ವರ್ಣ ಮಹೋತ್ಸವ ಆಚರಿಸಲಾಯಿತು. ಆಗಸ್ಟ್ 15ರಂದು ಜಪಾನಿನ ಮೇಲೆ ವಿಜಯದ ಸ್ವರ್ಣ ಮಹೋತ್ಸವವನ್ನು ಆಚರಿಸಲಾಗುವುದು (ಅಮೇರಿಕಾದಲ್ಲಿ ಇದನ್ನು ಸೆಪ್ಟೆಂಬರ್ 2ರಂದು ಆಚರಿಸಲಾಗುವುದು) ಆದರೆ, ಈ ಎಲ್ಲದರಲ್ಲಿ ಭಾರತೀಯ ಸೈನಿಕರ ಕೊಡುಗೆಯ ಬಗ್ಗೆ ಪ್ರಸ್ತಾಪವಾಗಿಲ್ಲ, ಪ್ರಸ್ತಾಪವಾಗುವ ಸಂಭವವೂ ಇಲ್ಲ.

1945ರಲ್ಲಿ 2644323 ಭಾರತೀಯ ಸೈನಿಕರು ವಿಶ್ವದ ಅತ್ಯಂತ ದುರ್ಗಮ ಮೂಲೆಗಳಲ್ಲಿ ಫ್ಯಾಸಿಸ್ಟ್ ಕೂಟದ ವಿರುದ್ಧ ಯುದ್ಧದಲ್ಲಿ ಭಾಗವಹಿಸಿದರು. ಇದಕ್ಕೆ ಮೊದಲು 1939ರಲ್ಲಿ ಎರಡನೇ ಮಹಾಯುದ್ಧ ಸಿಡಿದಾಗ 189000 ಭಾರತೀಯರು ರಣರಂಗಕ್ಕೆ ತೆರಳಿದ್ದರು.

ತೋಬ್ರೂಕ್‌ನಲ್ಲಿ ಹಿಟ್ಲರನ ಸೇನಾಪತಿ ರೊಮೆಲ್‌ನ ಟ್ಯಾಂಕುಗಳನ್ನು ತಡೆದು ನಿಲ್ಲಿಸಿ ಯುದ್ಧದ ಸ್ವರೂಪವನ್ನು ಬದಲಿಸಿದವರು ಭಾರತದ ಸೈನಿಕರು-ಅದೊಂದು ಮಾನಸಿಕ ವಿಜಯವಾಗಿತ್ತು. 1941ರಲ್ಲಿ ಏಪ್ರಿಲ್ 3ರಿಂದ 8ರ ನಡುವೆ 3ನೇ ಭಾರತೀಯ ಮೋಟಾರ್ ಬ್ರಿಗೇಡ್ ಫ್ಯಾಸಿಸ್ಟ್ ಕೂಟದ ಸೇನೆಗಳನ್ನು ತಡೆಯದಿದ್ದರೆ ಅವರು ಅಲೆಕ್ಸಾಂಡ್ರಿಯಾ ತಲುಪುವ ಭಯವಿತ್ತು. ಭಾರತೀಯ ಸೈನಿಕರು ಆ ಭಯ ನಿವಾರಿಸಿದರು.

ದಕ್ಷಿಣ-ಪೂರ್ವ ಏಷ್ಯಾದಲ್ಲಿ ಸಿಂಗಾಪುರದಲ್ಲಿ ಜಪಾನೀಯರ ವಿರುದ್ಧ ಮೊದಲು ಗುಂಡು ಹಾರಿಸಿದ್ದು ಭಾರತೀಯ ರೈಫಲ್ ಕಂಪನಿ. ಇದರಿಂದ ಬ್ರಿಟಿಶ್ ಸೇನಾಪತಿ ಜನರಲ್ ಸ್ಲಿಮ್ ಬರ್ಮಾದಲ್ಲಿ ಸೋಲಬೇಕಾದ ಪರಿಸ್ಥಿತಿ ಬದಲಾಗಿ ಗೆಲ್ಲಲು ಸಾಧ್ಯವಾಯಿತು. ಈ ಬರ್ಮಾ ಸಮರದಲ್ಲಿ ಪಾಲ್ಗೊಂಡ 27 ಮಂದಿಯ ಪರಾಕ್ರಮಕ್ಕೆ ವಿಕ್ಟೋರಿಯಾ ಕ್ರಾಸ್ ಪ್ರಶಸ್ತಿ ದೊರೆಯಿತು. ಇವರಲ್ಲಿ 20 ಮಂದಿ ಭಾರತೀಯರು.

ಎರಡನೇ ಮಹಾಯುದ್ಧದಲ್ಲಿ 1,08,800 ಭಾರತೀಯ ಸೈನಿಕರು ಪ್ರಾಣಾರ್ಪಣೆ ಮಾಡಿದ್ದರು. ಭಾರತೀಯರ ಬಗ್ಗೆ ಒಳ್ಳೆಯ ಅಭಿಪ್ರಾಯವೇನೂ ಇಲ್ಲದ ಚರ್ಚಿಲ್ ಕೂಡಾ "ಭಾರತೀಯ ಸೈನಿಕರ- ಹಿಂದೂ ಹಾಗೂ ಮುಸ್ಲಿಂ ಸೈನಿಕರ ಅಪ್ರತಿ ಮ ಸಾಹಸಯುದ್ಧ ಇತಿಹಾಸದಲ್ಲಿ ಸದಾ ಶೋಭಾಯಮಾನವಾಗಿರುವಂತದ್ದು" ಎಂದರಂತೆ.

ಇಟೆಲಿಯ ರಣರಂಗದಲ್ಲೂ ಮಿತ್ರಪಕ್ಷಗಳ ಸೇನೆಗಳ ವಿಜಯ ಭಾರತೀಯ ಸೈನಿಕರ ಪಾತ್ರವಿಲ್ಲದೆ ಸಾಧ್ಯವಾಗುತ್ತಿರಲಿಲ್ಲ. ಪೂರ್ವ ಆಫ್ರಿಕಾದಲ್ಲಿ ಇಟೆಲಿಯ ಫ್ಯಾಸಿಸ್ಟ್‌ನ ಆಳ್ವಿಕೆಯನ್ನು ಕೊನೆಗೊಳಿಸುವಲ್ಲಿ ಅಲ್ಲಿ ಹೋರಾಡುತ್ತಿದ್ದ ಎರಡು ಭಾರತೀಯ ತುಕುಡಿಗಳ ಪಾತ್ರ ಬಹಳ ನಿರ್ಣಾಯಕವಾಗಿತ್ತು.

ರಣರಂಗದಲ್ಲೂ ಭಾರತೀಯ ಸೈನಿಕರ ಈ ಅಪ್ರತಿಮ ಪ್ರದರ್ಶನದಿಂದಾಗಿ 1941ರಲ್ಲಿ ಇನ್ನೂ 50 ಹೊಸ ಭಾರತೀಯ ಬಟಾಲಿಯನ್‌ಗಳನ್ನು ರಚಿಸಲಾಯಿತು. ಹಿಂದೂ ಮಹಾಸಾಗರದ ದ್ವೀಪ ಡಿಗೋಗಾರ್ಸಿಯಾದಲ್ಲಿ, ಇರಾಕ್‌ನಲ್ಲಿಯೂ ಭಾರತೀಯ ಸೈನಿಕರು ಮಿತ್ರಪಕ್ಷಗಳಿಗೆ ವಿಜಯ ದೊರಕಿಸಿಕೊಟ್ಟರು.

ಇದು ರಣರಂಗದಲ್ಲಿ ಭಾರತೀಯ ಸೈನಿಕರ ಕೊಡುಗೆಯಾದರೆ, ರಣರಂಗದ ಹಿಂದೆ ಕೂಡಾ ಭಾರತೀಯರ ಕೊಡುಗೆ ಅಪಾರ. ಒಂದು ಲೆಕ್ಕದ ಪ್ರಕಾರ ಎರಡನೇ ಮಹಾಯುದ್ಧಕ್ಕೆ ಯುದ್ಧೋಪಕರಣಗಳ ಸರಬರಾಜಿನಲ್ಲಿ ಸುಮಾರು 60 ಲಕ್ಷ ಭಾರತೀಯರು ಹಗಲು ರಾತ್ರಿ ದುಡಿದರು. ವಿವಿಧ ಯುದ್ಧೋಪಕರಣಗಳನ್ನು ತಯಾರಿಸಲು ಕಾರ್ಖಾನೆಗಳಲ್ಲಿ 50 ಲಕ್ಷ ಮಂದಿ, ಅವನ್ನು ರಣರಂಗಕ್ಕೆ ಪೂರೈಸುವಲ್ಲಿ ಇನ್ನೂ 10ಲಕ್ಷ ಮಂದಿ ಭಾಗವಹಿಸಿದರು.

ಫಿಲಿಪ್ ಮೇಸನ್ ಎಂಬುವನ ಪ್ರಕಾರ ಭಾರತೀಯ ರೈಲ್ವೇ 9.6 ಕೋಟಿ ಸೈನಿಕರನ್ನು 3600 ಕೋಟಿ ಮೈಲಿಗಳಷ್ಟು ದೂರ ಒಯ್ದು ಮುಟ್ಟಿಸಿತು; 200 ಸಂಪೂರ್ಣ ಶಸ್ತ್ರಸಜ್ಜಿತ ಯುದ್ಧ ವಿಮಾನ ತಾಣಗಳನ್ನು ಕಟ್ಟಲಾಯಿತು; ನೂರಾರು ಮೈಲಿಗಳ ರಸ್ತೆ ಹಾಕಲಾಯಿತು, 40 ಕೋಟಿ ಉಡುಪುಗಳನ್ನು, 5 ಕೋಟಿ ಜತೆ ಬೂಟುಗಳನ್ನು ಸೈನಿಕರಿಗೆ ಭಾರತೀಯರು ಒದಗಿಸಿದರು; ಭಾರತದ ಕಾರ್ಖಾನೆಗಳಲ್ಲಿ ಯುದ್ಧಕ್ಕೆ ಬೇಕಾದ ವಿಮಾನಗಳು, ಸಿಡಿಮದ್ದು ನಿವಾರಕಗಳು, ಪ್ಯಾರಾಚೂಟ್‌ಗಳು, ಸೇತುವೆಗಳಿಗೆ ಬೇಕಾದ ಸಾಮಾಗ್ರಿಗಳು ಬುಲೆಟ್ -ನಿರೋಧಕ ಉಕ್ಕು, ತೇಲಾಡುವ ಬಂದರುಗಳು, ಶಸ್ತ್ರಕ್ರಿಯೆಯ ಉಪಕರಣಗಳು ಇತ್ಯಾದಿ ಎಲ್ಲವನ್ನು ಉತ್ಪಾದಿಸಿ ಕೊಟ್ಟಿತು.

ಭಾರತೀಯರ ಈ ಅಮೋಘ ಕೊಡುಗೆಯನ್ನು ಮರೆತುಬಿಡಲು ಹಲವು ಕಾರಣಗಳಿವೆ.ಅದರಲ್ಲಿ ಒಂದು ಕಾರಣ ಪಾಶ್ಚಿಮಾತ್ಯರು ಭಾರತೀಯ 'ಸ್ಥಳೀಯ'ರ ಬಗ್ಗೆ ಹೊಂದಿರುವ ತಿರಸ್ಕಾರ, ಇನ್ನೊಂದು ಕಾರಣ ಭಾರತೀಯರು ಬ್ರಿಟಿಶ್ ಸಾಮ್ರಾಜ್ಯದ ಭಾಗವಾಗಿ ಈ ಯುದ್ಧದಲ್ಲಿ ಭಾಗವಹಿಸಿದರು. ಆದರೆ ಈ ಯುದ್ಧದಲ್ಲಿ ಭಾರತೀಯರ ತ್ಯಾಗ-ಬಲಿದಾನಗಳು ಫ್ಯಾಸಿಸಂನ್ನು ಸೋಲಿಸುವಲ್ಲಿ ದೊಡ್ಡ ಪಾತ್ರ ವಹಿಸಿದವು ಎಂಬುದನ್ನು ಮರೆಯುವಂತಿಲ್ಲ. ಈ ಸೈದ್ಧಾಂತಿಕ ನಿಲುವಿನಿಂದಲೇ ಹಲವು ಭಾರತೀಯ ಮುಖಂಡರೂ ಯುದ್ಧ ಪ್ರಯತ್ನಗಳನ್ನು ಬೆಂಬಲಿಸಿದ್ದರು ಎಂಬುದನ್ನು ನೆನಪಿಸಿಕೊಳ್ಳಬೇಕು. ಇನ್ನೂ ಮುಖ್ಯ ಅಂಶವೆಂದರೆ ಈ ಮಹಾಯುದ್ಧದಲ್ಲಿ ಭಾಗವಹಿಸಿದ ಅನುಭವವೇ ಮುಂದೆ ಸ್ವತಂತ್ರ ಭಾರತದ ಸಶಸ್ತ್ರ ಪಡೆಗಳ ರಚನೆಗೆ ಆಧಾರವಾಯಿತು.

(ಐ.ಎನ್.ಎಸ್.)

"ಜಾಗತೀಕರಣ"ದ ಬಗ್ಗೆ ಸರಕಾರೀ ಬುರುಡೆಗಳನ್ನು ಬಯಲಿಗೆಳೆದ 78 ಬುದ್ಧಿಜೀವಿಗಳ ಹೇಳಿಕೆ

"ಜಾಗತೀಕರಣ"ಕ್ಕೆ ಪ್ರಬಲ ವಿರೋಧ ಸ್ವಾತಂತ್ರ್ಯದತ್ತ ಪ್ರಗತಿಗೆ ಅನಿವಾರ್ಯ

"ಜಾಗತೀಕರಣ"ದ ಬಗ್ಗೆ ಸರಕಾರ ಹಾಗೂ ಸುದ್ದಿಮಾಧ್ಯಮಗಳು ಬಹಳಷ್ಟು ಹೇಳುತ್ತಿರುವುದೆಲ್ಲಾ ಬರೀ ಬುರುಡೆಗಳು, ವಾಸ್ತವವಾಗಿ "ಜಾಗತೀಕರಣ" ನಮ್ಮ ರಾಷ್ಟ್ರೀಯ ಆಂದೋಲನದ ಕನಸುಗಳಿಗೆ ವಿಶ್ವಾಸಘಾತ ನಡೆಯುತ್ತಿದೆ ಎಂದು 78 ಬುದ್ಧಿಜೀವಿಗಳು ನೀಡಿರುವ ಒಂದು ಹೇಳಿಕೆಯಲ್ಲಿ ಸಾರಿದ್ದಾರೆ. ನಮ್ಮ ಆಳುವ ವರ್ಗಗಳು ಪೂರ್ವ ಯುರೋಪು ಹಾಗೂ ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದ ಕುಸಿದಿರುವ ವಿಷಮ ವಾತಾರವಣದಲ್ಲಿ ತಮ್ಮ ಸ್ವಾರ್ಥ ಸಾಧನೆಗಾಗಿ ಹೆಚ್ಚೆಚ್ಚು ಶರಣಾಗುತ್ತಿವೆ ಎಂದಿರುವ ಈ ಹೇಳಿಕೆ "ಜಾಗತೀಕರಣ"ದ ಪರಿಣಾಮಗಳ ಆಳವಾದ ಅಭ್ಯಾಸ ಮಾಡಬೇಕು ಹಾಗೂ ಜಾಗತೀಕರಣಕ್ಕೆ ಪ್ರಬಲ ಪ್ರತಿರೋಧ ಒಡ್ಡಬೇಕೆಂದು ಕರೆ ನೀಡಿವೆ.

ಮಾರ್ಚ್ 31 - ಏಪ್ರಿಲ್ 1ರಂದು ದಿಲ್ಲಿಯಲ್ಲಿ "ಜಾಗತೀಕರಣ"ದ ದುಷ್ಪರಿಣಾಮಗಳ ವಿವಿಧ ಆಯಾಮಗಳ ಬಗ್ಗೆ ವಿವರವಾಗಿ ಚರ್ಚಿಸಿದ ಒಂದು ಕಮ್ಮಟ(ವರ್ಕ್ ಶಾಪ್) ನಡೆಯಿತು. ಸಫ್ದರ್ ಹಾಶ್ಮಿ ಸ್ಮಾರಕ ಟ್ರಸ್ಟ್(ಸಹಮತ್), 'ಸೋಶಿಯಲ್ ಸೈಂಟಿಸ್ಟ್' ಪತ್ರಿಕೆ ಹಾಗೂ 'ಅಖಿಲ ಭಾರತ ಜನ ವಿಜ್ಞಾನ ಜಾಲ'(AIPSN) ಜಂಟಿಯಾಗಿ ಈ ಕಮ್ಮಟವನ್ನು ಏರ್ಪಡಿಸಿದ್ದವು.

ಆರ್ಥಿಕ ತಜ್ಞರಾದ ಡಾ.ಅಶೋಕ್ ಮಿತ್ರಾ, ಡಾ. ಪ್ರಭಾತ್ ಪಟ್ನಾಯಕ್, ಇತಿಹಾಸಕಾರರಾದ ಕೆ.ಎನ್.ಪಣಿಕ್ಕರ್, ಪತ್ರಕರ್ತರಾದ ಎನ್.ರಾಂ, ಸುಕುಮಾರ್ ಮುರುಳೀಧರನ್ ಮತ್ತು ಪ್ರಫುಲ್ಲ ಬಿದ್ವಾಯಿ ಮತ್ತಿತರರು ಮಂಡಿಸಿದ ಪ್ರಬಂಧಗಳ ಮೇಲೆ ವಿವರವಾದ ಚರ್ಚೆ ನಡೆದ ನಂತರ ಒಂದು ಸಮಗ್ರ ಹೇಳಿಕೆಯನ್ನು ಅಂಗೀಕರಿಸಲಾಯಿತು. ಆರ್ಥಿಕ ತಜ್ಞರು, ಇತಿಹಾಸಕಾರರು, ಸಾಹಿತಿಗಳು, ಪ್ರಾಧ್ಯಾಪಕರು ಇತ್ಯಾದಿ 78 ಬುದ್ಧಿಜೀವಿಗಳು ಸಹಿ ಹಾಕಿದ ಈ ಹೇಳಿಕೆಯ ಪೂರ್ಣ ಪಾಠವನ್ನು ಇಲ್ಲಿ ಕೊಡಲಾಗಿದೆ.

1. ನಾವು ಈ ದಿನಗಳಲ್ಲಿ "ಜಾಗತೀಕರಣ" ಎಂಬುದರ ಬಗ್ಗೆ ಬಹಳಷ್ಟು ಕೇಳುತ್ತಿದ್ದೇವೆ - ನಾವೀಗ "ಜಾಗತೀಕರಣದ ಯುಗದಲ್ಲಿ ಬದುಕುತ್ತಿದ್ದೇವೆ", "ಜಾಗತೀಕರಣಕ್ಕೆ ವಿರೋಧ ಹಳೆಯದಾದ ಅಥವಾ ಪ್ರತಿಗಾಮೀ ಚಿಂತನೆಯನ್ನು ತೋರಿಸುವಂತದ್ದು" ಜಾಗತೀಕರಣ " ಭಾರತ ಹಿಡಿಯಬೇಕಾದ ಸರಿಯಾದ ದಾರಿ" ಇತ್ಯಾದಿ ಇತ್ಯಾದಿ. ಆದರೂ "ಜಾಗತೀಕರಣ" ಎಂದರೆ ಮುಂದುವರಿದ ಬಂಡವಾಳಶಾಹಿ ಜಗತ್ತು ನಮ್ಮಂತಹ ದೇಶಗಳ ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಜೀವನದ ಮೇಲೆ ತಮ್ಮ ಪ್ರಾಬಲ್ಯ ಹೇರಿಸುವುದೆಂದೇ ಅರ್ಥ. ಇದು ನಮ್ಮ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ. ಮೂರನೇ ಜಗತ್ತಿನ ಜನರ ಮೇಲೆ ಹೇರಲಾಗುತ್ತಿರುವ 'ಜಾಗತೀಕರಣ'ಕ್ಕೆ ಪ್ರತಿರೋಧ ಈ ದೇಶಗಳು ಸ್ವಾತಂತ್ರ್ಯದತ್ತ ಪ್ರಗತಿ ಸಾಧಿಸಲು ಒಂದು ಅತ್ಯಗತ್ಯ ಶರತ್ತು.

2. ಆರ್ಥಿಕ ವಲಯದಲ್ಲಿ "ಜಾಗತೀಕರಣ" ಸ್ಥಗಿತತೆ, ಹಾಗೂ ಹಿಮ್ಮುಖಿ ನಡೆಗೆ ಕಾರಣವಾಗುತ್ತದೆ, ಸಮಾಜದಲ್ಲಿ ಆರ್ಥಿಕ ವಿಷಮತೆಗಳನ್ನು ಹೆಚ್ಚಿಸುತ್ತದೆ, ಬಹುಪಾಲು ಜನರ ಪರಿಸ್ಥಿತಿಯನ್ನು ಇನ್ನಷ್ಟು ಶೋಚನೀಯಗೊಳಿಸುತ್ತದೆ ಹಾಗೂ ಈಗಾಗಲೇ ಆಫ್ರಿಕ, ಲ್ಯಾಟಿನ್ ಅಮೇರಿಕಾಗಳಲ್ಲಿ ಬಹಳೆಡೆ ಆದಂತೆ ದೇಶದ ಉತ್ಪಾದಕ ಆಸ್ತಿಗಳು ಹಾಗೂ ಪ್ರಾಕೃತಿಕ ಸಂಪನ್ಮೂಲಗಳ ಹತೋಟಿಯನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಮತ್ತು ಬ್ಯಾಂಕುಗಳಿಗೆ ವರ್ಗಾಯಿಸುತ್ತದೆ. ರಾಜಕೀಯ ವಲಯದಲ್ಲಿ ಆಂತರಿಕ ಹಾಗೂ ವಿದೇಶಾಂಗ ಈ ಎರಡೂ ವಿಷಯಗಳಿಗೆ ಸಂಬಂಧಪಟ್ಟಂತೆ ಮಹತ್ವದ ನೀತಿ ನಿರ್ಣಯ ಅಧಿಕಾರಗಳನ್ನು ರಾಷ್ಟ್ರ-ಪ್ರಭುತ್ವದಿಂದ ಸೆಳೆದು ಮುಂದುವರಿದ ಬಂಡವಾಳಶಾಹಿ ದೇಶಗಳಿಗೆ ಹಸ್ತಾಂತರಿಸುತ್ತದೆ. ಸಾಂಸ್ಕೃತಿಕ ರಂಗದಲ್ಲಿ, ಮನಸನ್ನು ಮಂಕುಗೊಳಿಸುವ ಪಶ್ಚಿಮದಿಂದ ರಫ್ತಾಗುವ ಉತ್ಪನ್ನವನ್ನು ಹೇರಿ ರಾಷ್ಟ್ರದ ಸಾಂಸ್ಕೃತಿಕ ಪರಂಪರೆಯ ಕಂಪನಶೀಲತೆಯನ್ನು ನಾಶಮಾಡುತ್ತದೆ, ಒಂದೇ ರೀತಿಯ ಪಾಶ್ಚಿಮಾತ್ಯ ಸರಕುಗಳ ಗುತ್ತೇದಾರಿಕೆ ಸ್ಥಾಪಿಸಿ ಸಾಂಸ್ಕೃತಿಕ ಸ್ವರೂಪಗಳ ವೈವಿಧ್ಯತೆಯನ್ನು ನಿರ್ಮೂಲನ ಮಾಡುತ್ತಿದೆ ಹಾಗೂ ಒಟ್ಟಾರೆಯಾಗಿ ಸಾಮ್ರಾಜ್ಯಶಾಹಿ ದಮನವನ್ನು ಬಲಪಡಿಸಲು ಸಾಂಸ್ಕೃತಿಕ ಸಾಮ್ರಾಜ್ಯಶಾಹಿಯನ್ನು ಒಂದು ಸಾಧನವಾಗಿ ಬಳಸುತ್ತದೆ. ಎಲ್ಲಕ್ಕೂ ಮಿಗಿಲಾಗಿ, ಅದು ಒಂದು ಸಾಮಾಜಿಕ ದ್ವಂದ್ವವನ್ನು ಸಂಸ್ಥಾಗತಗೊಳಿಸಿ ಮೇಲ್ವರ್ಗದ ಜನಗಳಲ್ಲಿ 'ಮನಸ್ಸಿನ ಪ್ರತ್ಯೇಕತೆ'ಗೆ ಪ್ರೋತ್ಸಾಹ ನೀಡಿ, ಅತ್ತ ಇದಕ್ಕೆ ಪ್ರತಿಕ್ರಿಯೆಯಾಗಿ ಧಾರ್ಮಿಕ, ಜನಾಂಗೀಯ ಲಕ್ಷಣಗಳು ಬಲಗೊಳ್ಳುವಂತಾಗಿ, ಕೋಮುವಾದಿ-ಫ್ಯಾಸಿಸ್ಟ್, ಪ್ರತ್ಯೇಕತಾವಾದಿ ಹಾಗೂ ಮೂಲಭೂತವಾದಿ ಆಂದೋಲನಗಳ ಬೆಳವಣಿಗೆಯ ಸನ್ನಿವೇಶವನ್ನು ಸೃಷ್ಟಿಸಿ ದೇಶದ ಐಕ್ಯತೆ ಮತ್ತು ಸಾಮರ್ಥ್ಯವನ್ನು ಗಂಭೀರವಾಗಿ ಬುಡಮೇಲು ಮಾಡುತ್ತದೆ. ಸಂಕ್ಷಿಪ್ತವಾಗಿ, ರಾಷ್ಟ್ರೀಯ ಆಂದೋಲನದ ಕನಸುಗಳು ನನಸಾಗುವತ್ತ ಒಂದು ಹೆಜ್ಜೆ ಎಂದು ಹೆಚ್ಚೆಚ್ಚಾಗಿ ಮುಂದುವರಿದ ಬಂಡವಾಳಶಾಹಿ ದೇಶಗಳ ಹತೋಟಿಗೊಳಪಡುತ್ತಿರುವ ಮಾಧ್ಯಮಗಳಲ್ಲಿ ಚಿತ್ರಿತವಾಗುತ್ತಿರುವ "ಜಾಗತೀಕರಣ" ವಾಸ್ತವವಾಗಿ ಆ ಕನಸುಗಳಿಗೆ ಮಾಡಿರುವ ವಿಶ್ವಾಸಘಾತ.

3. ಹಾಗಿದ್ದರೆ ಸರಕಾರ "ಜಾಗತೀಕರಣ'ದ ಸುಳಿಗೆ ದೇಶವನ್ನೇಕೆ ಒಯ್ಯುತ್ತಿದೆ ಎಂಬ ಪ್ರಶ್ನೆ ಕೇಳಬಹುದು. ದೇಶದ ಗತಿಯೇನೇ ಆಗಲಿ, ಒಂದು "ಜಾಗತೀಕರಣ"ಗೊಂಡ ಆಡಳಿತದಲ್ಲಿ ತಮ್ಮ ಭವಿಷ್ಯ ಮಾತ್ರ ಇನ್ನೂ ಉತ್ತಮವಾಗಿರುತ್ತದೆ ಎಂದು ಪ್ರಬಲ ಸಾಮಾಜಿಕ ವರ್ಗಗಳಿಗೆ ಕಂಡುಬರುತ್ತಿದೆ ಎಂಬುದರಲ್ಲಿ ಸಂಶಯವೇನಿಲ್ಲ, ಆದರೆ ಕಾರಣ ಇಷ್ಟೇ ಅಲ್ಲ, ಇದಕ್ಕೆ ಸಂಬಂಧಪಟ್ಟಂತೆ ಇನ್ನೊಂದು ರೀತಿಯ ವಿದ್ಯಮಾನಗಳೂ ಇವೆ - ಮುಂದುವರಿದ ದೇಶಗಳ ಬಂಡವಾಳಶಾಹಿ ತನ್ನ ಪ್ರಸ್ತುತ ಆರ್ಥಿಕ ಸಂಕಷ್ಟಗಳ ನಡುವೆಯೂ ಬಲಗೊಂಡಿದೆ - ಪೂರ್ವ ಯುರೋಪು ಮತ್ತು ಹಿಂದಿನ ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದದ ಕುಸಿತಕ್ಕೆ ಇದು ಕಾರಣವೂ ಆಗಿದೆ, ಅದರ ಪರಿಣಾಮವೂ ಆಗಿದೆ; ಮೂರನೇ ಜಗತ್ತಿಗೆ ದುರಾಗಿ ಮುಂದುವರಿದ ಬಂಡವಾಳಶಾಹಿ ಜಗತ್ತು ಬಹಳ ಮೇಲ್ಮಟ್ಟದ ಐಕ್ಯತೆ ತೋರುತ್ತಿದೆ; ಮೂರನೇ ಜಗತ್ತಿನ ಮಾರುಕಟ್ಟೆಗಳನ್ನು ಮುಂದುವರಿದ ಬಂಡವಾಳಶಾಹಿ ದೇಶಗಳ ಉತ್ಪಾದನೆಗಳಿಗೆ ತೆರೆಯುವುದರೊಂದಿಗೆ ಹಣಕಾಸು ಬಂಡವಾಳದ ಅಂತರ್ರಾಷ್ಟ್ರೀಯ ಚಲನೆ ಗಮನಾರ್ಹವಾಗಿ ಹೆಚ್ಚಿದ್ದು ಇದು ಮೂರನೇ ಜಗತ್ತಿನ ದೇಶಗಳು ತಮ್ಮ ಪ್ರಭುತ್ವವನ್ನು ಹಿಂದಕ್ಕೆ "ಮಡಿಚಿಡುವ" ಒತ್ತಡ ಹೇರುತ್ತಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಹೆಚ್ಚೆಚ್ಚು ಪ್ರತಿಕೂಲವಾಗುತ್ತಿರುವ ವಾತಾವರಣದಲ್ಲಿ ಸರಕಾರ ಶರಣಾಗಿದೆ.

4. ಇದರರ್ಥ ಈಗಿನ ವಾತಾವರಣದಲ್ಲಿ ನಮ್ಮ ಜನರ ಉದ್ಧಾರದ, ನಮ್ಮ ಸ್ವಂತ ಪ್ರಯತ್ನಗಳಿಂದ ನಮ್ಮ ದೇಶವನ್ನು ಕಟ್ಟುವ ಯೋಚನೆಯನ್ನು ಪೋಷಿಸಿ ಮುಂದುವರೆಸುವುದು ಸಾಧ್ಯವಿಲ್ಲ ಎಂದೇನೂ ಅಲ್ಲ, ನಿಜ, ಕಷ್ಟಗಳ ಅರಿವು ಇರಬೇಕಾಗುತ್ತದೆ, ಎಲ್ಲಕ್ಕೂ ಹೆಚ್ಚಾಗಿ ಅಪಾರ ಇಚ್ಛಾಶಕ್ತಿ ತೋರಿಸಬೇಕಾಗುತ್ತದೆ. ಇದು "ಜಾಗತೀಕರಣ"ದ ಯೋಜನೆಗೆ ಬಲಿಯಾಗಿರುವ ಜನಗಳನ್ನು ಅವರ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಮುನ್ನಡೆಯ ಪರ್ಯಾಯ ಕಾರ್ಯಕ್ರಮದ ಆಧಾರದ ಮೇಲೆ ಒಟ್ಟುಗೂಡಿಸುವುದರಿಂದ ಮಾತ್ರ ಸಾಧ್ಯ. ರಾಷ್ಟ್ರೀಯ ಪುನರುತ್ಥಾನ ಇದುವರೆಗೆ ಬಹಳಷ್ಟು ಮಟ್ಟಿಗೆ ತಟ್ಟದ ಭಾರತೀಯ ಜನರ ಸಾಮರ್ಥ್ಯವನ್ನು ಸಕ್ರಿಯಗೊಳಿಸುವುದರ ಮೇಲೆ ಅವಲಂಬಿಸಿದೆ.

ಈ ಗುರಿ ಸಾಧನೆಗಾಗಿ ನಮ್ಮಲ್ಲಿ ಪ್ರತಿಯೊಬ್ಬರೂ ನಮ್ಮ-ನಮ್ಮ ಶಕ್ತ್ಯಾನುಸಾರ ಕಾಣಿಕೆ ನೀಡಬಹುದು. ಜನಸಾಮಾನ್ಯರಿಗೆ ದೇಶ ಎದುರಿಸುತ್ತಿರುವ ಗಂಡಾಂತರಗಳನ್ನು ವಿವರಿಸುವ, ಬಹುರಾಷ್ಟ್ರೀಯ ಬಂಡವಾಳದ ಅತಿಕ್ರಮಣ ಹಾಗೂ ನಮ್ಮ-ನಮ್ಮ ವಲಯಗಳಲ್ಲಿ ಅದರ ಪರಿಣಾಮಗಳನ್ನು ಎದುರಿಸುವ ಹಾಗೂ ವಾಸ್ತವಿಕವಾಗಿ ಬಹುರಾಷ್ಟ್ರೀಯ ಬಂಡವಾಳದ ಪ್ರಾಬಲ್ಯಕ್ಕೆ ನೆರವಾಗುವ ಕೋಮುವಾದಿ-ಫ್ಯಾಸಿಸ್ಟ್ ಶಕ್ತಿಗಳನ್ನು ಎದುರಿಸುವ ಕಾರ್ಯಕ್ರಮಗಳನ್ನು ರೂಪಿಸಿ ನಾವು ಮಧ್ಯಪ್ರವೇಶಿಸಬೇಕು.

ಕಲ್ಬುರ್ಗಿಯಲ್ಲಿ ಫ್ಯಾಸಿಸಂ ಮೇಲಿನ ವಿಜಯದ ಸ್ವರ್ಣ ಮಹೋತ್ಸವ ಆಚರಣೆ

ಮೇ 28 ರಂದು ಸಮುದಾಯ ಕಲ್ಬುರ್ಗಿ ಘಟಕವು 2ನೇ ಮಹಾಯುದ್ಧದ ಫ್ಯಾಸಿಸ್ಟ್ ವಿರೋಧಿ ವಿಜಯದ ೫೦ನೇ ಸ್ವರ್ಣ ಸಂವತ್ಸರವನ್ನು ಬೆಳಿಗ್ಗೆ 10.30ಕ್ಕೆ ಸ್ಥಳೀಯ ಕಲಾ ನಿಕತೇನದಲ್ಲಿ ಯಶಸ್ವಿಯಾಗಿ ಆಚರಿಸಿತು.

ಪ್ರಾರಂಭದಲ್ಲಿ ಸಮುದಾಯದ ಕಾರ್ಯದರ್ಶಿಗಳಾದ ಶಂಕರಯ್ಯ ಘಂಟೆಯವರು ಅತಿಥಿ ಹಾಗೂ ಸಭಿಕರಿಗೆ ಸ್ವಾಗತ ಕೋರಿದರು. ಪ್ರಾಸ್ತಾವಿಕ ಮಾತುಗಳನ್ನಾಡಿದ ಸಮುದಾಯದ ಅಧ್ಯಕ್ಷರಾದ ಪ್ರಭು ಖಾನಾಪ್ರೆರೆಯವರು ಫ್ಯಾಸಿಸ್ಟ್ ವಿರೋಧಿ ವಿಜಯದ 50ನೇ ವಾರ್ಷಿಕೋತ್ಸವವನ್ನು ವರ್ಷಪೂರ್ತಿ ಆಚರಿಸಲು ಸಮುದಾಯದ ಸ್ಥಳೀಯ ಘಟಕವು ನಿರ್ಧರಿಸಿತು. ಇದರ ಅಂಗವಾಗಿ ಕವಿಗೋಷ್ಠಿ, ಚಿತ್ರಕಲಾ ಪ್ರದರ್ಶನ, ವಿಚಾರ ಸಂಕಿರಣಗಳನ್ನು ಹಮ್ಮಿಕ್ಕೊಳ್ಳಲಿದೆ ಎಂದು ಹೇಳಿದರು.

ಸಭೆಯನ್ನು ಉದ್ಘಾಟಿಸಿದ ಸಿಪಿಐ(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿಗಳಾದ ಪಿ. ರಾಮಚಂದ್ರರಾವ್ ಚರಿತ್ರಾರ್ಹವಾಗಿ ಫ್ಯಾಸಿಸ್ಟ ಶಕ್ತಿಗಳ ಬೆಳವಣಿಗೆಯ ಬಗ್ಗೆ ಎಳೆ ಎಳೆಯಾಗಿ ವಿವರಿಸಿದರು. 50 ವರ್ಷಗಳ ಹಿಂದೆ ಜನ ಮಹಾಯುದ್ಧದ ಸಂದರ್ಭದಲ್ಲಿ ಫ್ಯಾಸಿಸ್ಟ್ ಜರ್ಮನಿಯನ್ನು ಸೋಲಿಸಲು ಇಡೀ ಸೋವಿಯೆತ್ ಯೂನಿಯನ್ ಜನತೆ ಸ್ಟಾಲಿನ್ ನೇತೃತ್ವದಲ್ಲಿ ಧೀರೋದಾತ್ತವಾದ ಹೋರಾಟವನ್ನು ತಿಳಿಸುತ್ತಾ. ಇದಕ್ಕಾಗಿ 2 ಕೋಟಿಗೂ ಹೆಚ್ಚಿನ ಸೋವಿಯೆತ್ ಜನತೆ ಪ್ರಾಣತ್ಯಾಗ ಮಾಡಬೇಕಾಗಿಯಿತು ಎಂದು ತಿಳಿಸಿದರು. ಅಂದು ಸಮಾಜವಾದಿ ಸೋವಿಯೆತ್ ರಷ್ಯಾ ನಿರ್ವಹಿಸಿದ ಪಾತ್ರದಿಂದಾಗಿ ಭಾರತವನ್ನು ಒಳಗೊಂಡಂತೆ ಅನೇಕ ರಾಷ್ಟ್ರಗಳು ವಸಾಹತುಶಾಹಿಯಿಂದ ವಿಮೋಚನೆಗೊಳ್ಳಲು ಸಾಧ್ಯವಾಯಿತು ಎಂದು ಪಿ.ಆರ್. ಸಭೆಗೆ ತಿಳಿಸಿದರ. ಬಂಡವಾಳಶಾಹಿ ರಾಷ್ಟ್ರಗಳು ಆಂತರಿಕ ಬಿಕ್ಕಟ್ಟಿಗಳಿಂದಾಗಿ ಫ್ಯಾಸಿಸ್ಟ್ ಶಕ್ತಿಗಳು ತಲೆಎತ್ತುತ್ತಿರುವುದನ್ನು ಪ್ರಸ್ತಾಪಿಸಿದ ಅವರು ಭಾರತದಲ್ಲಿ ಧರ್ಮದ ಹೆಸರಿನಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಬೆಳೆಯುತ್ತಿರುವದರ ಬಗ್ಗೆ ಎಚ್ಚರಿಸಿದರು. ಮಹಾಚೈತ್ರದಂತಹ ಪಠ್ಯ ಪುಸ್ತಕಗಳನ್ನು ವಿಶ್ವವಿದ್ಯಾಲಯದಿಂದ ಹಿಂದಕ್ಕೆ ತಡೆಯುವಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಕೆಲಸ ಮಾಡಿವೆ ಎಂದು ಆರೋಪಿಸಿದರು. ವಿಶಾಲ ರಂಗ ಅಡಿಯಲ್ಲಿ ದುಡಿಯುವ ವರ್ಗದ ಸಂಘಟಿತ ಹೋರಾಟದಿಂದ ಫ್ಯಾಸಿಸ್ಟ್ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯ ಎಂದು ತಿಳಿಸಿದರು.

ಸಭೆಗೆ ಉಪನ್ಯಾಸಕರಾಗಿ ಆಗಮಿಸಿದ್ದ ಗುಲ್ಬರ್ಗಾ ವಿಶ್ವವಿದ್ಯಾಲಯದ ಮನೋವಿಜ್ಞಾನ ವಿಭಾಗದ ಅಧ್ಯಾಪಕರಾದ ಪ್ರೊ. ಕೃಷ್ಣಮೂರ್ತಿಯವರು ಮಾತನಾಡುತ್ತಾ ಬಂಡವಾಳಶಾಹಿ ವ್ಯವಸ್ಥೆ ಇರುವವರೆಗೂ ಯುದ್ಧ ರಹಿತ ಸಮಾಜ ಒಂದು ಕನಸು ಎಂದು ತಿಳಿಸಿದ ಅವರು 2ನೇ ಮಹಾಯುದ್ಧದ ಸಂದರ್ಭದಲ್ಲಿ ಫ್ಯಾಸಿಸ್ಟ್ ಜರ್ಮನಿಯನ್ನು ಸೋಲಿಸುವದರ ಮೂಲಕ ಚರಿತ್ರೆಯನ್ನು ರೂಪಿಸುವವರು ನಾವು ಎನ್ನುವದನ್ನು ಸಮಾಜವಾದಿ ಸೋವಿಯೆತ್ ರಷ್ಯಾ ತೋರಿಸಿಕೊಟ್ಟಿದೆ ಎಂದು ಹೇಳಿದ ಅವರು ಇದೀಗ ಸೋವಿಯೆತ್ ಒಕ್ಕೂಟದ ಅನುಪಸ್ಥಿತಿಯಲ್ಲಿ ಫ್ಯಾಸಿಸ್ಟ್ ಶಕ್ತಿಗಳ ಫಿರುದ್ಧ ದುಡಿಯುವ ವರ್ಗ ಹೆಚ್ಚು ಯೋಜನಾಬದ್ಧವಾಗಿ ಹೋರಾಟ ನಡೆಸಬೇಕಾಗಿದೆ ಎಂದು ತಿಳಿಸಿದ್ದರಲ್ಲದೆ ಗ್ಯಾಟ್ ನಂತಹ ಒಪ್ಪಂದಗಳಿಗೆ ಸಹಿ ಹಾಕುವುದರ ಮೂಲಕ ಫ್ಯಾಸಿಸ್ಟ್ ಶಕ್ತಿಗಳು ಬೆಳೆಯಲು ದಾರಿ ಮಾಡಿಕೊಟ್ಟಂತಾಗಿದೆ ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರೊ. ಹುಡಗಿಯವರು ಮಾತನಾಡುತ್ತಾ ವರ್ಗ ಪ್ರಜ್ಞೆಯ ಜನರಿಗೆ ಜನಾಂಗೀಯ ಪ್ರಜ್ಞೆಯನ್ನು ಬೆಳೆಸುತ್ತಾ ಚಾರಿತ್ರಿಕ ಪ್ರಜ್ಞೆಯ ಬದಲಿಗೆ ಮಿಥಿಲಿಕ್ ಪ್ರಜ್ಞೆಯನ್ನು ಬೆಳೆಸುವುದರ ಮೂಲಕ ಫ್ಯಾಸಿಸ್ಟ್ ಶಕ್ತಿಗಳು ಜನತೆಯ ಮಧ್ಯ ಕೆಲಸ ಮಾಡುತ್ತಿದ್ದು ದುಡಿಯುವ ವರ್ಗ ಈ ಶಕ್ತಿಗಳನ್ನು ಹಿಮ್ಮೆಟ್ಟಿಸಬೇಕಾಗಿದೆ ಎಂದು ಆಶಿಸಿದ ಅವರು ದುಡಿಯುವ ವರ್ಗದ ನೇತೃತ್ವದ ಸಮಾಜ ಸೃಷ್ಟಿಯಿಂದ ಮಾತ್ರ ಯುದ್ಧರಹಿತ ಸಮಾಜ ನಿರ್ಮಿಸಲು ಸಾಧ್ಯ ಎಂದು ಹೇಳಿದ ಅವರು ಈ ಸಂದರ್ಭದಲ್ಲಿ ಸಾಹಿತಿ ರಂಜನ್ ದರ್ಗಾ ಅವರು ಕವಿತೆಯು ಒಂದೇ ಸಾಲದು ಒಂದೇ ಒಂದು ಸಲ ಅವಕಾಶಕೊಟ್ಟು ನೋಡಿ ಬಂದೂಕಿನ ಬಾಯಲ್ಲಿ ಗುಬ್ಬಿ ಗೂಡು ಕಟ್ಟುತ್ತದೆ" ಉದಾಹರಿಸಿದರು. ಕೊನೆಯದಾಗಿ ಈಶ್ವರಯ್ಯ ಮಠ ವಂದಿಸಿದರು.

ಮೇ ದಿನಾಚರಣೆ

ಮದ್ದೂರು ತಾಲ್ಲೂಕು ಭಾರತಿ ನಗರದ (ಕೆ.ಎಂ.ದೊಡ್ಡಿ) ಚಾಮುಂಡೇಶ್ವರಿ ಸಕ್ಕರೆ ಕಾರ್ಖನೆಯ ಸಿಐಟಿಯು ಕಾರ್ಮಿಕ ಸಂಘದಿಂದ ಮೇ 22 ರಂದು ಮೇ ದಿನಾಚರಣೆ ಆಚರಿಸಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ಕಾನೂನು ಸಲಹೆಗಾರರಾದ ಕಾಂ. ಮೋಹನ್ ಕುಮಾರ್‌ರವರು ವಹಿಸಿ ಕಾಂ. ಲಿಂಗರಾಜ್‌ರವರ ಕ್ರಾಂತಿ ಗೀತೆಯಿಂದ ಪ್ರಾರಂಭಿಸಿದರು. ಉದ್ಘಾಟನಾ ಭಾಷಣವನ್ನು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಕಾಂ. ವಿ.ಜೆ.ಕೆ. ನಾಯರ್ ಮಾಡುತ್ತಾ ಜಗತ್ತಿನಲ್ಲಿಯೇ ಮೇ ದಿನವನ್ನು ಆಚರಿಸಲಾಗುತ್ತಿದೆ. ಇದು ಪ್ರಾರಂಭವಾಗಿ 100 ವರ್ಷಗಳಾಗಿವೆ. ಆದರೆ ಭಾರತದಲ್ಲಿ 1923 ರಿಂದ ಮೇ ದಿನ ಆಚರಿಸಲಾಗುತ್ತಿದೆ ಎನ್ನುತ್ತಾ ಸಕ್ಕರೆ ಕಾರ್ಖಾನೆಗಳನ್ನು ಹೆಚ್ಚಿಸಿದರೆ ಮಾತ್ರ ರೈತರ ಅಭಿವೃದ್ಧಿ ಸಾಧ್ಯವಿಲ್ಲ, ಅದರ ಬದಲು ಕೊಂಡುಕೊಳ್ಳುವ ಶಕ್ತಿ ಬರಬೇಕು. ಆಗ ಮಾತ್ರ ಸಕ್ಕರೆ ಕಾರ್ಖಾನೆ ಹೆಚ್ಚುತ್ತವೆ. ಹೆಚ್ಚಿನ ಮಾರಾಟವಾಗುತ್ತದೆ. ರೈತರು ಅಭಿವೃದ್ಧಿ ಹೊಂದುತ್ತಾರೆ ಎಂದರು.

ಮುಖ್ಯ ಅತಿಥಿಯಾಗಿ ಕಿರುಗಾವಲು ಕ್ಷೇತ್ರದ ಶಾಸಕರಾದ ಕೆ.ಎನ್. ನಾಗೇಗೌಡರು ಮಾತನಾಡುತ್ತಾ ರೈತರು ಕಾರ್ಮಿಕರು ಮನುಷ್ಯನ ಎರಡು ಕಣ್ಣುಗಳಿದ್ದಂಗೆ ಎರಡು ಕೂಡು ಕ್ಷೇಮವಾಗಿರಬೇಕು ಅಲ್ಲದೆ ಈ ಕಾರ್ಖಾನೆಯಲ್ಲಿ ಎರಡು ಯೂನಿಯನ್ ಗಳಿವೆ. ಅವುಗಳು ಒಂದಾಗಿ ಐಕ್ಯತೆಯಿಂದ ಕಾರ್ಮಿಕರ ಅಭಿವೃದ್ಧಿಗಾಗಿ ದುಡಿಯಬೇಕೆಂದರು. ಮುಖ್ಯ ಅತಿಥಿಗಳಲ್ಲಿ ಮತ್ತೊಬ್ಬರಾದ ಸಿಪಿಐ(ಎಂ) ತಾಲೂಕು ಕಾರ್ಯದರ್ಶಿಯಾದ ಜಿ. ರಾಮಕೃಷ್ಣ ಮಾತನಾಡುತ್ತಾ ಬಹುರಾಷ್ಟ್ರೀಯ ಕಂಪನಿಗಳಿಂದ ದೇಶಕ್ಕೆ ಆಪತ್ತು ತಪ್ಪಿದ್ದಲ್ಲ, ಅಲ್ಲದೆ ಈ ಕಾರ್ಖಾನೆಗೆ ಕಬ್ಬು ಕಡಿಯುವ 6000 ಜನ ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಸಂಘಟಿಸುವ ಜವಾಬ್ದಾರಿ ಸಿಐಟಿಯು ಕಾರ್ಮಿಕರಿಗೆ ಇರಲಿ ಎಂದು ಎಚ್ಚರಿಸಿದರು.

ತಾಂತ್ರಿಕ ನಿರ್ದೇಶಕರಾದ ಚಂದ್ರಶೇಖರಯ್ಯ ಸುಬ್ರಮಣಿ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ನಿರ್ದೇಶಕ ಅಣ್ಣೂರು ಕೃಷ್ಣಪ್ಪ ಹಾಗೂ ಚಂದ್ರ ಮೋಹನ್ ಶುಭಕೋರಿ ಮಾತನಾಡಿದರು.

ಸ್ವಾಗತವನ್ನು ಸಿಐಟಿಯು ಉಪಾಧ್ಯಕ್ಷ ಎಸ್. ಬೋರಯ್ಯ ಮಾಡಿದರು. ವಂದನೆಯನ್ನು ಸಿಐಟಿಯು ಕಾರ್ಯದರ್ಶಿ ಶಂಕರಯ್ಯ ಮಾಡಿದರು. ಮಾಲರ್ಪಣೆಯನ್ನು ಸಿಐಟಿಯು ಅಧ್ಯಕ್ಷರಾದ ಎಸ್. ಕೃಷ್ಣಪ್ಪ ಮಾಡಿದರು.

ಮುರ್ಡೇಶ್ವರ ಹಂಚು ಕಾರ್ಮಿಕರ ಹೋರಾಟಕ್ಕೆ ಜಯ

ಮುರ್ಡೇಶ್ವರ ಹಂಚು ಕಾರ್ಖಾನೆ 300ಕ್ಕೂ ಅಧಿಕ ಕಾರ್ಮಿಕರು ಕಳೆದ ಒಂದು ತಿಂಗಳಿಂದ ಸಮರಶೀಲ ಹೋರಾಟ ನಡೆಸಿ, ಸರ್ಕಾರ ನಿಗಧಿ ಪಡಿಸಿದ ಕನಿಷ್ಠ ಕೂಲಿ ತುಟ್ಟಿ ಭತ್ಯೆ, ಬೋನಸ್ಸು ಮುಂತಾದ ಸವಲತ್ತು ಕಳೆದ ಅನೇಕ ವರ್ಷಗಳಿಂದ ಆಡಳಿತ ಮಂಡಳಿ ಕೊಡದಿದ್ದುದನ್ನು ಪ್ರತಿಭಟಿಸಿ ಸಿಐಟಿಯು ನೇತೃತ್ವದಲ್ಲಿ ಹೋರಾಟ ನಡೆಸಿತು. ಮೇ 22 ರಿಂದ ಕಾರ್ಖಾನೆ ಬೀಗಮುದ್ರೆ ತೆರವು ಮಾಡಲು ಆಡಳಿತ ವರ್ಗ ಒಪ್ಪಿಕೊಂಡಿದೆ.

ಈ ಹೋರಾಟಕ್ಕೆ ಸಿಪಿಐ(ಎಂ) ಸಂಪೂರ್ಣ ಬೆಂಬಲ ವ್ಯಕ್ತಪಡಿಸಿತ್ತು. ಕಾರ್ಮಿಕ ಹೋರಾಟದಿಂದ ತಮ್ಮ ಹಕ್ಕುಗಳನ್ನು ಪಡೆದಿದ್ದು ಇದು ಜಿಲ್ಲೆಯ ಹಂಚು ಕಾರ್ಮಿಕರ ಚಳುವಳಿಗೆ ಸಂದ ಗೌರವ ಎಂದು ಸಿಪಿಐ(ಎಂ) ಶಿರಸಿ ಶಾಖೆ ಕಾರ್ಯದರ್ಶಿ ಪಿ.ಜೆ ಮಶಾಲ್ದಿ ಪತ್ರಿಕಾ ಹೇಳಿಕೆ ಮೂಲಕ ತಿಳಿಸಿದ್ದಾರೆ.

ವಿಮಾ ನೌಕರರ ಸಂಘದ ವಾರ್ಷಿಕ ಸಭೆ

ಮೈಸೂರುಃ ವಿಮಾ ನಿಗಮ ನೌಕರರ ಸಂಘ (ಎ.ಐ.ಐ.ಇ.ಎ.ಗೆ ಸಂಬಂಧ) ಮೈಸೂರು ವಿಭಾಗದ 5ನೇ ಜನರಲ್ ಕೌನ್ಸಿಲ್ ಸಭೆ ಕಳೆದ ಮೇ 20 ಹಾಗೂ 21 ರಂದು ಮೈಸೂರಿನಲ್ಲಿ ನಡೆಯಿತು. ಅಖಿಲ ಭಾರತ ವಿಮಾ ನೌಕರರ ಸಂಘ (ಎ.ಐ.ಐ.ಇ.ಎ.) ಜಂಟೀ ಕಾರ್ಯದರ್ಶಿ ಆರ್. ಗೋವಿಂದ ರಾಜನ್ ಮೇ 20ರ ಮಧ್ಯಾಹ್ನ ಸಮ್ಮೇಳನವನ್ನು ಉದ್ಘಾಟಿಸಿದರು. ಸಭೆಯಲ್ಲಿ ಎ.ಐ.ಐ.ಇ.ಎ. ಉಪಾಧ್ಯಾಕ್ಷರಾದ ಕೆ.ವಿ. ಶ್ರೀನಿವಾಸನ್ ಮತ್ತಿತರ ಮುಖಂಡರೂ ಭಾಗವಹಿಸಿದ್ದರು.

ಕಾಂ. ಆರ್. ಗೋವಿಂದ ರಾಜನ್ ತಮ್ಮ ಉದ್ಘಾಟನಾ ಭಾಷಣದಲ್ಲಿ ದೇಶದ ಪ್ರಸ್ತುತ ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಉಂಟಾಗುತ್ತಿರುವ ಬದಲಾವಣೆಗಳ ಬಗ್ಗೆ ಪ್ರಸ್ತಾಪಿಸಿದರು.

ವಿಮಾ ಕ್ಷೇತ್ರದ ಖಾಸಗೀಕರಣದ ಬಗ್ಗೆ ಹೇಳುತ್ತಾ ಕಾಂ. ಗೋವಿಂದರಾಜನ್ ಎ.ಐ.ಐ.ಇ.ಎ. ಸಂಘಟನೆ, ನಿರಂತರವಾಗಿ ನಡೆಸುತ್ತಿರುವ ಹೋರಾಟಗಳಿಂದಾಗಿ ಮಲ್ಹೋತ್ರಾ ಸಮಿತಿಯ ವರದಿಯನ್ನು ಜಾರಿಗೊಳಿಸುವುದರಲ್ಲಿ ಸ್ವಲ್ಪ ನಿಧಾನವಾಗಿದೆ ಎಂದರು. ಹೀಗೆಂದ ಮಾತ್ರಕ್ಕೆ ವಿಮಾ ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ಕೇಂದ್ರ ಸರ್ಕಾರದ ಕುತಂತ್ರ ನೀತಿ ತಪ್ಪಿಲ್ಲ, ಖಾಸಗೀಕರಣದ ವಿರುದ್ಧ ಇನ್ನೂ ಹೆಚ್ಚಿನ ರೀತಿಯ ಹೋರಾಟದ ಅವಶ್ಯಕತೆ ಇದೆ ಎಂದರು. ಇಂದಿನ ಪರಿಸ್ಥಿತಿಯಲ್ಲಿ ವಿಮಾ ಕ್ಷೇತ್ರಕ್ಕೆ ಕಾರ್ಯಸಂಬಂಧ ಸ್ವಾಯತ್ತತೆಯ ಅಗತ್ಯವಿದ್ದು ನೌಕರರು ತಮಗೆ ದೊರಕಬೇಕಾಗಿರುವ ನೈಜ ಆರ್ಥಿಕ ಬೇಡಿಕೆಗಳ ಬಗ್ಗೆ ಮುಂದಿನ ದಿನಗಳಲ್ಲಿ ಹೆಚ್ಚಿನ ಹೋರಾಟಕ್ಕೆ ಸಿದ್ಧರಿರಬೇಕೆಂದರು.

ಸಭೆಯನ್ನು ಉದ್ದೇಶಿಸಿ ಎ.ಐ.ಐ.ಇ.ಎ. ಉಪಾಧ್ಯಕ್ಷರಾದ ಕಾಂ. ಕೆ.ವಿ.ಶ್ರೀನಿವಾಸನ್ ಮಾತನಾಡಿದರು. ಉದ್ಘಾಟನಾ ಸಮಾರಂಭದಲ್ಲಿ ಅನೇಕ ಕಾರ್ಮಿಕ ಸಂಘಟನೆಯ ಮುಖಂಡರು ಹಾಜರಿದ್ದು ಸಮ್ಮೇಳನಕ್ಕೆ ಯಶಸ್ಸನ್ನು ಕೋರಿದರು.

ಉದ್ಘಾಟನಾ ಸಮಾರಂಭ ಕಾಂ. ರೋಹಿಣಿಯವರ ಕ್ರಾಂತಿಗೀತೆಯೊಂದಿಗೆ ಆರಂಭವಾಯಿತು. ಕಾಂ.ಎಲ್. ಜಗನ್ನಾಥ್ ಹಾಜರಿದ್ದವರಿಗೆ ಸ್ವಾಗತ ಬಯಸಿದರೆ ಕೊನೆಯಲ್ಲಿ ಕಾಂ. ಆರ್. ಸುಬ್ರಮಣ್ಯ ವಂದನೆ ಸಲ್ಲಿಸಿದರು. ಸುಮಾರು 250 ಕ್ಕೂ ಹೆಚ್ಚಿನ ಸಂಖ್ಯೆಯ ನೌಕರರು ಹಾಗೂ ಇತರ ಸಂಗಾತಿಗಳು ಭಾಗವಹಿಸಿದ್ದರು.

ಉದ್ಘಟನಾ ಸಮಾರಂಭದ ನಂತರ ಪ್ರತಿನಿಧಿಗಳ ಸಭೆ ನಡೆಯಿತು. ವಿಮಾ ನಿಗಮ ನೌಕರರ ಸಂಘ (ಎ.ಐ.ಐ.ಇ.ಎ) ಮೈಸೂರು ವಿಭಾಗದ ಕಾರ್ಯಕಾರಿ ಸಮಿತಿಯ ಪರವಾಗಿ, ಪ್ರಧಾನ ಕಾರ್ಯದರ್ಶಿ ಕಾಂ. ಎಲ್. ಜಗನ್ನಾಥ್ ವರದಿಯನ್ನು ಮಂಡಿಸಿದರು. ವರದಿಯ ಮೇಲೆ ಹೆಚ್ಚಿನ ಸಂಖ್ಯೆಯ ಯುವ ಸಂಗಾತಿಗಳು ಸೇರಿದಂತೆ 30 ಕ್ಕೂ ಹೆಚ್ಚಿನ ಸಂಗಾತಿಗಳು ಮಾತನಾಡಿ ವರದಿಯನ್ನು ಶ್ರೀಮಂತಗೊಳಿಸಿದರು. ವರದಿಯ ಬಗ್ಗೆ ಸುಮಾರು 5 ಗಂಟೆಗಳ ಚರ್ಚೆ ನಡೆದು ಕೊನೆಯಲ್ಲಿ ಕಾಂ. ಎಲ್. ಜಗನ್ನಾಥ್ ತಮ್ಮದೇ ಆದ ಶೈಲಿಯಲ್ಲಿ ಎಲ್ಲರಿಗೂ ಮನಮುಟ್ಟುವ ರೀತಿಯಲ್ಲಿ ಉತ್ತರಿಸಿದರು.

ಸಮ್ಮೇಳನವು ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿ, ಮಲ್ಹೋತ್ರಾ ಸಮಿತಿ ವರದಿಯ ವಿರುದ್ಧ, ಕೋಮು ಸೌಹಾರ್ದ ಕಾಪಾಡುವುದರ ಬಗ್ಗೆ, ವಿಮಾ ಕ್ಷೇತ್ರದ ನೌಕರರ ನೈಜ ಬೇಡಿಕೆಗಳ ಬಗ್ಗೆ ಹಾಗೂ ಮೈಸೂರು ವಿಭಾಗದ ಜೀವ ವಿಮಾ ನಿಗಮದಲ್ಲಿ ಮೂರನೇ ಹಾಗೂ ನಾಲ್ಕನೇ ದರ್ಜೆ ನೌಕರರ ಶೀಘ್ರ ನೇಮಕಾತಿ ಬಗ್ಗೆ ಸರ್ವಾನುಮತದ ನಿರ್ಣಯ ಕೈಗೊಂಡಿತು.

ಸಮ್ಮೇಳನದಲ್ಲಿ ಮುಂದಿನ ಸರದಿಗಾಗಿ ಜೀವ ನಿಗಮ ನೌಕರರ ಸಂಘ ಮೈಸೂರು ವಿಭಾಗದ ಅಧ್ಯಕ್ಷರಾಗಿ ಕಾಂ. ಬಿ.ಟಿ. ಸತೀಶ್ ಪ್ರಧಾನ ಕಾರ್ಯದರ್ಶಿಯಾಗಿ ಕಾಂ. ಎಲ್. ಜಗನ್ನಾಥ್ ಸರ್ವಾನುಮತದಿಂದ ಪುನರಾಯ್ಕೆಯಾದರು.

ಗುಲ್ಬರ್ಗಾ ಜಿಲ್ಲೆಯಲ್ಲಿ ಮಹಿಳಾ ಜಾಗೃತಿ ಶಿಬಿರ

ಮೇ 28 ರಂದು ಕಮಲಾಪುರ (ಗುಲ್ಬರ್ಗಾ ಜಿಲ್ಲೆ)ದಲ್ಲಿ ಜನವಾದಿ ಮಹಿಳಾ ಸಂಘಟನೆ ಏರ್ಪಡಿಸಿದ ಒಂದು ದಿನದ ಮಹಿಳಾ ಜಾಗೃತಿ ಶಿಬಿರವನ್ನು, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಕಮಲಾಪುರದ ಮಾಜಿ ಶಾಸಕರಾದ ಶಂಕರಶೆಟ್ಟಿ ಪಾಟೀಲರು ಉದ್ಘಾಟಿಸಿ, ಬದಲಾದ ಸಾಮಾಜಿಕ ಪರಿಸ್ಥಿತಿಯಲ್ಲಿ ಮಹಿಳೆ ಅಭಿವೃದ್ಧಿ ದಿಕ್ಕಿನತ್ತ ಮುಂದುವರಿಯಬೇಕೆಂಬ ಆಶಯ ವ್ಯಕ್ತಪಡಿಸಿ, ಭಾರೀ ಪ್ರಮಾಣದಲ್ಲಿ ಸೇರಿದ ಇಷ್ಟು ಮಹಿಳೆಯರು ಒಂದು ಕಡೆ ಸೇರಿರುವುದು ತಮಗೆ ಸಂತೋಷ ತಂದಿದೆ" ಎಂದು ಉದ್ಘಾಟನಾ ಭಾಷಣ ಮಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ನಾಗಣ್ಣ ಗಣಜಲಖೇಡ, ಮ.ಮ.ಕ. ಇಲಾಖೆ ಸಹಾಯಕ ನಿರ್ದೇಶಕರು ಇವರು ಮಾತನಾಡುತ್ತ, ಸರಕಾರಿ ಸವಲತ್ತುಗಳನ್ನು ಪಡೆಯಲು ಮಹಿಳೆಯರು ಸಂಘಟಿತರಾಗಬೇಕೆಂದು ಕರೆ ಕೊಡುವುದರೊಂದಿಗೆ ಸರಕಾರದಲ್ಲಿರುವ ಸವಲತ್ತುಗಳ ಬಗ್ಗೆ ವಿವರಿಸಿ ಹೇಳಿದರು.

ಮಹಿಳೆ ನಾಲ್ಕು ಗೋಡೆಯಿಂದಾಚೆಗೆ ಬಂದು ಸಾಮಾಜಿಕ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಕುರಿತು ಮತ್ತು ಹಾಗೆ ತೊಡಗಿಸಿಕೊಳ್ಳುವಾಗ ಎದುರಾದ ಸಮಸ್ಯೆಗಳ ವಿರುದ್ಧ ಹೋರಾಡಲು ಸಂಘಟಿತಳಾಗುವ ಅನಿವಾರ್ಯತೆ ಬಗ್ಗೆ ಜೆ.ಎಂ.ಎಸ್. ರಾಜ್ಯ ಸಮಿತಿ ಅಧ್ಯಕ್ಷರಾದ ನೀಲಾ ಕೆ. ಅತಿಥಿಯಾಗಿ ಮಾತನಾಡುತ್ತಾ ಹೇಳಿದರು. ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಮಹಿಳೆಯನ್ನು ಎತ್ತರಿಸುವ ಹೊಣೆ ಇಡೀ ದೇಶಾದ್ಯಂತ ಜೆ.ಎಂ.ಎಸ್.(ಎ.ಐ.ಡಿ.ಡಬ್ಲ್ಯು.ಎ.) ನಿಬಾಯಿಸುತ್ತಾ ಬಂದಿದೆ ಎಂದು ಅವರು ಮುಂದುವರೆದು ಹೇಳಿದರು.

ಮಹಿಳೆ ಮತ್ತು ಕಾನೂನು ಕುರಿತಂತೆ ಖ್ಯಾತ ವಕೀಲರಾದ ಗುಲ್ಬರ್ಗಾದ ಶ್ರೀ ಸುಭಾಷ್ ಚಂದ್ರ ಥಾಣೆ ಇವರು ಅತ್ಯಂತ ಮನೋಜ್ಞವಾಗಿ ಮಾತನಾಡಿದರು. ಮಹಿಳೆ ಮತ್ತು ಆರೋಗ್ಯ ಸಂಬಂಧಿಸಿದಂತೆ ಪದ್ಮಿನಿ ಕಿರಣಗಿ ಇವರು ಮಾತನಾಡಿದರು. ಕ್ರಾಂತಿ ಗೀತೆಗಳನ್ನು ಪ್ರಾರಂಭದಲ್ಲಿ ದುಗುಲಾ, ಕಮಲಾ,ಮತ್ತು ಜಯಶ್ರೀ ಇವರು ಹಾಡಿದರು. ಕಾರ್ಯಕ್ರಮ ನಿರ್ವಹಣೆ ಡಿ.ವೈ.ಎಫ್.ಐ. ನ ಪ್ರಭು ಮಹಾಜನ್ ಮಾಡಿದರು. ಬಂದು ಅತಿಥಿಗಳಿಗೆಲ್ಲ ಗುಲಾಬಿ ಗುಚ್ಛದೊಂದಿಗೆ ಒಂದೊಂದು ಲೇಖನಿಯನ್ನು ಕೊಟ್ಟು ಸ್ವಾಗತಿಸಲಾಯಿತು.

ಜೆ.ಎಂ.ಎಸ್. -(ಸಂವಿಧಾನ) ಕಾರ್ಯಕ್ರಮ ಸದಸ್ಯತ್ವ ಕುರಿತಂತೆ ನೀಲಾ.ಕೆ ಹೇಳಿದರು.

ಇಡೀ ದಿನ ನಡೆದ ಶಿಬಿರದಲ್ಲಿ ಸುಮಾರು 18 ಗ್ರಾಮಾ ಹಾಗೂ ಕಮಲಾಪುರ ನಗರದಿಂದ 210 ಜನ ಮಹಿಳೆಯರು ಭಾಗವಹಿಸಿದರು.

ರಸ್ತೆ ರಿಪೇರಿಗೆ ಒತ್ತಾಯಿಸಿ ಆಟೋರಿಕ್ಷಾ ಚಾಲಕರ ರಸ್ತೆ ತಡೆ ಕಾರ್ಯಕ್ರಮ

ನಗರದ ಮೆಜೆಸ್ಟಿಕ್ ಬಳಿ ಇರುವ ಸಂಗಂ ಟಾಕೀಸ್ ಪಕ್ಕದ ರಸ್ತೆಯಲ್ಲಿ ಬಸ್ ನಿಲ್ದಾಣದ ಕಡೆಯಿಂದ ಕಪಾಲಿ ಟಾಕೀಸ್ ಕಡೆಗೆ ಹೋಗುವ ರಸ್ತೆ ತೀರ ಹದಗೆಟ್ಟಿದ್ದು ಸಂಚಾರಕ್ಕೆ ಯೋಗ್ಯವಲ್ಲದ ರೀತಿಯಲ್ಲಿ ಹಾಳಾಗಿದ್ದು ಈ ರಸ್ತೆಯನ್ನು ರಿಪೇರಿ ಮಾಡಲು ನಗರಪಾಲಿಕೆ ಅಧಿಕಾರಿಗಲಿಗೆ ಒತ್ತಾಯ ಪಡಿಸಿದ್ದರೂ ಸಹ ರಸ್ತೆ ರಿಪೇರಿ ಮಾಡಿಸದೆ ಇದ್ದುದರಿಂದ ಮೇ 27 ರಂದು ತಮ್ಮ ಸಂಘದ (ಎ.ಆರ್.ಡಿ.ಯು.) ಕರೆಯ ಮೇರೆಗೆ ಆಟೋ ಚಾಲಕರು ಬಸ್ ನಿಲ್ದಾಣದ ಬಳಿ ಹಾಳಾಗಿರುವ ರಸ್ತೆ ಹತ್ತಿರ ರಸ್ತೆ ತಡೆ ಕಾರ್ಯಕ್ರಮವನ್ನು ನಡೆಸಲಾಯಿತು.

ಉಪ್ಪಾರ ಪೇಟೆ ಪೋಲೀಸ್ ಠಾಣೆಯ ಸಂಚಾರಿ ವಿಭಾಗದ ಎ.ಸಿ.ಪಿ., ಎಂ.ಟಿ. ನಾಯಕ್ ಮತ್ತು ಕಾನೂನು ಮತ್ತು ಸುವ್ಯವಸ್ಥೆಯ ಇನ್ಸ್‌ಪೆಕ್ಟರ್ ಜಿ.ಎ. ಬಾವಾರವರು ಸ್ಥಳಕ್ಕೆ ಬೇಟಿ ನೀಡಿ ಕೂಡಲೇ ಮಹಾನಗರಪಾಲಿಕೆ ಅಧಿಕಾರಿಗಲೆ ಒತ್ತಾಯ ತಂದು ರಸ್ತೆ ರಿಪೇರಿ ಮಾಡಿಸಿಕೊಡುವುದಾಗಿ ಆಶ್ವಾಸನೆ ನೀಡಿದ ನಂತರ ರಸ್ತೆ ತಡೆ ಕಾರ್ಯಕ್ರಮ ಮುಕ್ತಾಯಗೊಳಿಸಲಾಯಿತು.

ಕರ್ನಾಟಕ ಸುದ್ದಿ ಸಮಾಚಾರ

ಚಿಕ್ಕ. ಮಾರಯ್ಯನವರ ನಿಧನ

ಅಂದು ಮೈಸೂರಿನಲ್ಲಿ ಹಿಂದೆಂದೂ ಕಾಣದಂತಹ ದೊಡ್ಡ ಮೌನಯಾತ್ರೆ, ಆ ಯಾತ್ರೆಯಲ್ಲಿ ಸಾಗಿತ್ತು ಸಂಗಾತಿ ಚಿಕ್ಕ ಮಾರಯ್ಯನವರ ಶವ ಯಾತ್ರೆ, ಕೊನೆಯ ಉಸಿರು ಇರುವವರೆಗೆ, ಸಮಾಜದ ಅತ್ಯಂತ ಕೆಳವರ್ಗದ 'ಪೌರ ಕಾರ್ಮಿಕರ ಸಂಘಟನೆ ಮಾಡುತ್ತಾ, ಪೌರ ಕಾರ್ಮಿಕರ ಅನೇಕ ಸಮಸ್ಯೆಗಳನ್ನು ಬಗೆಹರಿಸಿದ ಚಿಕ್ಕ ಮಾರಯ್ಯ ಮೈಸೂರಿನ ಮಾರ್ಕ್ಸ್ ವಾದಿ ಪಕ್ಷದ ಮುಂದಾಳು ಅಷ್ಟೇ ಅಲ್ಲ, ಮೈಸೂರು ನಗರಪಾಲಿಕೆ ಪೌರ ಕಾರ್ಮಿಕ ಸಂಘದ ಉಪಾಧ್ಯಕ್ಷರಾಗಿದ್ದರು.

1948ರಿಂದಲೂ ಆಂಧ್ರ ಪ್ರದೇಶದಿಂದ ಬಂದ ಚಿಕ್ಕ ಮಾರಯ್ಯ ಪಕ್ಷದ ತತ್ವವನ್ನು ಸಿದ್ಧಾಂತವನ್ನು ನಂಬಿ ಜನರನ್ನು ಸಂಘಟಿಸಿ ಅನೇಕ ಕಾರ್ಯಗಳನ್ನು ಮಾಡಿದ್ದಾರೆ. ಅಲ್ಲದೇ ಅತ್ಯಂತ ಹೆಚ್ಚಿನ ರೀತಿಯಲ್ಲಿ ಕಾಣುವ ಅಂಶ 1948ರಿಂದ 1992ರವರೆಗೆ ಮೇ ದಿನಾಚರಣೆಯ ಸಂದರ್ಭದಲ್ಲಿ ಆಗುವ ರ್‍ಯಾಲಿಯಲ್ಲಿ 'ಚಿಕ್ಕ ಮಾರಯ್ಯ ನೇತೃತ್ವ' ನೆನೆಯುವಂತಹದ್ದು. ಇಂತಹ ಸಂದರ್ಭದಲ್ಲಿ 'ಮೈಸೂರಿನ ಮಾರ್ಕ್ಸ್‌ವಾದಿ ಪಕ್ಷ' ಒಂದು ಸಂತಾಪ ಸಭೆಯನ್ನು ಏರ್ಪಡಿಸಿತ್ತು. ಮೇ 25 ರಂದು ಮೈಸೂರಿನ ಟೌನ್ ಹಾಲ್‌ನಲ್ಲಿ ಸಭೆಯ ಅಧ್ಯಕ್ಷತೆಯನ್ನು ಜಯರಾಂ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಉಗ್ರಪ್ಪ ತಮ್ಮ ಜೊತೆಯಲ್ಲಿ ಕೆಲಸ ಮಾಡಿದ ಚಿಕ್ಕ ಮಾರಯ್ಯನವರ ಆದರ್ಶಗುಣಗಳನ್ನು ತಿಳಿಸಿದರು. ಲಕ್ಷ್ಮಣ ಮಾತನಾಡಿದರು. ಅಲ್ಲದೆ ನರಸಿಂಹಲು ಪೌರ ಕಾರ್ಮಿಕರನ್ನು ಸಂಘಟಿಸುವಲ್ಲಿ ಚಿಕ್ಕ ಮಾರಯ್ಯನ ಪಾತ್ರವನ್ನು ಶ್ಲಾಘಿಸಿದರು.

(ಈ ಸುದ್ಧಿಯನ್ನು 'ಐಕ್ಯರಂಗ'ಕ್ಕೆ ಕಳಿಸಿದ ಆರ್. ಸುಬ್ರಮಣ್ಯ ಅವರು ಮುಂದುವರಿದು ತಮ್ಮ ಅನಿಸಿಕೆಗಳನ್ನು ಹೀಗೆ ಬರೆಯುತ್ತಾ)

"ಈ ಸಮಾರಂಭದಲ್ಲಿ ಭಾಗವಹಿಸಿದ ನಮಗೆ ಅತ್ಯಂತ ಸ್ಪಷ್ಟವಾಗಿ ಕಾಣುವ ಒಂದು ಅಂಶ ಈ ರೀತಿಯಾಗಿದೆ. -'ಅತ್ಯಂತ ಕಷ್ಟದಲ್ಲಿರುವ ಪೌರ ಕಾರ್ಮಿಕರು ತಮ್ಮ ಮಕ್ಕಳನ್ನು ಶಾಲೆಗೆ ಸರಿಯಾಗಿ ಸೇರಿಸಲು ಆಗುತ್ತಿಲ್ಲ. ಅಲ್ಲದೇ ಅನೇಕ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಅಲ್ಲದೇ ಅನೇಕ ರಾಜಕೀಯ ಶಕ್ತಿಗಳು ಪೌರಕಾರ್ಮಿಕರ ಮಧ್ಯ ಪ್ರವೇಶಿಸಿ ತಮ್ಮ ಲಾಭಕ್ಕಾಗಿ ಪ್ರಯತ್ನಿಸಿದೆ. ಆದರೆ ಅವರ ಜೀವನ ಸುಧಾರಿಸಿಲ್ಲ. ಆದರೆ ನಾವು ಕಂಡಂತೆ ಮಾರ್ಕ್ಸ್‌ವಾದಿ ಪಕ್ಷ ಸರಿಯಾದ ರೀತಿಯಲ್ಲಿ ಆ ಜನರನ್ನು ಎಚ್ಚರಿಸಿ, ಅಲ್ಲಿ ಶಿಕ್ಷಣ, ಸಮಾನತೆ, ಅಲ್ಲದೇ ದೇಶದಲ್ಲಿ ಜಾರಿಯಾಗುತ್ತಿರುವ ಹೊಸ ಆರ್ಥಿಕ ನೀತಿಗಳ ಪರಿಣಾಮ ಕೋಮುಗಲಭೆಯ ಬಗ್ಗೆ ಜನರನ್ನು ಎಚ್ಚರಿಸಬೇಕಾಗಿದೆ. ಈ ದಿಶೆಯಲ್ಲಿ 'ಚಿಕ್ಕ ಮಾರಯ್ಯರಂತಹ ಸಂಗಾತಿಗಳನ್ನು ಗುರುತಿಸ ಬೇಕಾಗಿದೆ. ಎಂದು ಆಶಿಸಿದ್ದಾರೆ.)

ಕಾಂಗ್ರೆಸ್ ಮತ್ತೆ ಇಬ್ಭಾಗ

ರಾಜಕೀಯ ರಂಗದಲ್ಲೊಂದು ಹೊಸ ಬದಲಾವಣೆ

ವಿಶೇಷ ಲೇಖನಗಳು

-ಸುರ್ಜಿತ್



ದಿಲ್ಲಿಯಲ್ಲಿ ಮೇ 19ರ ಸಮಾವೇಶದೊಂದಿಗೆ ಕಾಂಗ್ರೆಸ್ ಪಕ್ಷ ವಿಧ್ಯುಕ್ತವಾಗಿ ಒಡೆದಿದೆ. ಇದು ಕಳೆದ ಕೆಲವು ತಿಂಗಳಿಂದ ಆ ಪಕ್ಷದೊಳಗೆ ನಡೆಯುತ್ತಿದ್ದ ಬೆಳವಣಿಗೆಗಳ ಸಹಜ ಫಲಿತಾಂಶ. ಡಿಸೆಂಬರ್ 1992ರಲ್ಲಿ ಅಯೋಧ್ಯೆಯಲ್ಲಿ ನಡೆದ ದುರಂತಕಾರಿ ಘಟನೆಯೊಂದಿಗೆ ಜಾತ್ಯಾತೀತತೆಯ ರಕ್ಷಣೆ ಮತ್ತು ಆರ್ಥಿಕ ನೀತಿಗಳ ಪರಿಣಾಮಗಳ ಪ್ರಶ್ನೆಗಳು ದೇಶದ ಮುಂದೆ ಮೂಡಿ ಬಂದವು. ಡಿಸೆಂಬರ್ 1994ರಲ್ಲಿ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್(ಐ)ನ ತೀವ್ರ ಪರಾಭವದೊಂದಿಗೆ ಇದು ಪರಾಕಾಷ್ಠೆಯನ್ನು ತಲುಪಿತು. ಕಾಂಗ್ರೆಸ್‌ನ ಬೆಂಬಲದ ಆಧಾರವಾಗಿದ್ದ ಅಲ್ಪಸಂಖ್ಯಾತರು ಹಿಂದುಳಿದ ವಿಭಾಗಗಳು ಹಾಗೂ ಬಡವರು ದೊಡ್ಡ ಪ್ರಮಾಣದಲ್ಲಿ ದೂರಸರಿದಿದ್ದು ಕಾಂಗ್ರೆಸ್ಸಿಗರು ತಮ್ಮ ಸರಕಾರದ ನೀತಿಗಳ ಬಗ್ಗೆ ಪುನರಾಲೋಚಿಸುಂತೆ ಮಾಡಿತು. ನಂತರದ ಚುನಾವಣೆಗಳಲ್ಲೂ ಜನತೆಯಲ್ಲಿ ಕುದಿಯುತ್ತಿದ್ದ ಅಸಂತೃಪ್ತಿ ಕೊನೆಗೆ ಕಾಂಗ್ರೆಸ್ಸಿನ ಒಡಕಿಗೆ ಹಾದಿಮಾಡಿಕೊಟ್ಟಿತು.

ನರಸಿಂಹರಾವ್ ಸರಕಾರ ಐ.ಎಂ.ಎಫ್-ವಿಶ್ವಬ್ಯಾಂಕ್ ಆದೇಶದಂತೆ ಆರಂಭಿಸಿದ ಉದಾರೀಕರಣ-ಖಾಸಗೀಕರಣದ ನೀತಿಗಳು ಒಂದೆಡೆ ದೇಶದ ಆರ್ಥಿಕವನ್ನು ವಿದೇಶೀ-ದೇಶೀ ಗುತ್ತೇದಾರಿ ಬಂಡವಾಳಶಾಹಿಗಳಿಗೆ ತೆರೆದಿಟ್ಟು ಅದಕ್ಕೆ ಕಾರ್ಮಿಕ ವರ್ಗ, ರೈತಾಪಿ ಜನಗಳು ಹಾಗೂ ಇತರ ದುಡಿಯುವ ಜನರ ಭಾರೀ ಬೆಲೆ ತೆರೆಯುವಂತೆ ಮಾಡಿದರೆ, ಇನ್ನೊಂದೆಡೆ ಭ್ರಷ್ಟಾಚಾರ ತಾಂಡವವಾಡಲಾರಂಭಿಸಿತು. ನಾಲ್ಕು ವರ್ಷಗಳಲ್ಲಿ ಹಲವಾರು ಹಗರಣಗಳು ಬಯಲಿಗೆ ಬಂದವು. ಇಂತಹ ಬೃಹತ್ ಅಪರಾಧವನ್ನು ಮುಚ್ಚಿಹಾಕುವ ನಾಚಿಕೆಗೇಡಿ ಪ್ರಯತ್ನವನ್ನು ಸರಕಾರ ನಡೆಸಿತು.

ಈ ಉದಾರೀಕರಣ ನೀತಿಗಳ ವಿರುದ್ಧ ವ್ಯಾಪಕ ಅಸಂತೃಪ್ತಿಯೂ ಬೆಳೆಯಿತು. ಇದರಿಂದ ನರಸಿಂಹರಾಯರ ನಾಲ್ಕು ವರ್ಷಗಳು ನಾಲ್ಕು ಸಾರ್ವತ್ರಿಕ ಮುಷ್ಕರಗಳನ್ನು, ಇನ್ನೂ ಹಲವಾರು ಪ್ರತಿಭಟನಾ ಕಾರ್ಯಾಚರಣೆಗಳನ್ನು, ಎಡಪಕ್ಷಗಳ ನೇತೃತ್ವ ಬೃಹತ್ ಕಾನೂನುಭಂಗ ಚಳುವಳಿಯನ್ನು ಕಂಡ ವರ್ಷಗಳು.

ಮರುಚಿಂತನೆ ಮಾಡಬೇಕಾದ ಒತ್ತಾಯ

ಕಾಂಗ್ರೆಸ್(ಐ)ನ ಜನಬೆಂಬಲ ಕ್ಷೀಣಿಸಲು ಮತ್ತೊಂದು ಮಹತ್ವದ ಕಾರಣ ಕೋಮುವಾದಿ ಶಕ್ತಿಗಳನ್ನು ಕುರಿತಂತೆ ಅದರ ರಾಜಿ ನಿಲುವು. ಬಾಬ್ರಿ ಮಸೀದಿ ಧ್ವಂಸವಾಗುತ್ತಿದ್ದುದನ್ನು ನಿರ್ವೀಯವಾಗಿ ನೋಡುತ್ತಾ ನಿಂತದ್ದು, ರಾಷ್ಟ್ರಪತಿಗಳೇ ಈ ಧ್ವಂಸವನ್ನು ಸಾರ್ವಜನಿಕವಾಗಿ ಖಂಡಿಸಬೇಕಾಗಿ ಬಂದ ಅಭೂತಪೂರ್ವ ಸಂದರ್ಭ, ನಂತರ ಮಸೀದಿಯಿದ್ದ ಜಾಗದಲ್ಲಿ ಮೊದಲು ಹಿಂದೂ ಕಟ್ಟಡವೇನಾದರೂ ಇತ್ತೇ ಎಂದು ಸುಪ್ರೀಂ ಕೋರ್ಟನ್ನು ಕೇಳಿದ್ದು, ಇದರ ಜೊತೆಗೆ ಶಂಕರಾಚಾರ್ಯರುಗಳ ಮೂಲಕ ದೇವಸ್ಥಾನ ಕಟ್ಟಲು ಒಂದು ಟ್ರಸ್ಟ್ ರಚಿಸುವ ಪ್ರಯತ್ನ ಇವೆಲ್ಲದರಿಂದ ಆ ಪಕ್ಷದ ಜಾತ್ಯಾತೀತ ಸ್ವರೂಪದ ಮೇಲೆ ಪ್ರಶ್ನೆ ಚಿಹ್ನೆ ಬೀಳುವಂತಾಯಿತು. ಸಹಜವಾಗಿಯೇ ಅಲ್ಪಸಂಖ್ಯಾತ ಜನಸಮೂಹ ಕಾಂಗ್ರೆಸ್ಸ್ ನಿಂದ ದೂರ ಸರಿಯಲಾರಂಭಿಸಿತು.

ಹೀಗೆ ಬಹುಪಾಲು ಜನ ತಮ್ಮಿಂದ ದೂರ ಹೋಗುತ್ತಿದ್ದುದನ್ನು ಕಂಡ ಕಾಂಗ್ರೆಸ್ಸಿಗರ ಕೆಲವು ವಿಭಾಗಗಳು ತಮ್ಮ ಪಕ್ಷದ ನೀತಿಗಳ ಪರಿಣಾಮಗಳ ಬಗ್ಗೆ ಮರುಚಿಂತನೆ ಮಾಡಬೇಕಾದ ಸ್ಥಿತಿ ಬಂತು. ಈ ನೀತಿಗಳನ್ನು ಮುಂದುವರಿಸಿದರೆ ತಮ್ಮ ಪಕ್ಷದ ಭವಿಷ್ಯ ಅಂಧಕಾರಮಯ ಎಂದು ಅವರಿಗೆ ಅನಿಸಲಾರಂಭಿಸಿತು. ಆದ್ದರಿಂದಲೇ ನಾಯಕತ್ವವನ್ನು ಮತ್ತು ನೀತಿಗಳನ್ನು ಬದಲಿಸಬೇಕೆಂಬ ಒತ್ತಾಯ ಹಾಗೂ ಆ ಬಗ್ಗೆ ಪ್ರಚಾರ ಆರಂಭವಾಯಿತು.

> **ಕಾಂಗ್ರೆಸ್ಸಿನ ಇಬ್ಭಾಗ ರಾಜಕೀಯ ಸನ್ನಿವೇಶದಲ್ಲಿ ಒಂದು ಹೊಸ ಬದಲಾವಣೆ ತಂದಿದೆ. ಇದರಿಂದ ಯಾರಿಗೆ ಪ್ರಯೋಜನ? ಬಿಜೆಪಿಗೆ ಈ ಸನ್ನಿವೇಶದಿಂದ ಲಾಭ ಎಂಬ ಶಂಕೆ ವ್ಯಾಪಕವಾಗಿದೆ. ಬಿಜೆಪಿ ಒಡ್ಡಿರುವ ಅಪಾಯವನ್ನು ಸೋಲಿಸಲು ಎಡ-ಪ್ರಜಾಪ್ರಭುತ್ವ ಶಕ್ತಿಗಳು ಜಾಗರೂಕವಾಗಿರದಿದ್ದರೆ ಮಾತ್ರ ಇದು ಸಾಧ್ಯ. ಎಲ್ಲೆಲ್ಲಿ ಎಡ-ಪ್ರಜಾಪ್ರಭುತ್ವ ಶಕ್ತಿಗಳಿಗೆ ಗಮನಾರ್ಹ ಬಲವಿದೆಯೋ, ಎಲ್ಲೆಲ್ಲಿ ಇಂತಹ ಪರ್ಯಾಯ ಜನರ ಮುಂದಿದೆಯೋ ಅಲ್ಲೆಲ್ಲಾ ಜನ ಈ ಶಕ್ತಿಗಳಿಗೆ ಸ್ಪಂದಿಸಿದ್ದಾರೆ.**

ಅರ್ಜುನ್ ಸಿಂಗ್, ಎನ್.ಡಿ. ತಿವಾರಿ ಮತ್ತಿತರರ ನೇತೃತ್ವದ ವಿಭಾಗ ಆರಂಭಿಸಿದ ಪ್ರಕ್ಷೋಭೆಯ ಫಲವಾಗಿ ಅಂತಿಮವಾಗಿ ಮೇ 19ರ ಸಮಾವೇಶ ನಡೆಯಿತು. ಈ ವಿಭಾಗ ಎತ್ತಿದ ಪ್ರಶ್ನೆಗಳನ್ನು ಎದುರಿಸುವಲ್ಲಿ ವಿಫಲವಾದ, ಈ ವಿಭಾಗಕ್ಕೆ ಬೆಂಬಲ ಹೆಚ್ಚುತ್ತಿರುವುದನ್ನು ಕಂಡ ರಾವ್ ಮುಖಂಡತ್ವ ಒತ್ತಡ ತಂತ್ರದ ಕಸರತ್ತುಗಳ ಮೊರೆ ಹೊಕ್ಕಿತು. ವಿಜಿತ್ರವೆಂದರೆ ರಾವ್ ಮುಖಂಡತ್ವ ಹಾಗೂ ಅವರ ವಿರೋಧಿಗಳು ಇವರಿಬ್ಬರೂ 10 ಜನಪತ್ (ರಾಜೀವ್‌ಗಾಂಧಿಯವರ ವಿಧವೆ ಸೋನಿಯಾ ಗಾಂಧಿಯವರ ನಿವಾಸ)ದತ್ತ ನೋಡಲಾರಂಭಿಸಿದರು. ಅವರು ಮಧ್ಯಪ್ರವೇಶಿಸಬೇಕೆಂದು ಪ್ರಯತ್ನಿಸಿದರು. ಈ ಮೂಲಕ ಈ ಎರಡೂ ಗುಂಪುಗಳು ತಮ್ಮ ಸ್ಥಾನಮಾನವನ್ನು ಅಪಹಾಸ್ಯಕ್ಕೀಡುಮಾಡಿಕೊಂಡರು. ಆದರೆ ಇಂತಹ ಪ್ರಯತ್ನಗಳಿಂ ಏನೂ ಪರಿಣಾಮವಾಗಲಿಲ್ಲ.

ಮೇ 19ರಂದು ತಲ್‌ಕಟೋರಾ ಕ್ರೀಡಾಂಗಣದಲ್ಲಿ ಸೇರಿದ್ದ ಕಾಂಗ್ರೆಸ್ಸಿಗರು ಒಂಭ... ವರೆ ಗಂಟೆಗಳಿಗಿಂತಲೂ ಹೆಚ್ಚು ಕಾ... ಕೂತಿದ್ದರು. ತಿವಾರಿ ವ್ಯಕ್ತಪಡಿಸಿದ್ದ ದೃಢ... ಧಾರದಿಂದಾಗಿ ಮುಖಂಡರು ಕಾಂಗ್ರೆಸ... ಪುನರುಜ್ಜೀವನಕ್ಕೆ ಹೊಸ ಮುಖಂಡತ್ವ... ಘೋಷಣೆ ಮಾಡಿದರು.

ಸರಕಾರದ ನೀತಿಗಳ ವ್ಯಾಪಕ ಟೀಕೆ

ಈ ಸಮಾವೇಶದಲ್ಲಿ ಕಾಂಗ್ರೆಸ... ನೀತಿಗಳಲ್ಲಿ ಮೂಲಭೂತ ಬದಲಾ... ಬರುತ್ತದೆ ಎಂದು ನಾವೇನೂ ನಿರೀಕ್ಷ... ಲಿಲ್ಲ. ಈ ಸಮಾವೇಶದ ಆರ್ಥಿಕ... ವೇಜಿನಲ್ಲಿ ಸರಕಾರ ಆರ್ಥಿಕ ನೀತಿ... ಬಹಳಷ್ಟು ಪ್ರಶ್ನೆಗಳ ಬಗ್ಗೆ ವ್ಯಾಪಕ ಟೀ...

ಸಿಐಟಿಯುಗೆ 25 ವರ್ಷ:

ಲೇಖನ ಮಾಲೆ : 3

ಕರ್ನಾಟಕದ ಕಾರ್ಮಿಕ ಆಂದೋಲನದಲ್ಲಿ

ವರ್ಗ ಶಾಮೀಲು ಮತ್ತು ವರ್ಗ ಹೋರಾಟದ ನಡುವೆ ಸಂಘರ್ಷ

ಸಿಐಟಿಯು ಸ್ಥಾಪನೆ ಮಾಡಬೇಕಾದ ಪರಿಸ್ಥಿತಿ ಹಾಗೂ ಅದು ಐಕ್ಯತೆ ಮತ್ತು ಹೋರಾಟದ ತನ್ನ ಧೋರಣೆಯನ್ನು ಆಚರಣೆಗೆ ತಂದ ರೀತಿಯ ಬಗ್ಗೆ ಹಿಂದಿನ ಎರಡು ಲೇಖನಗಳಲ್ಲಿ ನೋಡಿದ್ದೇವೆ. ಇದುವರೆಗೆ ನಾವು ಅನುಸರಿಸಿದ ನೀತಿಗಳನ್ನು ಮತ್ತೊಮ್ಮೆ ಹೇಳಲು ಹಾಗೂ ನಮ್ಮನ್ನು ಮತ್ತೆ ಈ ಗುರಿ ಸಾಧನೆಗೆ ಸಮರ್ಪಿಸಿಕೊಳ್ಳಲು ನಮ್ಮ ರಾಜ್ಯ ಕರ್ನಾಟಕದಲ್ಲಿ ಈ ಮಾರ್ಗವನ್ನು ಅನುಸರಿಸಲು ನಡೆಸಿದ ಹೋರಾಟ ಹಾಗೂ ಮುನ್ನಡೆಯ ಬಗ್ಗೆ ಹೇಳುವುದು ಅಗತ್ಯ. ವಿಧ್ಯುಕ್ತವಾಗಿ ಕರ್ನಾಟಕದಲ್ಲಿ ಸಿಐಟಿಯು ಸ್ಥಾಪನೆ 1971ರಲ್ಲಾಯಿತು. ಏಕೆಂದರೆ ಮೊದಲ ಸಮ್ಮೇಳನ ಆಗ ನಡೆಯಿತು. ಆದರೆ ಒಂದು ಸರಿಯಾದ ಮಾರ್ಗಕ್ಕಾಗಿ ಹಾಗೂ ವರ್ಗ ಶಾಮೀಲಿನ ವಿರುದ್ಧ ಹೋರಾಟ ಸಹಜವಾಗಿಯೇ 1970ರಲ್ಲಿ ಸಿಐಟಿಯು ಸ್ಥಾಪನೆಗೊಳ್ಳುವ ಮೊದಲೇ ಆರಂಭವಾಗಿತ್ತು. 1970ರಲ್ಲಿ ಅವಿಭಜಿತ ಎಐಟಿಯುಸಿಯಲ್ಲಿನ ಸನ್ನಿವೇಶವನ್ನು ಗಮನಿಸೋಣ.

ಎಐಟಿಯುಸಿಗೆ ಕರ್ನಾಟಕದಲ್ಲಿ ಸಾಕಷ್ಟು ವ್ಯಾಪಕ ಪ್ರಭಾವ ಇತ್ತು. ರಾಜಧಾನಿ ಬೆಂಗಳೂರು 1950ರ ದಶಕದಲ್ಲಿ ಕೇಂದ್ರೀಯ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಪಡೆದಿತ್ತು. ಎಐಟಿಯುಸಿ ಸುಮಾರಾಗಿ ಈ ಎಲ್ಲಾ ಉದ್ದಿಮೆಗಳಲ್ಲಿ ಬೇರು ಬಿಟ್ಟಿತ್ತು. ಹೆಚ್.ಎಂ.ಟಿ.ಯಲ್ಲಿ ಅದರ ಇರವು ಬಹಳ ಬಲವಾಗಿತ್ತು. ಹೆಚ್.ಎ.ಎಲ್. ಒಂದೊಮ್ಮೆ ತಮಿಳುನಾಡಿನಿಂದ ಬಂದ ಹಿರಿಯ ಮುಖಂಡ ಆನಂದನ್ ನಂಬಿಯಾರ್‌ರನ್ನು ಕಾರ್ಮಿಕರ ಮುಖಂಡನಾಗಿ ಆರಿಸಿತ್ತು. ಹೆಚ್.ಎಂ.ಟಿ.ಯೊಂದರಲ್ಲಿ ಬಿಟ್ಟು ಎಐಟಿಯುಸಿ ಮುಖಂಡರ ನೇತೃತ್ವದಲ್ಲಿದ್ದ ಇತರ ಸಂಘಗಳು ಎಐಟಿಯುಸಿಗೆ ಸಂಬದ್ಧವಾಗಿರಲಿಲ್ಲ, ಇದರಿಂದ ರಾಜಿ ಮಾಡಿಕೊಳ್ಳುವ ಮಾದರಿ ಬಹಳ ಬೇಗನೆ ಮೂಡಿ ಬಂದು ಸಂಘಗಳು ದಾರಿ ತಪ್ಪುವಂತಾಯಿತು. ಹೆಚ್.ಎ.ಎಲ್‌ನಲ್ಲಿ ಅದೇ ಆದದ್ದು. ಐಟಿಐನಲ್ಲಿ 'ಸಮಾಜವಾದಿ ಪಕ್ಷ'ದ ಮನುಷ್ಯ ರಾಜಕೀಯದ ಗಂಧಗಾಳಿಯಿಲ್ಲದ ರೀತಿಯಲ್ಲಿ ಸುಲಭವಾಗಿಯೇ ಸಂಘವನ್ನು ನಡೆಸಲು ಸಾಧ್ಯವಾಗಿತ್ತು. ಬಿ.ಇ.ಎಲ್.ನಲ್ಲಿ 1968ರವರೆಗೆ ಸಂಘ ಎಐಟಿಯುಸಿಗೆ ಸೇರಿರದಿದ್ದರೂ ಒಂದು ಸರಿಯಾದ ಮಾರ್ಗಕ್ಕಾಗಿ ಹೋರಾಟ ಮೊದಲೇ ನಡೆದಿತ್ತು. ಇದು ಕಾರ್ಮಿಕರ ಗಮನ ಸೆಳೆಯಲು ಸಹಾಯಕವಾಯಿತು. ಎಐಟಿಯುಸಿ ಸಾಕಷ್ಟು ಬಲಿಷ್ಠವಾಗಿದ್ದ ಹೆಚ್.ಎಂ.ಟಿ.ಯಲ್ಲಿ ಒಂದು ಸಮ-ಸಮವಾಗಿದ್ದ ಆದರೆ ವಿರುದ್ಧವಾಗಿದ್ದ ವಿಭಾಗವನ್ನು ಸೃಷ್ಟಿಸಿತು. ಅಲ್ಲಿ ಪರ್ಸನಲ್(ಸಿಬ್ಬಂದಿ) ಮ್ಯಾನೇಜರ್ ಆಗಿದ್ದಾತನೊಬ್ಬ ಕಾರ್ಮಿಕ ಮುಖಂಡನಾಗಿ ಇಂಟಕ್ ಆರಂಭಿಸಿ ಒಂದು ಕಮ್ಯುನಿಸ್ಟ್-ವಿರೋಧಿ ಕನ್ನಡಿಗೇತರ-ವಿರೋಧಿ ನಿಲುವು ತಳೆದು ಗೂಂಡಾಗಿರಿ ನಡೆಸಿ ಹಲವಾರು ಘರ್ಷಣೆಗಳ ಮೂಲಕ ಎಐಟಿಯುಸಿಯ ಬಲವನ್ನು ನುಚ್ಚುನೂರು ಮಾಡಿದರು. 1960ರ ದಶಕದಲ್ಲೇ ಇದು ನಡೆದಿತ್ತು. ಈ ಕಮ್ಯುನಿಸ್ಟ್-ವಿರೋಧಿ, ಕನ್ನಡಿಗೇತರ-ವಿರೋಧಿ ಇಂಟಕ್ ಗುಂಪು ಬಿ.ಇ.ಎಲ್.ನಲ್ಲೂ ತೂರಿಕೊಂಡಿತು. ಅಲ್ಲಿ ಪ್ರಜಾಪ್ರಭುತ್ವವಾದಿ ಹಾಗೂ ಸಮಾನತೆ ಬಯಸುವ ವ್ಯಕ್ತಿಗಳ ಪ್ರಬಲ ವಿರೋಧದಿಂದಾಗಿ ಬಿ.ಇ.ಇ.ಯು.ನಲ್ಲಿ ಸಾಕಷ್ಟು ಮಟ್ಟಿನ ಸಾಮರಸ್ಯ ಉಂಟಾಗಿತ್ತು. ಇದರಿಂದ ಈ ಸಂಘ 1966ರವರೆಗೂ ಹೋರಾಟದ ಹಾದಿಯಲ್ಲೇ ಮುಂದುವರೆಯಿತು. 1966ರಲ್ಲಿ ಆಗ ಮ್ಯಾನೇಜ್‌ಮೆಂಟ್‌ನಲ್ಲಿದ್ದ ಕಮ್ಯುನಿಸ್ಟ್-ವಿರೋಧಿ, ಕನ್ನಡಿಗೇತರ-ವಿರೋಧಿ ಮುಖಂಡತ್ವಕ್ಕೆ ಹೋರಾಟವನ್ನು ನುಚ್ಚುನೂರು ಮಾಡಲು, ಮುಖಂಡರನ್ನು ಕಾರ್ಮಿಕರಿಂದ ದೂರ ಮಾಡಲು ಹಾಗೂ ಅವರನ್ನು ಬಲಿ ಹಾಕಲು ಸಾಧ್ಯವಾಯಿತು. ಈ ಕಾರ್ಖಾನೆಯಲ್ಲಿ ಕೂಡಾ ಆಗಿನ ಎಐಟಿಯುಸಿ ನಾಯಕತ್ವ ರಾಜಿ ನಿಲುವಿನ ಪಾತ್ರ ವಹಿಸಿದ್ದು ಕಾರ್ಮಿಕರ ಅನುಭವಕ್ಕೆ ಬಂದಿತ್ತು.

1960ರ ದಶಕದಲ್ಲಿ

ಇತರ ದೊಡ್ಡ ಉದ್ದಿಮೆಗಳಲ್ಲಿ - ಮೈಕೋ, ಐಟಿಸಿ, ಕಿರ್ಲೋಸ್ಕರ್, ಜಿ.ಕೆ.ಡಬ್ಲ್ಯು ಇತ್ಯಾದಿಗಳಲ್ಲೂ ಎಐಟಿಯುಸಿ ಪ್ರಬಲವಾಗಿತ್ತು. ಜವಳಿ ಉದ್ದಿಮೆಯಲ್ಲಿ ಬಿನ್ನಿ ಮಿಲ್ ಇಂಟಕ್‌ನ ವಶದಲ್ಲಿತ್ತು. ಮೈಸೂರು ಮಿಲ್ಸಿನಲ್ಲಿ ಇಂಟಕ್ ಮತ್ತು ಮುಂದೆ ಸಿಐಟಿಯು ಮುಖಂಡರಾದವರ ನಡುವೆ ಸಂಘರ್ಷವಿತ್ತು. ಮಿನರ್ವ ಮಿಲ್ಸಿನಲ್ಲಿ ಕೇಂದ್ರ ಕಾರ್ಮಿಕ ಸಂಘಗಳಿಂದ ದೂರವಿದ್ದ ಒಂದು ಸಂಘವಿತ್ತು, 1980ರಲ್ಲಿ ಅದರ ಗುತ್ತೇದಾರಿಕೆ ಮುರಿಯಿತು. ಸುಬ್ರಮಣ್ಯಪುರದ ರಾಮ್ ಕುಮಾರ್ ಮಿಲ್ಲಿನ ಸಂಘ ಭವಿಷ್ಯದ ಸಿಐಟಿಯು ಮುಖಂಡರೊಡನಿತ್ತು. ರೇಶ್ಮೆ ನೇಕಾರರು, ಹೋಟೆಲ್ ಕಾರ್ಮಿಕರು ಭವಿಷ್ಯದ ಸಿಐಟಿಯು ಮುಖಂಡರ ನೇತೃತ್ವದಲ್ಲಿ ಬಲವಾದ, ಹೋರಾಟಗಳು ಅಲ್ಲಲ್ಲಿ ಆಗಾಗ ಭುಗಿಲೆದ್ದವು.

1960ರ ದಶಕದಲ್ಲಿ ಬೆಂಗಳೂರಿನಲ್ಲಿ ಅವಿಭಜಿತ ಎಐಟಿಯುಸಿಯ ಅವಧಿಯಲ್ಲಿ ಮೂಡಿ ಬರುತ್ತಿದ್ದ ಚಿತ್ರ ಹೀಗಿತ್ತು - ಎಐಟಿಯುಸಿಯ ರಾಜಿ ನಿಲುವಿನ ಮುಖಂಡತ್ವ ಪ್ರಾಬಲ್ಯ ಪಡೆದಿತ್ತು, ಅಂಚಿನಲ್ಲಿ ಶಾಮೀಲುಗಾರರು ಬೆಳೆದಿದ್ದರು. ಅಲ್ಲಿ ಸ್ವತಂತ್ರ ಕಾರ್ಮಿಕ ಸಂಘಗಳು ಬೇರು ಬಿಟ್ಟಿದ್ದವು. ಜವಳಿ ಉದ್ದಿಮೆಯಲ್ಲಿ ಇಂಟಕ್ ನ ಅಸ್ತಿತ್ವ ಬಲವಾಗಿತ್ತು. ಅದನ್ನು ಎದುರಿಸಲು ಸಾಧ್ಯವಾದದ್ದು ಭವಿಷ್ಯದ ಸಿಐಟಿಯು ಮುಖಂಡರಿಗೆ. ಎಐಟಿಯುಸಿ ಬಲಶಾಲಿಯಾಗಿದ್ದಲ್ಲಿ ಇಂಟಕ್ ನ ಹೊಸದಾಗಿ ರಚನೆಗೊಂಡ ಕನ್ನಡೇತರ-ವಿರೋಧಿ ಮುಖಂಡತ್ವ ಸ್ಥಳೀಯವಾಗಿ ಭರ್ತಿಯಾಗಿ ಬಂದ ಹೊಸಬರ ನಡುವೆ ಬೇರು ಬಿಡಲು ಸಾಧ್ಯವಾಯಿತು. ಒಂದೇ ಮಾತಿನಲ್ಲಿ ಹೇಳುವುದಾದರೆ ಬೆಂಗಳೂರಿನಲ್ಲಿ ಎಐಟಿಯುಸಿ ಶಾಮೀಲಾಗು... ವಿಭಾಗದ ಕಡೆಗಿತ್ತು.

ಕೆ.ಜಿ.ಎಫ್.ನಲ್ಲಿ -ದ.ಕ.ದಲ್ಲಿ

ಎಐಟಿಯುಸಿಯ ಅತ್ಯಂತ ಬಲಿಷ್ಠ ... ಡಿಯಿದ್ದದ್ದು ಕೆ.ಜಿ.ಎಫ್.ನಲ್ಲಿ. ಅದಕ್ಕೆ ... ಶಾಮೀಲುವಾದಿಗಳಿಗೆ ಅವಕಾಶ ಬಹಳ ಕ... ಯಿತ್ತು. ಆದ್ದರಿಂದ ಅಲ್ಲಿ ಎಐಟಿಯು... ಪ್ರಭಾವ ಮೂರರಲ್ಲಿ ಒಂದು ಗಣಿ... ಅಂದರೆ ಮೈಸೂರು ಗಣಿಯಲ್ಲಿ ಮಾತ್ರ... ಚಾಂಪಿಯನ್ ಗಣಿ ಆರ್.ಪಿ.ಐ. ಮುಖಂ... ಕ್ಷೇತ್ರವಾಗಿತ್ತು. 1960ರ ದಶಕದ ಆರಂಭ... ದಲ್ಲೂ ಅವರು ಎಐಟಿಯುಸಿ ವಿ... ಮುಂಚೂಣಿಯಲ್ಲಿದ್ದವರು. ನಂದಿದುರ್ಗ ... ಯಲ್ಲಿ ಇಂಟಕ್ ನ ಇರವು ಸಾ... ಬಲವಾಗಿತ್ತು. ಹೋರಾಟ ನಿಂತ ಎಐಟಿ... ಸಿಗೆ ವಿಶ್ವಾಸಘಾತ ಮಾಡಿ ಹೋದವನ... ನಿಂದ ಇಂಟಕ್ ಬಲ ಇನ್ನಷ್ಟು ಹೆ... ಒಟ್ಟಿನಲ್ಲಿ ಕೆ.ಜಿ.ಎಫ್.ನಲ್ಲಿ ಕೆಂಬಾವುಟ ಆಂ... ಲನವೆಲ್ಲೆಲ್ಲಾ ಇತ್ತೋ ಅಲೆಲ್ಲಾ ಭ... ಸಿಐಟಿಯು ಮುಖಂಡರ ಹಿಡಿತವಿತ್ತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾ... ವ್ಯಾಪಕವಾದ, ಹೋರಾಟನಿರತ ಆಂದೋ... ನವಿತ್ತು. ಬೀಡಿ, ಹೆಂಚು, ಬಂದರು, ... ನೇಕಾರರು ಇತ್ಯಾದಿ ವಿಭಾಗಗಳ ... ಇತ್ತು. ಒಬ್ಬ ರಾಜಿ ನಿಲುವಿನ ಮುಖ... ಸಾವು ಹಾಗೂ ಬಲಿಷ್ಠ ಹೋರಾಟ...



ಮೇ 19ರ ಕಾಂಗ್ರೆಸ್ ಸಮಾವೇಶದ ಒಂದು ದೃಶ್ಯ

ನಮ್ಮ ಆರ್ಥಿಕ ಸಾರ್ವಭೌಮತೆ ಗಂಡಾಂತರ
ಾಗುತ್ತಿದೆ, ಭಾರತ ಮೆಕ್ಸಿಕೋ ದಾರಿ ಹಿಡಿಯು
ಎಂಬ ಕೂಗು ವಿಚಾರಶೀಲ ಜನರಿಂದ
ಗಿ ಕೇಳಬರುತ್ತಿದೆ...." ಎನ್ನುವ ದಸ್ತಾ
"ಸಾರ್ವಜನಿಕ ವಲಯದ ಶೇರುಗಳ
ಟದಲ್ಲಿ ಸ್ಪಷ್ಟವಾಗಿ ಕಾಣುವ ಮಾರ್ಗದರ್ಶನ
ಳಿಲ್ಲದಿರುವುದು, ಇಂತಹ ಮಾರಾಟದಿಂದ
ಹಣವನ್ನು ಸಾರ್ವಜನಿಕ ವಲಯವನ್ನು
ಿಸಲು ಬಳಸದೇ ಇರುವುದು ಸರಕಾರದ
ದ ನಿಲುವನ್ನು ತೋರಿಸುತ್ತದೆ......" ಎಂದು
ೆ. ಸರಕಾರದ ವಿದೇಶೀ ವಿನಿಮಯದ
ಕೆಯನ್ನು ಟೀಕಿಸುತ್ತಾ "ಈ ಹಣ
ಲು ಬಂಡವಾಳ ಮಾರುಕಟ್ಟೆಯಲ್ಲಿ ತೊಡ
ು ಬರುವಂತದ್ದು, ಅವು ಕನಿಷ್ಠ ಅವಧಿಗಾ
ಇರಬೇಕೆಂಬ ನಿಯಮವೇನಿಲ್ಲ. ಬೇರೆ
ಂದರೆ ವಿದೇಶಗಳಿಂದ ಸಾಲ ಹಾಗೂ ಅನಿ
ಾರತೀಯರ ಠೇವಣಿಗಳು -ಇವೆಲ್ಲಾ ನಾವು
ಹುಟ್ಟಿದ ಹಣದ ಪ್ರವಾಹ ಅಲ್ಲ" ಎಂದು
ೆ. ಬಹುರಾಷ್ಟ್ರೀಯ ಕಂಪೆನಿಗಳ ಮುಕ್ತ
ದ ಬಗ್ಗೆಯೂ ಈ ಸಮಾವೇಶದ ದಸ್ತಾವೇಜು ಶಂಕೆ ವ್ಯಕ್ತಪಡಿಸಿದೆ. "ಭಾರತದ ಆರ್ಥಿಕದ, ನಮ್ಮ ಕೈಗಾರಿಕಾ ಆಧಾರದ ಈಗಿನ ಸ್ಥಿತಿಯಲ್ಲಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಸುಮಾರಾಗಿ ಏನೇನೂ ಅಡೆತಡೆಯಿಲ್ಲದ ಪ್ರವೇಶಕ್ಕೆ ಅವಕಾಶ ಅಗತ್ಯವೇ ಎಂದು ಗಂಭೀರವಾಗಿ ಯೋಚಿಸಬೇಕಾದ ಸಮಯವಿದು" ಎಂದು ಈ ದಸ್ತಾವೇಜು ಹೇಳುತ್ತದೆ.

ಭ್ರಷ್ಟಾಚಾರ ಹಗರಣಗಳ ಅಪರಾಧಿಗಳನ್ನು ಗುರುತಿಸುವಲ್ಲಿನ ವಿಫಲತೆಯನ್ನು ತೀಕ್ಷ್ಣವಾಗಿ ಟೀಕಿಸುತ್ತಾ ಈ ಸಮಾವೇಶದ ದಸ್ತಾವೇಜು "ಸಾರ್ವಜನಿಕ ವಲಯದ ಶೇರುಗಳ ಮಾರಾಟ ಹಾಗೂ ಸಕ್ಕರೆ ಹಗರಣವೂ ಸೇರಿದಂತೆ ಇತ್ತೀಚಿನ ಸಾವಿರಾರು ಕೋಟಿ ರೂ.ಗಳ ಸಾರ್ವಜನಿಕ ಹಣವನ್ನು ನಷ್ಟ ಮಾಡಿದ ಹಗರಣಗಳ ಕಾರಣಗಳ ಆಳವಾದ ವಿಶ್ಲೇಷಣೆ ಹಾಗೂ ಅವುಗಳ ಹೊಣೆಗಾರಿಕೆಯನ್ನು ನಿಗದಿಪಡಿಸುವುದರ ಮೇಲೆ ಒತ್ತು ನೀಡಬೇಕಾದ ಅಗತ್ಯವಿದೆ" ಎಂದಿವೆ.

ರಾಜಕೀಯ ಇಚ್ಛಾ ಶಕ್ತಿಯಿದ್ದಿದ್ದರೆ.....

ಮೇ 19ರ ಸಮಾವೇಶ ಒಂದು

ಪುಟ 7ಕ್ಕೆ

-ವಿ.ಜೆ.ಕೆ. ನಾಯರ್

ಗಳು ಮೂಡಿ ಬಂದದ್ದರಿಂದ ಶಾಮೀಲು
ಳಿಗೆ ಪರಿಸ್ಥಿತಿ ಅನುಕೂಲವಾಗಿರಲಿಲ್ಲ.
ೇಶನ್‌ಗಳಲ್ಲಿ ಆಂದೋಲನವನ್ನು ಶಾಮೀ
ದಿ ವ್ಯಕ್ತಿಗಳಿಂದ ಉಳಿಸಲು ಸಾಧ್ಯವಾ
. ತುರ್ತು ಪರಿಸ್ಥಿತಿಯ ನಂತರದ ಅವಧಿ
ಮಾತ್ರವೇ ಅದು ಸಿಐಟಿಯು ಮುಖಂ
ಯಿಂದ ತಪ್ಪಿಹೋಯಿತು.

ಡೆಗಳಲ್ಲಿ.....

ರಿಹರದಲ್ಲಿ ಸಿಐ
ಸ್ಥಾಪನೆಯಾ
ರೆಗೂ ಶಾಮೀ
ವರ್ಗವೇ
ಲವಾಗಿತ್ತು.
ರಲ್ಲಷ್ಟೇ ಅದು
ಾಟಶೀಲ ಶಕ್ತಿ
ವಾಲು ಎದು
ಈ ಶಕ್ತಿಗಳಿಗೆ
ಶ ಬಿಟ್ಟುಕೊಡ
ಾಯಿತು.
ರಲ್ಲಷ್ಟೇ ಶಾಮೀ
ದಿ ಮಾರ್ಗ ಸಿಐ
ಮುಖಂಡರ
ಪರಾಭವ ಎದುರಿಸಿತು.
ಾವಣಗೆರೆಯಲ್ಲಿ ಪರಸ್ಪರ ವಿರುದ್ಧ ಪ್ರವೃ
ನಡುವೆ ಹೋರಾಟದಲ್ಲಿ ಶಾಮೀಲುವಾ
ಗೂಂಡಾಗಳನ್ನು ಪೋಷಿಸಿ ಭವಿಷ್ಯದ
ು ಮುಖಂಡರು ಹಾಗೂ ಅವರ
ಗರ ಮೇಲೆ ಭಯೋತ್ಪಾದನೆ ಹರಿಯಬಿ
ತಮ್ಮ ಮುಖಂಡರನ್ನು ಕ್ರಿಮಿನಲ್
ಿಂದ ಹಿಡಿದಿಡಲಾಗಿದೆ ಎಂಬ ಸುದ್ದಿ ಕೇಳಿ ಕ್ರುದ್ಧರಾದ ಕಾರ್ಮಿಕರಿಂದ ದುರದೃಷ್ಟವಶಾತ್ ಶಾಮೀಲುವಾದಿಗಳ ಇಬ್ಬರು ಮುಖಂಡರು ಕೊಲೆಯಾದಾಗ ಅವರು ಸಂಪೂರ್ಣ ಭಯೋತ್ಪಾದನೆ ಹರಿಯಬಿಟ್ಟು ನಂತರ ಸಿಐಟಿಯು ಬೆಂಬಲಿಗರಾದವರನ್ನು ಸಂಪೂರ್ಣವಾಗಿ ಹೊರದೂಡಿದರು.

ಹುಬ್ಬಳ್ಳಿ-ಧಾರವಾಡ ಹಾಗೂ ಬೆಳಗಾವಿಯಲ್ಲಿ ತುರ್ತು ಪರಿಸ್ಥಿತಿಯ ನಂತರದ ಅವಧಿಯವರೆಗೂ ಶಾಮೀಲುವಾದಿಗಳ ಪ್ರಾಬಲ್ಯವಿತ್ತು.

> **ಒಟ್ಟಾರೆಯಾಗಿ ನಮ್ಮ ರಾಜ್ಯದಲ್ಲಿ ಎಐಟಿಯುಸಿಯೊಳಗೆ ಶಾಮೀಲುವಾದಿಗಳು ಹಾಗೂ ಹೋರಾಟಶೀಲರ ನಡುವಿನ ಸಂಘರ್ಷ ಎಐಟಿಯುಸಿಯ ಇಬ್ಭಾಗದ ಮೊದಲು ಹಾಗೂ ಇಬ್ಭಾಗವಾದ ಕೂಡಲೇ ಹೆಚ್ಚು ಕಡಿಮೆ ಮುಖಂಡರ ಮಟ್ಟದಲ್ಲೇ ನಡೆಯಿತು. ನಂತರವಷ್ಟೇ ಅದು ಶಾಮೀಲುವಾದಿ ಮಾರ್ಗದ ವಿರುದ್ಧ ಮತ್ತು ಪರವಾಗಿ ದುಡಿಯುವ ಜನಗಳ ಹೋರಾಟವಾಗಿ ಮೂಡಿ ಬಂತು.**

ಬಿಜಾಪುರ, ಬಾಗಲಕೋಟೆ ಹಾಗೂ ನರಗುಂದಗಳಲ್ಲಿ ಸ್ಥಿತಿ ತದ್ವಿರುದ್ಧವಾಗಿತ್ತು. ಅಂದರೆ ಬೇರೆಡೆ ಸಿಐಟಿಯು ಪ್ರಭಾವ ಹೆಚ್ಚುತ್ತಿದ್ದಾಗ ಅಲ್ಲಿ ಸಿಐಟಿಯು ಪ್ರಭಾವ ಇಳಿಮುಖವಾಯಿತು. ಆದರೆ ಎಐಟಿಯುಸಿ ಇಬ್ಭಾಗವಾದಾಗ ಅಲ್ಲಿದ್ದ ಯೂನಿಯನ್ ಗಳು ನಂತರದ ಸಿಐಟಿಯು ಮುಖಂಡರ ಹಿಡಿತದಲ್ಲಿದ್ದವು ಎಂಬುದನ್ನು ಗಮನಿಸಬೇಕು.

ಗುಲ್ಬರ್ಗಾದಲ್ಲಿ ಹೋರಾಟದ ಮಾರ್ಗವನ್ನು ಇಬ್ಭಾಗದ ಒಂದು ದಶಕದ ಮೊದಲೇ ಪ್ರತಿಪಾದಿಸಲಾಗಿತ್ತು, ನಂತರ ಸಿಐಟಿಯು ಮುಖಂಡರಾದವರು ಎಂ.ಎಸ್.ಕೆ.ಮಿಲ್ ಕಾರ್ಮಿಕರ ಬೇಡಿಕೆಯ ಮೇಲೆ ನಡೆಸಿದ ಒಂದು ತಿಂಗಳ ಉಪವಾಸ ಮುಷ್ಕರ ಇಡೀ ನಗರದಲ್ಲಿ ವಿದ್ಯುತ್-ಸಂಚಾರವಾಗುವಂತೆ ಮಾಡಿತು. ಪರಿಗಾ

ಪುಟ 6ಕ್ಕೆ

ಬರಲಿವೆ ಉಪವಾಸದ ದಿನಗಳು(?)

ಭಾರತದ ಕೃಷಿ ವಲಯದಲ್ಲಿ ಉತ್ಪಾದನೆ ನಿಂತ ನೀರಾಗಿದೆ. 'ಹಸಿರು ಕ್ರಾಂತಿ'ಯ ನಂತರದಲ್ಲಿ ಉತ್ಪಾದನೆಯಲ್ಲಿ ಹೇಳಿಕೊಳ್ಳುವಂತಹ ಹೆಚ್ಚಳವೇನೂ ಆಗಿಲ್ಲ. ಕೃಷಿ ಉತ್ಪಾದನೆಯ ಬೆಳವಣಿಗೆಯ ಪ್ರಮಾಣ ತೀವ್ರ ಕಡಿಮೆಯಾಗುತ್ತಿದೆ. ಆದರೆ ಜನಸಂಖ್ಯೆಯ ಬೆಳವಣಿಗೆ ಹೆಚ್ಚುತ್ತಲೇ ಇದೆ.

ಜಗತ್ತಿನ ಇತರ ದೇಶಗಳೊಂದಿಗೆ ಭಾರತದ ಕೃಷಿ ವಲಯವನ್ನು ಹೋಲಿಸಿದರೆ ಹೇಗಿರುತ್ತದೆ?

ಏಶಿಯಾಖಂಡ ಮತ್ತು ಶಾಂತಿಸಾಗರದ ಸುತ್ತಲಿನ ಪ್ರದೇಶಗಳನ್ನು ಗಣನೆಗೆ ತೆಗೆದುಕೊಂಡರೆ ಈ ಪ್ರದೇಶದಲ್ಲಿ ಕೃಷಿ ಉತ್ಪಾದನೆಯ ಬೆಳವಣಿಗೆಯ ಪ್ರಮಾಣ ಶೇ 3.1 ರಷ್ಟಿದ್ದರೆ ಭಾರತದ್ದು ಬರೀ ಶೇ. 2.3 ರಷ್ಟು. ಈ ಪ್ರದೇಶದಲ್ಲಿ ಬಾಂಗ್ಲಾದೇಶ ಮಾತ್ರ ಭಾರತದಷ್ಟು ಹಿಂದುಳಿದಿರುವುದು. ಅಭಿವೃದ್ಧಿಶೀಲ ದೇಶಗಳಾದ ಚೀನಾ, ಫಿಲಿಪ್ಪೀನ್ಸ್, ಪಾಕಿಸ್ತಾನ, ಶ್ರೀಲಂಕಾ, ಥಾಯ್‌ಲ್ಯಾಂಡ್ ಮ್ಯಾನ್ಮರ್ ಇವೆಲ್ಲ ಭಾರತಕ್ಕಿಂತ ಉತ್ತಮ ಅಭಿವೃದ್ಧಿ ಪ್ರಮಾಣ ಹೊಂದಿವೆ.

ಭತ್ತದ ಬೆಳೆಯನ್ನು ತೆಗೆದುಕೊಂಡರೆ ಈ ಪ್ರದೇಶದಲ್ಲಿ ಉತ್ಪಾದನೆಯ ಬೆಳವಣಿಗೆ ಶೇ. 6.1 ರಷ್ಟಿದ್ದರೆ ಭಾರತದ್ದು ಬರೀ ಶೇ. 5.2 ರಷ್ಟು. ಒರಟು ಧಾನ್ಯಗಳ ಹೆಕ್ಟೇರುವಾರು ಉತ್ಪಾದನೆ ತೆಗೆದುಕೊಂಡರೆ ಈ ಪ್ರದೇಶದ್ದು ಪ್ರತಿ ಹೆಕ್ಟೇರಿಗೆ 1508 ಕಿ.ಲೋ ಗ್ರಾಂಗಳಿದ್ದರೆ ಭಾರತದ್ದು ಪ್ರತಿ ಹೆಕ್ಟೇರಿಗೆ ಬರೀ 701 ಕಿ.ಲೋ ಗ್ರಾಮ್ ಗಳು

ಕಳೆದ ಕೆಲವು ವರ್ಷಗಳಲ್ಲಿ ಒಳ್ಳೆಯ ಮಳೆ ಆಗುತ್ತಿದೆ. ಆದರೆ ಕೃಷಿ ಉತ್ಪಾದನೆಯ ಪ್ರಮಾಣವೇನೂ ಅಗಾಧವಾಗಿ ಹೆಚ್ಚಾಗಿಲ್ಲ. ತಜ್ಞರ ಪ್ರಕಾರ 1997ರ ಹೊತ್ತಿಗೆ ನಮ್ಮ ಜನಸಂಖ್ಯೆಗೆ ಸಾಕಾಗುವಷ್ಟು ಆಹಾರ ಉತ್ಪಾದನೆ ಆಗಬೇಕಾಗಿದ್ದರೆ 208 ದಶಲಕ್ಷ ಟನ್ನುಗಳಷ್ಟು ಉತ್ಪಾದನೆ ಆಗಬೇಕು. ಈಗಿನ ಉತ್ಪಾದನೆ 180 ದಶಲಕ್ಷ ಟನ್ನುಗಳು ಮಾತ್ರ ಅಂದರೆ 28 ದಶಲಕ್ಷ ಟನ್ನುಗಳಷ್ಟು ಉತ್ಪಾದನೆ ಹೆಚ್ಚಬೇಕು.

ಭಾರತದ ಸದ್ಯದ ಸ್ಥಿತಿ ನೋಡಿದರೆ ಈ ಸಾಧನೇ ಸಾಧ್ಯವೇ ಇಲ್ಲ. ಉತ್ತರ ಪ್ರದೇಶ, ಹರ್ಯಾಣ, ಮಧ್ಯಪ್ರದೇಶ ಪಂಜಾಬ್ ಮತ್ತು ಪ.ಬಂಗಾಳ ರಾಜ್ಯಗಳಲ್ಲಿ ಉತ್ಪಾದನೆಯ ಹೆಚ್ಚಳ ಶೇ. ೩ ರಿಂದ ಶೇ. ೫.೧ರಷ್ಟಿದೆ. ಉಳಿದ ರಾಜ್ಯಗಳಲ್ಲಿ ತೀರ ಕಡಿಮೆ ಪ್ರಮಾಣದ ಹೆಚ್ಚಳ ಅಥವಾ ಉತ್ಪಾದನೆಯಲ್ಲಿ ಕುಸಿತವಿದೆ.

ಅಂದರೆ ಅವಶ್ಯವಿರುವ ಪ್ರಮಾಣದಲ್ಲಿ ಉತ್ಪಾದನೆಯ ಹೆಚ್ಚಳ ಸಾಧ್ಯವೇ ಇಲ್ಲ. ಇದರಿಂದ ಅಪಾರ ಪ್ರಮಾಣದ ಜನತೆ ಉಪವಾಸವಿರಬೇಕಾಗುತ್ತದೆ. ಈಗಲೂ ಜನ ಉಪವಾಸ ಸಾಯುತ್ತಿಲ್ಲವೆಂದಲ್ಲ. ಉತ್ಪಾದನೆ ಆದರೂ ಜನರಿಗೆ ದೊರೆಯದ ಪರಿಸ್ಥಿತಿ ಆಗಲೇ ಇದೆ.

ಈಗ ಬಂದಿರುವ ಉದಾರೀಕರಣ ಪರಿಸ್ಥಿತಿಯನ್ನು ಇನ್ನೂ ಹೀನ ಸ್ಥಿತಿಗೆ ಕೊಂಡೊಯ್ಯಲಿದೆ.

ವಿಶ್ವ ಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆ ಈ ವಿವರಗಳನ್ನು ನೀಡಿ ಈ ಕಾಳಜಿ ವ್ಯಕ್ತಪಡಿಸಿದೆ. ನರಸಿಂಹರಾಯರ ಸರ್ಕಾರಕ್ಕೆ ಆ ಕಾಳಜಿಯಿಲ್ಲ. ಆರ್ಥಿಕ ಅಭಿವೃದ್ಧಿ ಸಾಧಿಸಿ ಆಹಾರ ಧಾನ್ಯವನ್ನೂ ಬೇಕಾದರೆ ಆಮದು ಮಾಡಿಕೊಳ್ಳುತ್ತೇವೆ ಎಂಬ ಬೊಗಳೆ ಬಿಡುತ್ತಿದ್ದಾರೆ ಅವರು.

ಹೆಣ್ಣು ಮಕ್ಕಳ ರಫ್ತು

ತಾಯಿ, ಅಕ್ಕತಂಗಿಯರ ರಫ್ತು ಮಾಡಬಹುದೆ? ಉದಾರೀಕರಣ ಅದನ್ನು ಸಾಧ್ಯಗೊಳಿಸುತ್ತದೆ. ರಫ್ತು ಅಭಿವೃದ್ಧಿ ಮಂಡಳಿಯೊಂದು ಮನೆಕೆಲಸಕ್ಕೆ 75000 ಮಹಿಳೆಯರನ್ನು ಸಿಂಗಾಪೂರಿಗೆ ರಫ್ತು ಮಾಡಲಿದೆಯಂತೆ ಯಾಕೆ? ಅಲ್ಲಿ ಕೆಲಸದವರು ಸಿಕ್ಕುವುದಿಲ್ಲವೆ?

ಈವರೆಗೆ ಫಿಲಿಪೈನ್ ದೇಶದ ಮಹಿಳೆಯರು ಸಿಂಗಾಪುರದಲ್ಲಿ ಕೆಲಸ ಮಾಡುತ್ತಿದ್ದರು. ಒಬ್ಬ ಕೆಲಸದವಳು ಎರಡು ಕೊಲೆ ಮಾಡಿದ ಆರೋಪಕ್ಕೊಳಗಾದಳು. ಸರಿಯಾದ ನ್ಯಾಯಾಂಗ ವಿಚಾರಣೆ ಆಗಲಿಲ್ಲ. ಆ ಮಹಿಳೆಗೆ ಗಲ್ಲು ಶಿಕ್ಷೆ ವಿಧಿಸಲಾಯಿತು. ಫಿಲಿಪೈನ್ ಸರ್ಕಾರ ಇದರಿಂದ ಸಿಟ್ಟಿಗೆದ್ದು ತಮ್ಮ ದೇಶದ ಎಲ್ಲಾ ಕೆಲಸಗಾರ್ತಿಯರನ್ನು ತಮ್ಮ ದೇಶಕ್ಕೆ ವಾಪಸ್ಸು ಕರೆದುಕೊಂಡಿತು.

ಈಗ ಈ ರೀತಿ ಖಾಲಿ ಬಿದ್ದಿರುವ ಸ್ಥಾನಗಳಿಗೆ ರಫ್ತಾಗಲಿರುವವರು ನಮ್ಮ ದೇಶದ ಮಹಿಳೆಯರು. ಇವರನ್ನು ಆ ದೇಶದಲ್ಲಿ ದುರುಪಯೋಗಪಡಿಸಿಕೊಂಡರೆ? ಫಿಲಿಪೈನ್ಸ್ ದೇಶ ಪ್ರತಿಭಟಿಸುತ್ತಿರುವಾಗ ಆ ಪ್ರತಿಭಟನೆಯ ಕಾವನ್ನೇ ತಣಿಸಹೊರಡುವುದು ಸರಿಯೆ? ಈ ಪ್ರಶ್ನೆಗಳನ್ನು ಎತ್ತಿದವರು ಸಿಪಿಐ(ಎಂ) ಸದಸ್ಯ ಹಾಗೂ ಖ್ಯಾತ ಅರ್ಥಶಾಸ್ತ್ರಜ್ಞ ಡಾ. ಅಶೋಕ್ ಮಿತ್ರ. ಉದಾರೀಕರಣದ ನರಸಿಂಹರಾಯರ ಸರ್ಕಾರ ಈ ಪ್ರಶ್ನೆಗಳನ್ನು ಯೋಚಿಸಿರಲಿಕ್ಕಿಲ್ಲ. ಯಾಕೆಂದರೆ ನಮ್ಮದು ಉದಾರ ಆರ್ಥಿಕ ನೀತಿಯಲ್ಲವೆ?

ಶ್ರೀಮಂತರ ಸಮಾನತೆ

ಇದು ಉದಾರೀಕರಣದ ಒಂದು ತಂತ್ರ. ಬಡವರು ಮತ್ತು ದುರ್ಬಲ ವರ್ಗಗಳಿಗಾಗಿ ಇರುವ ಯೋಜನೆಗಳನ್ನು ಉದಾರೀಕರಿಸಿ ಯೋಜನೆಗಳ ಲಾಭ ಎಲ್ಲರಿಗೂ ಸಿಗುವಂತೆ ಮಾಡುವುದು ಇದರಿಂದ ಶ್ರೀಮಂತರಿಗೇ ಹೆಚ್ಚಿನ ಲಾಭ ಹೋಗುತ್ತದೆ. ಉದಾರೀಕರಣದ ಉದ್ದೇಶವೇ ಇದು ತಾನೆ?

ಹನಿ ನೀರಾವರಿ ಅಳವಡಿಸಿಕೊಳ್ಳುವ ರೈತರಿಗೆ ಸರ್ಕಾರ ಸಹಾಯಧನ ನೀಡುತ್ತದೆ. (ಕೇಂದ್ರ ಸರ್ಕಾರ) 1994-95ರವರೆಗೆ ಒಬ್ಬ ರೈತನಿಗೆ ಒಂದು ಹೆಕ್ಟೇರಿನಷ್ಟು (ಅಂದರೆ ಎರಡೂವರೆ ಎಕರೆಗಳಷ್ಟು) ಜಮೀನಿಗೆ ಹನಿ ನೀರಾವರಿ ಅಳವಡಿಸಿಕೊಳ್ಳಲು ಮಾತ್ರ ಸಹಾಯಧನ ದೊರೆಯುತ್ತಿತ್ತು. ಈಗ ಈ ಮಿತಿಯನ್ನು ತೆಗೆದು ಹಾಕಲಾಗಿದೆ. ರೈತ ತನ್ನಲ್ಲಿರುವ ಎಲ್ಲ ಜಮೀನಿಗೆ ಹನಿ ನೀರಾವರಿ ಅಳವಡಿಸಿಕೊಂಡರೂ ಆ ಪೂರ್ತಿ ಜಮೀನಿಗೂ ಸಹಾಯಧನ ದೊರೆಯುತ್ತದೆ.

ಇದರ ಮರ್ಮ ಏನು? ಇದರ ಮರ್ಮ. ಶ್ರೀಮಂತ ರೈತರಿಗೆ ಹೆಚ್ಚಿನ ಸಹಾಯಧನ ನೀಡುವುದು. ಎರಡೂವರೆ ಎಕರೆಯ ಮಿತಿಯೆಂದರೆ ಹೆಚ್ಚಾಗಿ ಸಣ್ಣ ರೈತರಿಗೆ ತಮ್ಮ ಪೂರ್ತಿ ಜಮೀನಿಗೆ ಹನಿ ನೀರಾವರಿ ಅಳವಡಿಸಿಕೊಂಡರೂ ಸಹಾಯಧನ ದೊರೆಯುತ್ತಿತ್ತು. ಈಗ ಎಲ್ಲ ರೈತರಿಗೆ ಎಷ್ಟು ಜಮೀನಿಗೆ ಹನಿ ನೀರಾವರಿ ಅಳವಡಿಸಿಕೊಂಡರೂ ಸಹಾಯಧನ ದೊರೆಯುತ್ತದೆಂದರೆ ಹೆಚ್ಚೆಚ್ಚು ಜಮೀನಿದ್ದು ಹನಿ ನೀರಾವರಿ ಅಳವಡಿಸಿ ಕೊಂಡರೆ ಅಷ್ಟು ಹೆಚ್ಚು ಸಹಾಯಧನ ದೊರೆಯುತ್ತದೆ.

ಬಡವರಿಗೆ ಹೆಚ್ಚು ಸಹಾಯಧನ ಪಡೆಯಲು ಅಷ್ಟು ಜಮೀನೇ ಇರುವುದಿಲ್ಲವಲ್ಲ, ಕೃಷಿ ನೀರಾವರಿಯಲ್ಲಿ ಹಣ ಹೂಡಿಕೆಯಾಗುತ್ತದೆಂಬುದು ನಿಜ. ಆದರೆ ಈಗಿನ ಸಂದರ್ಭದಲ್ಲಿ ಬಡರೈತರಲ್ಲಿ ಹಲವರಿಗೆ ಸಹಾಯಧನ ದೊರೆಯದೇ ಹೋದರೂ ಹೋಗಬಹುದು.



ಧಣಿಯ ಎಚ್ಚರಿಕೆ

ಭಾರತಕ್ಕೆ ಇನ್ಯಾರು ಧಣಿ ಐ.ಎಂ.ಎಫ್. ಐ.ಎಂ.ಎಫ್.ನ ಮುಖ್ಯಸ್ಥ ಮೈಕೆಲ್ ಕ್ಯಾಮ್‌ಡೆಸ್ಸಸ್ ಇಂತಹ ಎಚ್ಚರಿಕೆ ನೀಡಿದ್ದಾನೆ. ಮುಂಬರುವ ದಿನಗಳು ಕಷ್ಟಕರವಾಗಬಹುದೆಂದೂ ಅಂದರೆ ಇಲ್ಲಿಯವರಿಗೆ ಸುಖಕರವಾದ ದಿನಗಳಿದ್ದವೆ? ನಮಗೆ ಗೊತ್ತಿರುವಂತೆ ಇಲ್ಲ, ಅಂದರೆ ಇನ್ನು ಹೆಚ್ಚಿನ ಕಷ್ಟದ ದಿನಗಳು ಬರಲಿವೆಯಂತೆ.

ಮುಖ್ಯವಾಗಿ ಅಭಿವೃದ್ಧಿಶೀಲ ದೇಶಗಳಲ್ಲಿ ಬೆಳೆಯುತ್ತಿರುವ ಮಾರುಕಟ್ಟೆಗಳಿಗೆ ಹೆಚ್ಚಿನ ಬಂಡವಾಳ ಹರಿದು ಬರಲಿಕ್ಕಿಲ್ಲ ಎನ್ನುವುದೇ ಈ ಎಚ್ಚರಿಕೆಯ ಹಿನ್ನೆಲೆ. ಐ.ಎಂ.ಎಫ್.ನ ಪ್ರಕಾರ 1990ರ ದಶಕದ ಬಂಡವಾಳದ ಹರಿಯುವಿಕೆ ನಿಧಾನವಾಗುವುದರಿಂದ ತತ್ತರಿಸಬಹುದು.

ಇದಲ್ಲದೆ ಇನ್ನೊಂದು ತೊಂದರೆಯೂ ಇದೆ. ಈ ಅಭಿವೃದ್ಧಿ ದೇಶಗಳಲ್ಲಿ ಒಂದೆರಡು ದೇಶಗಳಲ್ಲಿ (ಮೆಕ್ಸಿಕೋದಂತೆ?) ತೀವ್ರ ಹಣ ಕಾಸು ಬಿಕ್ಕಟ್ಟು ತಲೆದೋರಬಹುದು. (ಭಾರತ ದೇಶ ಇವುಗಳಲ್ಲಿ ಒಂದೆ?)

ಬಹುಶಃ ಬಂಡವಾಳಶಾಹಿ ಪದ್ಧತಿಯ ದುಷ್ಪರಿಣಾಮಗಳ ಅರಿವನ್ನು ಇದು ಚೆನ್ನಾಗಿ ಮಾಡಿಸುತ್ತದೆಯೆ? ಯಾರು ಇದಕ್ಕೆ ಬೆಲೆ ತೆರುವವರು?

ಸಾವು ನೋವಿನ ಬೆಲೆ ಕಡಿಮೆಯಾಗಲಿದೆ!!

ಇದೇನು ಮಾತು ಎಂದಿರೆ? ಮೇಲೋಟಕ್ಕೆ ಇದು ಅರ್ಥವಾಗದ್ದು ಸರಿ. ಆದರೆ ಸ್ವಲ್ಪ ಆಳಕ್ಕೆ ಇಳಿದರೆ ಅರ್ಥವಾಗುತ್ತದೆ. ನೇರವಾಗಿ ಹೇಳುವುದಾದರೆ ವಿಷಯ ಇದು ಜೀವ ಉಳಿಸಲು ಅವಶ್ಯಕವಾದ ಔಷಧಿಗಳ ಬೆಲೆ ತೀವ್ರವಾಗಿ ಏರಲಿದೆಯಂತೆ? ತೀವ್ರವಾಗಿ ಎಂದರೆ?

ಸುಮಾರು ಈಗಿನ ಬೆಲೆಗಿಂತ ಮೂರರಿಂದ ಐವತ್ತು ಪಟ್ಟಿನಷ್ಟು ಬೆಲೆ ಹೆಚ್ಚಾಗುವುದಂತೆ. ಇದನ್ನು 'ಭಾರತೀಯ ಔಷಧಿ ಉತ್ಪಾದಕರ ಸಂಘಟನೆ ಹೇಳಿದೆ? ಯಾಕೆ? ಇದು ವಿಶ್ವ ವ್ಯಾಪಾರ ಸಂಘಟನೆ ನಿಗಧಿಪಡಿಸಿರುವ ಪೇಟೆಂಟ್ ವ್ಯವಸ್ಥೆಯ ಕೃಪೆ. ಯಾವ್ಯಾವ ಜೀವ ಉಳಿಸುವ ಔಷಧಿಗಳ ಬೆಲೆ ಎಷ್ಟೆಷ್ಟು ಹೆಚ್ಚಾಗುತ್ತದೆ ಎಂಬುದನ್ನೂ ಅದು ಹೇಳಿದೆ.

ಔಷಧಿಗಳ ಬೆಲೆ ಹೀಗೆ ಹೆಚ್ಚಾದರೆ ಏನಾಗುತ್ತದೆ? ರೋಗಿ ಔಷಧಿ ತೆಗೆದುಕೊಳ್ಳುವಷ್ಟು ಶ್ರೀಮಂತನಾಗಿರಬೇಕು. ಇಲ್ಲವೆ ಔಷಧಿ ತೆಗೆದುಕೊಳ್ಳದೆ ಸಾವುನೋವುಗಳನ್ನು ಅನುಭವಿಸಬೇಕು.

ಸಾವು/ನೋವಿನ ಬೆಲೆ ಕಡಿಮೆ ಆದಂತೆ ಆಗಲಿಲ್ಲವೆ?



ವಿಶ್ವ

ಬೆಂದು ಹೋದವು ಕನಸು ಹೊತ್ತ ಜೀವಗಳು

ಅವರೆಲ್ಲ ದೂರದ ತಮಿಳುನಾಡು, ಕೇರಳ ಮತ್ತು ಬಿಹಾರಗಳಿಂದ ಬಂದಿದ್ದರು. ಹೊಟ್ಟೆಪಾಡಿಗಾಗಿ ತಮ್ಮ ಹೊಟ್ಟೆಗಿಷ್ಟು ಹಿಟ್ಟು ಹಾಕಿಕೊಂಡು ಊರುಗಳಲ್ಲಿರುವ ಪೋಷಕರಿಗೆ ಅಷ್ಟಿಷ್ಟು ಹಣವನ್ನು ಕಳಿಸಿಕೊಡುವುದು ಅವರ ಕನಸು.

ಅದಕ್ಕಾಗಿ ಅವರು, ಸಾಮಾನ್ಯವಾಗಿ ಸಂತೋಷದ ಸಂದರ್ಭಗಳನ್ನು ಆಚರಿಸುವ ವೇಳೆಯಲ್ಲಿ ಬಳಸುವ ಪಟಾಕಿ ಕಾರ್ಖಾನೆಯಲ್ಲಿ ದುಡಿಯುತ್ತಿದ್ದರು. ಆದರೆ ಈ ಕಾರ್ಖಾನೆಯಲ್ಲಿ ಭುಗಿಲೆದ್ದ ಬೆಂಕಿ ಅನಾಹುತದಿಂದ ಇವರ ಕನಸುಗಳು ಮಾತ್ರವಲ್ಲ; ಕನಸು ಕಂಡ ಎಷ್ಟೋ ಜೀವಗಳೇ ಬೆಂದು ಹೋದವು!

ಹರ್ಯಾಣದ ರೋಹ್ಟಕ್‌ನಲ್ಲಿ ಏಪ್ರಿಲ್ 24 ರಂದು ಪಟಾಕಿ ಕಾರ್ಖಾನೆಯೊಂದರಲ್ಲಿ ಭೀಕರ ಅಗ್ನಿ ದುರಂತ ಸಂಭವಿಸಿ 23 ಜನರು ಸತ್ತರು ಮೃತಪಟ್ಟವರಲ್ಲಿ 13 ಮಹಿಳೆಯರು ಮತ್ತು ನಾಲ್ಕು ಮಕ್ಕಳು ಸೇರಿದ್ದಾರೆ.

ಇದು ಒಂದು ಅಗ್ನಿ ದುರಂತದ ಪ್ರಶ್ನೆಯಲ್ಲ, ದೇಶದ ಹಲವು ಭಾಗಗಳಿಂದ ಆಗಾಗ ಇಂಥ ಪ್ರಕರಣಗಳು ವರದಿಯಾಗುತ್ತಲೇ ಇರುತ್ತವೆ. ಕಾರ್ಖಾನೆಗಳ ಮಾಲಿಕರ ಹಣ ಮಾಡುವ ಮರಾಚೆ ಇಂಥ ಅನಾಹುತಗಳಿಗೆ ಪ್ರಮುಖ ಕಾರಣವಾಗಿದೆ.

ಕಡಿಮೆ ಬಂಡವಾಳದಿಂದ ಹೆಚ್ಚು ದುಡಿವ ಮುಚ್ಚು ಹಿಡಿದ ಧೂರ್ತರು ತಮ್ಮ ಕಾರ್ಖಾನೆಗಳಲ್ಲಿ ಸರಿಯಾದ ಸುರಕ್ಷತೆ ಕ್ರಮಗಳನ್ನು ಕೈಗೊಳ್ಳುವುದಿಲ್ಲ.

ನಿಯಮಗಳನ್ನು ಅನುಸರಿಸುವುದಿಲ್ಲ. ಲಂಚದ ಹಣ ಆಶೆಗೆ ಬಲಿಬಿದ್ದ ಅಧಿಕಾರಿಗಳು ಮಾಲಿಕರ ಮರ್ಜಿಗೆ ಒಳಗಾಗಿ ನೀತಿ ನಿಯಮಗಳನ್ನು ಗಾಳಿಗೆ ತೂರಿ ಇಂಥ ಕಾರ್ಖಾನೆಗಳ ಸ್ಥಾಪನೆಗೆ ಅನುಮತಿ ಕೊಡುತ್ತಾರೆ; ನವೀಕರಣ ಮಾಡುತ್ತಲೇ ಹೋಗುತ್ತಾರೆ, ಸರಕಾರವೂ ಇದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ.

ಇದೊಂದು ಹೇಯ ಮೈತ್ರಿ ಕೂಟ ಇದಕ್ಕೆ ಅಂತಿಮವಾಗಿ ಬಲಿಯಾಗುವವರು ಮುಗ್ಧ ದುಡಿಮೆಗಾರರು.

ರೋಹ್ಟಕನ ಈ 25 ವರ್ಷಗಳಷ್ಟು ಹಳೆಯದಾದ ಕೃಷ್ಣ ಸುಡುಮದ್ದು ಫ್ಯಾಕ್ಟರಿ ಎಲ್ಲಾ ನಿಯಮಗಳನ್ನು ಉಲ್ಲಂಘಿಸಿದ್ದು ಸ್ಪಷ್ಟವಾಗಿದೆ. ಆದರೂ ಯಾವುದೇ ಪರಿಶೀಲನೆ ನಡೆಸದೆ ಮಾಮಾಲಿನಂತೆ ಅದರ ಲೈಸೆನ್ಸ್‌ನ್ನು ನವೀಕರಿಸಲಾಗುತ್ತಿತ್ತು. ಇದೆಲ್ಲ 23 ಜೀವಗಳು ಬಲಿಯಾದ ನಂತರ ಹೊರಬಂದಿದೆ.

ಈಗ ಕಾರ್ಖಾನೆಯ ಲೈಸೆನ್ಸನ್ನು ರದ್ದುಪಡಿಸಲಾಗಿದೆ. ಅದರ ಮಾಲಿಕರನ್ನು ಪೋಲೀಸರು ಬಂಧಿಸಿದ್ದಾರೆ.

ಮಹಿಳಾ ಸಂಘಟನೆ ನಿಯೋಗದ ಭೇಟಿ

ಆಘಾತಕರ ಸುದ್ದಿ ತಲುಪುತ್ತಿದ್ದಂತೆ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ (ಎ.ಐ.ಡಿ.ಡಬ್ಲ್ಯು.ಎ.) ನಿಯೋಗವೊಂದು ರೋಹ್ಟಕ್‌ಗೆ ತೆರಳಿತು.

ಸಂಘಟನೆಯ ಅಧ್ಯಕ್ಷೆ ಹಾಗೂ ಸಂಸತ್ ಸದಸ್ಯೆ ಸುಶೀಲಾ ಗೋಪಾಲನ್ ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ಮತ್ತು ಹರ್ಯಾಣ ರಾಜ್ಯ ಘಟಕದ ಕಾರ್ಯದರ್ಶಿ ಜಗಮತಿ ಸಾಂಗ್ವನ ನಿಯೋಗದಲ್ಲಿದ್ದರು.

ಅವರು ಫ್ಯಾಕ್ಟರಿ ಮತ್ತು ದುರಂತದಲ್ಲಿ ಮಡಿದವರ ಕುಟುಂಬಗಳು ಹಾಗೂ ಗಾಯಗೊಂಡವರನ್ನು ಭೇಟಿ ಮಾಡಿದರು.

ಈ ಕಾರ್ಖಾನೆ ಪ್ರತಿಯೊಂದು ಕಾನೂನು ನಿಯಮವನ್ನು ಉಲ್ಲಂಘಿಸಿತ್ತು. ಆದರೂ ಅದರ ಲೈಸೆನ್ಸನ್ನು ನವೀಕರಿಸಲಾಗಿತ್ತು ಎಂದು ಸಂಘಟನೆ ತಿಳಿಸಿದೆ. ದುರಂತದ ಬಗ್ಗೆ ನಿರ್ದಿಷ್ಟ ಅವಧಿಯೊಳಗೆ ನ್ಯಾಯಾಂಗ ತನಿಖೆಯನ್ನು ನಡೆಸಬೇಕೆಂದು ಅದು ಒತ್ತಾಯಿಸಿದೆ. ಈ ಸಂಬಂಧ ನಿಯೋಗ ಹರ್ಯಾಣದ ಗೃಹ ಸಚಿವರಿಗೆ ಒಂದು ಮನವಿ ಪತ್ರವನ್ನು ಸಲ್ಲಿಸಿದೆ.

ಈ ಕಾರ್ಖಾನೆಯ ಬಹಳಷ್ಟು ಕಾರ್ಮಿಕರು ಜೀತದಾಳುಗಳಾಗಿದ್ದರು. ಅವರಲ್ಲಿ ಅನೇಕರು ತಮಿಳುನಾಡಿನ ಶಿವಕಾಶಿಯಿಂದ ಬಂದವರಾಗಿದ್ದಾರೆ.

ಒಂದು ವರ್ಷದ ಒಪ್ಪಂದದ ಮೇರೆಗೆ ಒಂದರಿಂದ ಎರಡು ಸಾವಿರ ರೂಪಾಯಿ ಮುಂಗಡ ಹಣ ಕೊಟ್ಟು ಬಾಲ ಕಾರ್ಮಿಕರ ಸಹಿತ ಕಾರ್ಮಿಕರನ್ನು ಕರೆಸಿಕೊಳ್ಳಲಾಗಿತ್ತು. ಅವರಿಗೆ 15 ದಿನಕ್ಕೊಮ್ಮೆ ಮಾತ್ರ ಊಟಕ್ಕೆಂದು ಒಂದಿಷ್ಟು ಹಣವನ್ನು ಕೊಡಲಾಗುತ್ತಿತ್ತು ಎಂದು ಎ.ಐ.ಡಿ.ಡಬ್ಲ್ಯು.ಎ. ಆರೋಪಿಸಿದೆ.

ಕಾರ್ಮಿಕರ ಮುಕ್ತಿ

ದಲಿತರ ಮೇಲೆ ಹರ್ಯಾಣ ಪೋಲೀಸ್ ದೌರ್ಜನ್ಯ

-ಪ್ರಕರಣ ಒಂದು

ಹರ್ಯಾಣ ರಾಜ್ಯ ಸೋನೆಪತ್ ಜಿಲ್ಲೆ, ಬುಟಾನಾ ಕುಂಡು ಗ್ರಾಮ. ಇಲ್ಲಿನ ವಾಲ್ಮೀಕಿ ಮಹಿಳೆಯೊಬ್ಬರ ಮೇಲೆ ಪೋಲೀಸರು ದಬ್ಬಾಳಿಕೆ ನಡೆಸಿದರು. ಈ ದಲಿತ ಮಹಿಳೆಯ ರಕ್ಷಣೆಗೆ ಧಾವಿಸಿ ಬಂದ ಜನರನ್ನು ಮೂರು ದಿನ ಅಕ್ರಮವಾಗಿ ಬಂಧನದಲ್ಲಿಡಲಾಯಿತು.

-ಪ್ರಕರಣ ಎರಡು

ಅದೇ ಜಿಲ್ಲೆಯಲ್ಲಿ ಈಘುರಾ ಗ್ರಾಮ ಒಬ್ಬ ಯುವ ಹೆಂಗಸಿನ ಮೇಲೆ ಆ ಪ್ರದೇಶದ ಕೆಲವು ಪ್ರಭಾವಿಗಳು ಅತ್ಯಾಚಾರ ಮಾಡಿ ಕೊಂದು ಹಾಕಿದರು. ಪೋಲೀಸರು ತಪ್ಪಿತಸ್ಥರನ್ನು ಹಿಡಿಯಲಿಲ್ಲ, ಬದಲಿಗೆ ಏನು ಮಾಡಿದರು ಗೊತ್ತೇ. ಅತ್ಯಾಚಾರಕ್ಕೊಳಗಾಗಿ ಕೊಲೆಯಾದ ಮಹಿಳೆಯ ಗಂಡ ಮತ್ತು ಮೈದುನನ್ನು ಬೆದರಿಸಿದರು ಈ ದುಷ್ಕೃತ್ಯ ನಮ್ಮದೇ ಎಂದು ಅವರಿಂದ ಬರೆಯಿಸಿಕೊಂಡರು.

ದಲಿತರ ಮೇಲಿನ ದೌರ್ಜನ್ಯದ ಈ ಎರಡೂ ಪ್ರಕರಣಗಳು ಈ ವರ್ಷದ ಮಾರ್ಚ್ ಸುಮಾರಿಗೆ ನಡೆದವುಗಳಾಗಿವೆ. ಹರ್ಯಾಣ ಪೋಲೀಸರು ದಲಿತರ ವಿರುದ್ಧ ನಡೆಸುತ್ತಿರುವ ದೌರ್ಜನ್ಯಕ್ಕೆ ಈ ಎರಡು ಘಟನೆಗಳು ಹೊಸ 'ಆಯಾಮ'ವನ್ನು ಕೊಟ್ಟಿವೆ.

ಹರ್ಯಾಣದ ಕೈಗಾರಿಕೆ ಖಾತೆಯ ಮಾಜಿ ಸಚಿವ ಕೆ.ಆರ್. ಪುನಿಯಾ ನೇತೃತ್ವದ ಜನಹಿತ ಸಂಘರ್ಷ ಸಮಿತಿ ಈ ಪ್ರಕರಣಗಳನ್ನು ಪ್ರತಿಭಟಿಸಿ ಈಚೆಗೆ ದೆಹಲಿಯಲ್ಲಿ ಪ್ರದರ್ಶನವನ್ನು ನಡೆಸಿತು. ಅನೇಕ ಹೆಂಗಸರ ಸಹಿತ ನೂರಾರು ಕಾರ್ಯಕರ್ತರು ಇದಕ್ಕಾಗಿ ಹರ್ಯಾಣದಿಂದ ರಾಷ್ಟ್ರ ರಾಜಧಾನಿಗೆ ಬಂದಿದ್ದರು.

ಮುಖ್ಯಮಂತ್ರಿ ಭಜನ್ ಲಾಲರಿಗೆ ದೂರು ನೀಡಿದ್ದರೂ ಪ್ರಯೋಜನವಾಗಲಿಲ್ಲ, ಸರಕಾರ ಯಾವುದೇ ಕ್ರಮ ಕೈಗೊಂಡಿಲ್ಲ, ವಿಷಯವನ್ನು ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವರ ಗಮನಕ್ಕೆ ತರುವುದು ಅನಿವಾರ್ಯವಾಯಿತು ಎಂದು ಪುನಿಯಾ ಹೇಳಿದ್ದಾರೆ.

ಈ ನಡುವೆ, ನೆಮ್ಮದಿ ಮೂಡಿಸುವ ಪ್ರಕರಣವೊಂದು ಮಧ್ಯಪ್ರದೇಶದಿಂದ ವರದಿಯಾಗಿದೆ.

ಪತಾಪಗಢ ಸಮೀಪದ ಇಟ್ಟಿಗೆ ಕಾರ್ಖಾನೆಯೊಂದರಲ್ಲಿ ಅಕ್ರಮವಾಗಿ ಹಿಡಿದಿಡಲಾಗಿದ್ದ 52 ಕಾರ್ಮಿಕರನ್ನು ಅಲ್ಲಿಗೆ ದಾಳಿ ಮಾಡಿದ ಅಧಿಕಾರಿಗಳು ಬಿಡುಗಡೆ ಮಾಡಿದರು. ಇವರೆಲ್ಲ ಜೀತದಾಳುಗಳಾಗಿದ್ದರು.

'ನಮಗೆ ಕೂಲಿಯನ್ನೇ ಕೊಡುತ್ತಿರಲಿಲ್ಲ' ಎಂದು ಬಿಲಾಸಪುರ ಜಿಲ್ಲೆಗೆ ಸೇರಿದ ಕಾರ್ಮಿಕರು ದೂರಿದ್ದಾರೆ. ತಮ್ಮ ಚಿಕ್ಕ ಮಕ್ಕಳಿಂದ ಕೂಡ ಮಾಲೀಕರು ಕೆಲಸ ಮಾಡಿಕೊಳ್ಳುತ್ತಿದ್ದರು. ಮನೆಗೆ ವಾಪಸು ಹೋಗುವ ಇಚ್ಛೆ ವ್ಯಕ್ತಪಡಿಸಿದಾಗ ಬಲತ್ಕಾರದಿಂದ ತಡೆ ಹಿಡಿದರು ಎಂದು ಹೇಳಿದ್ದಾರೆ.

ದಾಳಿ ಮಾಡಿದ ಅಧಿಕಾರಿಗಳು ಕಾರ್ಮಿಕರನ್ನು ಬಿಡುಗಡೆ ಮಾಡಿ ಅವರಿಗೆ ಬರಬೇಕಿದ್ದ ಬಾಕಿ ಕೂಲಿಯನ್ನು ಕೊಡಿಸಿದ್ದಾರೆ ಎಂದು ಯು.ಎನ್.ಐ. ವಾರ್ತಾ ಸಂಸ್ಥೆ ವರದಿ ಮಾಡಿದೆ.

ಕಾನೂನನ್ನು ಈ ರೀತಿ ಕಟ್ಟುನಿಟ್ಟಿನಿಂದ ಜಾರಿ ಮಾಡುವ ಪ್ರಾಮಾಣಿಕ ಹಾಗೂ ದಿಟ್ಟ ಅಧಿಕಾರಿಗಳು ಎಲ್ಲಾ ಕಡೆ ಇದ್ದರೆ ಎಷ್ಟು ಒಳ್ಳೆಯದಾಗುತ್ತದೆ ಅಲ್ಲವೆ?

ಹೋಯಿತು ಟಾಡಾ, ಬಿಡುಗಡೆಗೇಕೆ ತಡ?

ದಶಕಕ್ಕೂ ಹೆಚ್ಚು ಕಾಲದಿಂದ ಕಾಡುತ್ತಿದ್ದ ಟಾಡಾ ಕಾನೂನು 'ಇನ್ನಿಲ್ಲ' ಕೊನೆಗೂ 'ಕರಾಳ ರಾಕ್ಷಸ' ಸತ್ತು ಹೋಗಿದೆ! ಆದರೆ ನೆಮ್ಮದಿಯಿಂದ ನಿಟ್ಟುಸಿರು ಬಿಡುವಂತಿಲ್ಲ.

'ಹೋದೆಯಾ ಪಿಶಾಚಿ ಅಂದರೆ ಬಂದೆ ಗವಾಕ್ಷಿಯೊಳಗೆ' ಎಂಬಂಥ ಪರಿಸ್ಥಿತಿ ನಮ್ಮ ಮುಂದಿದೆ. ಟಾಡಾಕ್ಕಿಂತಲೂ ಕರಾಳವಾದ ಕಾನೂನನ್ನು ತರಲು ಕೇಂದ್ರ ಸರಕಾರ ಹೊರಟಿದೆ.

ಈ ನಡುವೆ, ಟಾಡಾ ಕಾನೂನು ಅಸ್ತಿತ್ವದಲ್ಲಿ ಇಲ್ಲದಿದ್ದರೂ ಆ ಕಾಯಿದೆ ಪ್ರಕಾರ ಬಂಧಿತರಾಗಿ ಸೆರೆಮನೆಗಳಲ್ಲಿ ಕೊಳೆಯುತ್ತಿರುವವರ ಭವಿಷ್ಯ ತೂಗುಯ್ಯಾಲೆಯಲ್ಲಿದೆ.

ಇಡೀ ದೇಶದಲ್ಲಿ ಬಹುತೇಕ ರಾಜ್ಯಗಳಲ್ಲಿ ಟಾಡಾ ಬಂಧಿಗಳ ಬಿಡುಗಡೆ ಆಗಿಲ್ಲ, ಕಾನೂನಿನ ಅಂಶಗಳನ್ನು ಮುಂದಿಟ್ಟು ಅವರನ್ನು ಇನ್ನೂ ಸತಾಯಿಸಲಾಗುತ್ತಿದೆ.

ಹೆಮ್ಮೆಯ ಕ್ರಮ

ಆದರೆ ಪ್ರಜಾಸತ್ತಾತ್ಮಕ ಚಳವಳಿಯ ಮುಂಚೂಣಿಯ ರಾಜ್ಯಗಳಾದ ತ್ರಿಪುರಾ ಮತ್ತು ಪಶ್ಚಿಮ ಬಂಗಾಳ ಈ ಒಟ್ಟಾರೆ ಪರಿಸ್ಥಿತಿಯಿಂದ ಹೊರತಾಗಿದೆ. ಭಿನ್ನವಾಗಿದೆ. ಟಾಡಾವನ್ನು ತಾತ್ವಿಕವಾಗಿ ವಿರೋಧಿಸುತ್ತಲಿದ್ದ ಸಿಪಿಐ(ಎಂ) ನೇತೃತ್ವ ಹೊಂದಿರುವ ಎರಡೂ ರಾಜ್ಯಗಳಲ್ಲಿರುವ ಸರಕಾರಗಳು ಟಾಡಾ ಕೈದಿಗಳನ್ನು ಬಿಡುಗಡೆ ಮಾಡಿವೆ.

ನುಡಿದಂತೆ ನಡೆದ ಹೆಮ್ಮೆ ಈ ರಾಜ್ಯ ಸರಕಾರಗಳದ್ದಾಗಿದೆ.

ನಯನಾರ್ ಆಗ್ರಹ

ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ಸರಕಾರಗಳು ಮಾಡಿದಂತೆ ಕೇರಳದಲ್ಲಿ ಕೂಡ ಟಾಡಾ ಬಂಧಿಗಳನ್ನು ಬಿಡುಗಡೆ ಮಾಡಬೇಕು ಎಂದು ಆ ರಾಜ್ಯದ ಮಾಜಿ ಮುಖ್ಯಮಂತ್ರಿಯೂ ಆಗಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಇ.ಕೆ. ನಯನಾರ್ ಮುಖ್ಯಮಂತ್ರಿ ಎ.ಕೆ. ಅಂತೋಣಿಯವರನ್ನು ಒತ್ತಾಯಿಸಿದ್ದಾರೆ.

ಭಯೋತ್ಪಾದನೆ ಹಾಗೂ ವಿಚ್ಛಿದ್ರಕಾರಕ ಚಟುವಟಿಕೆ ತಡೆ ಕಾನೂನಿನ ಪ್ರಕಾರ ಬಂಧಿಸಲಾಗಿರುವ ಎಲ್ಲಾ ಜನರನ್ನು ಬಿಡುಗಡೆ ಮಾಡುವಂತೆ ಅವರು ಮನವಿ ಮಾಡಿದ್ದಾರೆ.

ಕೇರಳದಲ್ಲಿ 40 ಸಿಪಿಐ(ಎಂ) ಕಾರ್ಯಕರ್ತರು ಟಾಡಾ ಬಂಧಿಗಳಾಗಿದ್ದಾರೆ ಎನ್ನುವುದು ಗಮನಾರ್ಹ.

ಈ ಕಾನೂನು ರಾಜಕೀಯ ಉದ್ದೇಶಕ್ಕಾಗಿ ದುರುಪಯೋಗ ಆಗಿರುವುದಕ್ಕೆ ಇದು ಒಂದು ಉದಾಹರಣೆ ಆಗಿದೆ.

ಮುಖ್ಯಮಂತ್ರಿ ಅಂತೋಣಿ ಟಾಡಾಕ್ಕೆ ವಿರೋಧವಾದ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಆದರೆ ನಿಜವಾಗಿಯೂ ಕಳಕಳಿ ಇದ್ದಿದ್ದರೆ ತ್ರಿಪುರಾ ಮುಖ್ಯಮಂತ್ರಿ ದಶರಥದೇವ್ ಮಾಡಿದಂತೆ ಅಂತೋಣಿ ಕೂಡಾ ಟಾಡಾ ನಿಯಮಗಳನ್ನು ಅನ್ವಯಿಸುವುದನ್ನು ತಡೆಯಬಹುದಿತ್ತು ಎಂದು ನಯನಾರ್ ಅಭಿಪ್ರಾಯಪಟ್ಟಿದ್ದಾರೆ.

ಟಾಡಾ ಕೈದಿಗಳ ಬಿಡುಗಡೆಗೇಕೆ ತಡ ಎಂಬ ಪ್ರಶ್ನೆ ಇಡೀ ದೇಶಕ್ಕೆ ಅನ್ವಯ ಆಗುತ್ತದೆ. ಬಹುಶಃ ಮುಗ್ಧ ಜನರ ಬಂಧಮುಕ್ತಿಗಾಗಿಯೇ ಒಂದು ಚಳುವಳಿಯನ್ನು ನಡೆಸಬೇಕಾಗುತ್ತದೋ ಏನೋ?

ದೆಹಲಿ ಕಾರ್ಮಿಕರ ಧೀರ ಸಮರದ ಕಹಳೆ

ದೆಹಲಿಯ ಕೈಗಾರಿಕೆ ಪ್ರದೇಶಗಳು ಮತ್ತು ನೆರೆಹೊರೆಯ ಉತ್ತರಪ್ರದೇಶ ಹಾಗೂ ಹರ್ಯಾಣದ ಜಿಲ್ಲೆಗಳ ಕಾರ್ಮಿಕರು ತೀವ್ರ ಸಂಘರ್ಷಕ್ಕೆ ಸಜ್ಜಾಗುತ್ತಿದ್ದಾರೆ. ಮೇ 24ರಂದು ದೆಹಲಿಯಲ್ಲಿ ನಡೆದ ಸಮಾವೇಶದಲ್ಲಿ ಈ ಹೋರಾಟದ ಕಹಳೆ ಮೊಳಗಿದೆ.

ಕನಿಷ್ಠ ಕೂಲಿಯನ್ನು 2500 ರೂಪಾಯಿಗೆ ಏರಿಸಬೇಕು. ತುಟ್ಟಿಭತ್ಯೆಯನ್ನು ಹೆಚ್ಚಿಸಬೇಕು ಎಂಬಿತ್ಯಾದಿ ಪ್ರಮುಖ ಬೇಡಿಕೆಗಳ ಈಡೇರಿಕೆ ಒತ್ತಾಯಿಸಿ ನಡೆಯಲಿರುವ ಚಳವಳಿಗೆ ಕರೆ ಕೊಟ್ಟಿರುವುದು ಸಿಐಟಿಯು.

ಸಿಐಟಿಯು ಸಂಘಟಿಸಿದ್ದ ಸಮಾವೇಶದ ಕರೆಯನ್ವಯ ಜೂನ್ 24ರಂದು ಮೇಲೆ ತಿಳಿಸಿದ ಪ್ರದೇಶಗಳಲ್ಲಿ ಒಂದು ದಿನದ ಮುಷ್ಕರ ನಡೆಯಲಿದೆ.

ದೆಹಲಿ, ಫರಿದಾಬಾದ್ ಮತ್ತು ಗಾಜಿಯಾಬಾದ್‌ಗಳ 1000ಕ್ಕೂ ಹೆಚ್ಚು ಫ್ಯಾಕ್ಟರಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ನೌಕರರನ್ನು ಪ್ರತಿನಿಧಿಸಿ ಸುಮಾರು 300 ಕಾರ್ಯಕರ್ತರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಮುಷ್ಕರಕ್ಕೆ ತಯಾರಿಯಾಗಿ ಇಡೀ ಒಂದು ತಿಂಗಳ ಕಾಲ ಪ್ರಚಾರಾಂದೋಲನ ನಡೆಸಲು ಹಾಗೂ ಕಾರ್ಮಿಕ ಸಚಿವಾಲಯದ ಎದುರು ಜೂನ್ 13 ರಂದು ಬೃಹತ್ ಪ್ರದರ್ಶನ ನಡೆಸಲು ಸಮಾವೇಶ ತೀರ್ಮಾನಿಸಿತು.

ಸಂಕಷ್ಟದ ಬದುಕು: ಹಣದುಬ್ಬರದ ಹೆಚ್ಚಳದಿಂದಾಗಿ ದೆಹಲಿ,ಹರ್ಯಾಣ ಮತ್ತು ಉತ್ತರ ಪ್ರದೇಶಗಳ ಕಾರ್ಮಿಕರ ಜೀವನ ದುರ್ಭರವಾಗಿದೆ. ಉತ್ತರ ಪ್ರದೇಶ ಮತ್ತು ಹರ್ಯಾಣದ ಕಾರ್ಮಿಕರ ಕೂಲಿಯನ್ನು ಕಳೆದ ಆರು ವರ್ಷಗಳಿಂದ ಪರಿಷ್ಕರಿಸಿಲ್ಲ. ಇದರಿಂದಾಗಿ ಜೀವನ ಸ್ಥಿತಿ ಇನ್ನಷ್ಟು ಸಂಕಷ್ಟಮಯವಾಗಿದೆ.

ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸಬೇಕು, ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸಬೇಕು, ಕೂಲಿಯ ಶೇಕಡಾ 10ರಷ್ಟು ಮನೆ ಬಾಡಿಗೆ ಭತ್ಯೆ(ಹೆಚ್.ಆರ್.ಎ.) ಕೊಡಬೇಕು ಎಂಬುದನ್ನು ಕಾರ್ಮಿಕ ವರ್ಗದ ಇತರ ಬೇಡಿಕೆಗಳಾಗಿವೆ.

ಮಹಿಳಾ ಕಾರ್ಮಿಕರಿಗೆ ಸಮಾನ ವೇತನ ಕೊಡಬೇಕು. ಅಲ್ಲದೆ ಕಾರ್ಮಿಕ ನ್ಯಾಯಾಲಯದಲ್ಲಿ ಬಾಕಿಯಿರುವ ಎಲ್ಲಾ ಪ್ರಕರಣಗಳನ್ನು ಒಂದು ವರ್ಷದೊಳಗೆ ಇತ್ಯರ್ಥಪಡಿಸಬೇಕು ಎಂಬ ಬೇಡಿಕೆಗಳನ್ನು ಮುಂದಿಡಲಾಗಿದೆ.

ಹಷ್ಮಿ ನೆನಪು: ಸುಮಾರು ಐದಾರು ವರ್ಷಗಳ ಹಿಂದೆ ಗಾಜಿಯಾಬಾದ್ ಪ್ರದೇಶದ ಕಾರ್ಮಿಕ ವರ್ಗ ತನ್ನ ಸಂಕಷ್ಟದ ವಿರುದ್ಧ ಸಿಡಿದೇಳಲು ತಯಾರಿ ನಡೆಸಿತ್ತು. ಅದಕ್ಕೆ ಪೂರಕವಾಗಿ ಜನನಾಟ್ಯಮಂಚ (ಜನಮತ) ಜಾಗೃತಿ ಹುಟ್ಟಿಸುವ ಕೆಲಸವನ್ನು ನಾಟಕ ಮೂಲಕ ನಡೆಸುತ್ತಿತ್ತು,

ಇದರಿಂದ ನಡುಕ ಹುಟ್ಟಿದ ಆ ಪ್ರದೇಶದ ಮಾಲಿಕ ವರ್ಗ ಪಿತೂರಿ ಹೂಡಿ 'ಜನಮ್' ನೇತಾರ ಹಾಗೂ ಜನಪ್ರಿಯ ರಂಗಭೂಮಿ ಕಲಾವಿದ ಸಫ್ದರ್ ಹಷ್ಮಿಯವರ ಮೇಲೆ ಮಾರಕ ಹಲ್ಲೆ ನಡೆಸಿ ಕೊಲೆ ಮಾಡಿದ್ದು ನೆನಪಾಗುತ್ತದೆ. 'ಸಂಗಾತಿ ಸಫ್ದರ್, ನಿನ್ನ ಬಲಿದಾನ ವ್ಯರ್ಥವಾಗಿಲ್ಲ, ಇದೋ ನಾವು ಮತ್ತೆ ಹೋರಾಟದ ಕಣಕ್ಕೆ ಧುಮುಕುತ್ತಿದ್ದೇವೆ. ಇದುವೇ ನಿನಗೆ ನಮ್ಮ ಕೆಂಪು ನಮನ' ಎಂದು ಆ ಪ್ರದೇಶ ಹಾಗೂ ಸುತ್ತಮುತ್ತಲಿನ ದುಡಿಯುವ ವರ್ಗ ಹೇಳುತ್ತಿರುವಂತೆ ಭಾಸವಾಗುತ್ತಿದೆ; ಅಲ್ಲವೆ?

ಸಿಐಟಿಯುಗೆ 25 ವರ್ಷ:

ಪುಟ 5 ರಿಂದ.....

ಮವಾಗಿ ಅವರು 1962ರಲ್ಲಿ ಎಂಎಲ್‌ಎಯಾಗಿ ಚುನಾಯಿತರಾಗುವಂತಾಯಿತು.

ರಾಯಚೂರು, ಬಳ್ಳಾರಿಗಳಲ್ಲಿ ಹೋರಾಟದ ಮಾರ್ಗಕ್ಕೆ ಯಾರನ್ನೂ ಗೆದ್ದುಕೊಳ್ಳಲಾಗಲಿಲ್ಲ.

ಇಬ್ಭಾಗಗಳ ಮೊದಲಿನ ಚಿತ್ರ

ಹೀಗೆ ರಾಜ್ಯದಲ್ಲಿ ಎಐಟಿಯುಸಿಯ ಇಬ್ಭಾಗದ ಮೊದಲಿನ ಚಿತ್ರ ಈ ರೀತಿಯಾಗಿತ್ತು - ಆಗ ಬೆಂಗಳೂರಿನಲ್ಲಾಗಲೀ, ಹರಿಹರದಲ್ಲಾಗಲೀ ಮೂಡಿ ಬರುತ್ತಿದ್ದ ಇಂಜಿನಿಯರಿಂಗ್ ಉದ್ದಿಮೆಗಳಂತಹ ದೊಡ್ಡ ಉದ್ದಿಮೆಗಳು ಎಐಟಿಯುಸಿಯ ಶಾಮೀಲುವಾದಿಗಳ ಹಿಡಿತದಲ್ಲಿದ್ದವು. ಜನಳಿ ಉದ್ದಿಮೆಯಲ್ಲಿ ಬೆಂಗಳೂರಿನಲ್ಲಿ ಶಾಮೀಲುವಾದಿಗಳು ಮತ್ತು ಹೋರಾಟಶೀಲರ ನಡುವಿನ ಸಂಘರ್ಷ ಇಂಟಕ್ ಮುಖಂಡರು ಮತ್ತು ಭವಿಷ್ಯದ ಸಿಐಟಿಯುನ ಮುಖಂಡರ ನಡುವೆ ನಡೆದಿತ್ತು. ದಾವಣಗೆರೆಯಲ್ಲಿ ನಿರ್ಣಾಯಕ ಹೋರಾಟ ನಡೆಯಿತು- ಮೂಡಿ ಬರುತ್ತಿದ್ದ ಸಿಐಟಿಯು ಮುಖಂಡರಿಂದ ಅದನ್ನು ಕಿತ್ತುಕೊಳ್ಳಲಾಯಿತು. ಕೆಜಿಎಫ್, ದಾಂಡೇಲಿ, ದಕ್ಷಿಣ ಕನ್ನಡ ಹಾಗೂ ಗುಲ್ಬರ್ಗಗಳಲ್ಲಿ ಭವಿಷ್ಯದ ಸಿಐಟಿಯು ಮುಖಂಡರ ಹಿಡಿತವಿತ್ತು.

ಕೆ.ಪಿ.ಟಿ.ಯು.ಸಿ(ಎಐಟಿಯುಸಿಯ ಕರ್ನಾಟಕ ಘಟಕ) ತನ್ನ ಆಂತರಿಕ ಸಂಘರ್ಷದಿಂದ ಅಸ್ತವ್ಯಸ್ತಗೊಂಡಿತ್ತು. ದಕ್ಷಿಣ ಕನ್ನಡ ಜಿಲ್ಲೆ, ಪ್ಲಾಂಟೇಶನ್ ಇತ್ಯಾದಿ ಯೂನಿಯನ್‌ಗಳಲ್ಲಿ ಹೋರಾಟ ನಂತರ ಸ್ಥಾಪನೆಗೊಂಡ ಸಿಐಟಿಯು ಪರವಾಗಿ ನಿರ್ಣಾಯಕವಾಗಿ ನಡೆಯಿತು. ಹೆಚ್ಚೇನೂ ಕಷ್ಟವಿಲ್ಲದೆ ಇದು ಸಾಧ್ಯವಾಯಿತು. ಬಿಇಎಲ್ ಇತ್ಯಾದಿಗಳಲ್ಲಿನ ಹೋರಾಟ ಎಐಟಿಯುಸಿಯ ಪ್ರತಿಷ್ಠೆಯನ್ನೇ ಮೇಲ್ಪಟ್ಟದಲ್ಲಿ ಇಟ್ಟಿತ್ತು.

ಒಟ್ಟಾರೆಯಾಗಿ ನಮ್ಮ ರಾಜ್ಯದಲ್ಲಿ ಎಐಟಿಯುಸಿಯೊಳಗೆ ಶಾಮೀಲುವಾದಿಗಳು ಹಾಗೂ ಹೋರಾಟಶೀಲರ ನಡುವಿನ ಸಂಘರ್ಷ ಎಐಟಿಯುಸಿಯ ಇಬ್ಭಾಗದ ಮೊದಲು ಹಾಗೂ ಇಬ್ಭಾಗವಾದ ಕೂಡಲೇ ಹೆಚ್ಚು ಕಡಿಮೆ ಮುಖಂಡರ ಮಟ್ಟದಲ್ಲೇ ನಡೆಯಿತು. ನಂತರವಷ್ಟೇ ಅದು ಶಾಮೀಲುವಾದಿ ಮಾರ್ಗದ ವಿರುದ್ಧ ಮತ್ತು ಪರವಾಗಿ ದುಡಿಯುವ ಜನಗಳ ಹೋರಾಟವಾಗಿ ಮೂಡಿ ಬಂತು.

ಪಶ್ಚಿಮ ಬಂಗಾಳದಲ್ಲಿ ಡಬ್ಲ್ಯು.ಬಿ.ಪಿ.ಟಿ.ಯು.ಸಿ ಪ್ರಮುಖ ಪಾತ್ರ ವಹಿಸಿದ್ದನ್ನು ಹಿಂದಿನ ಲೇಖನದಲ್ಲಿ ನೋಡಿದ್ದೇವೆ. ಆದರೆ ಕರ್ನಾಟಕದಲ್ಲಿ ಹಾಗಾಗಲಿಲ್ಲ. ನಾವು ತುರ್ತು ಪರಿಸ್ಥಿತಿಯ ನಂತರದ ಅವಧಿಯವರೆಗೂ ಕಾಯಬೇಕಾಗಿತ್ತು. ಆಗಲಷ್ಟೇ ಒಂದು ಸೀಮಿತ ರೀತಿಯಲ್ಲಾದರೂ ಹೋರಾಟ ಹರಡಿ ಒಂದು ಗಮನಾರ್ಹ ಪ್ರಭಾವ ಬೀರಲು ಸಾಧ್ಯವಾಯಿತು.

(ಮುಂದಿನ ವಾರ: ರಾಜ್ಯದಲ್ಲಿ 1971ರಲ್ಲಿ ಸಿಐಟಿಯು ಸ್ಥಾಪನೆ ಹಾಗೂ ನಂತರದ ಹೋರಾಟಗಳ ಬಗ್ಗೆ ಓದಿ - ಈ ಲೇಖನದ ಉಳಿದ ಭಾಗದಲ್ಲಿ)

ಮೊದಲ ಬಾರಿಗೆ ಮಣಿದ ಇಸ್ರೇಲ್ ಸರಕಾರ

ಪ್ಯಾಲೆಸ್ಟೇನ್ ಭೂಮಿ ಕಸಿದುಕೊಳ್ಳುವ ಕ್ರಮ ಹಿಂತೆಗೆಯಲು ಇಸ್ರೇಲ್ ಸರ್ಕಾರದ ನಿರ್ಧಾರ

ಲೋಕ ಸಂಚಾರ

ಶರತ್ಚಂದ್ರ

ಪ್ಯಾಲೆಸ್ಟೇನ್ ಶಾಂತಿ ಒಪ್ಪಂದದ ಒಂದೊಂದು ಕ್ರಮಗಳನ್ನು ಮುರಿಯುತ್ತಾ, ಅಲ್ಲಗಳೆಯುತ್ತಾ ಇಸ್ರೇಲ್ ಇಡೀ ಶಾಂತಿ ಒಪ್ಪಂದ ಸಾಮ್ರಾಜ್ಯಶಾಹಿ ಒತ್ತಾಯದಿಂದ ಹೇರಿದ ಪೊಳ್ಳು 'ಮಸಣದ ಶಾಂತಿ' ಎಂದು ಇಡೀ ಅರಬ್ ಜನತೆಗೆ ಮನವರಿಕೆ ಮಾಡುತ್ತಾ ಬಂದಿತ್ತು. ಈ ಪೊಳ್ಳು ಶಾಂತಿ ಒಪ್ಪಂದಕ್ಕೆ ವಿರೋಧ ಅಷ್ಟೇ ಜೋರಾಗಿ ಬರಲಾರಂಭಿಸಿತ್ತು.

ಪೂರ್ವ ಜೆರುಸಲೆಂನಲ್ಲಿ 131 ಎಕ್ರೆ ಪ್ಯಾಲೆಸ್ಟೇನ್ನರ ಜಮೀನನ್ನು ಕಸಿದುಕೊಂಡು ಅಲ್ಲಿ ಜ್ಯೂ ಕಾಲೋನಿ ಕಟ್ಟುವ ಇಸ್ರೇಲ್ ಸರ್ಕಾರದ ನಿರ್ಧಾರ ಹೊಗೆಯಾಡುತ್ತಿದ್ದ ಅರಬ್ ಕೋಪಾಗ್ನಿ ಭುಗಿಲೇಳುವಂತೆ ಮಾಡಿತು. ಇದರ ವಿರುದ್ಧ ಕಳೆದ ಐದು ವರ್ಷದಲ್ಲಿ ಮೊದಲಬಾರಿಗೆ 9 ಅರಬ್ ದೇಶಗಳ ಶೃಂಗಸಭೆ ಕರೆಯಲಾಯಿತು. ಈಜಿಪ್ಟ್, ಜೋರ್ಡಾನ್, ಲೆಬನಾನ್, ಮೊರೊಕ್ಕೊ PLO, ಸೌದಿ ಅರೇಬಿಯಾ, ಸಿರಿಯಾ ಹಾಗೂ UAE ಈ ಶೃಂಗಸಭೆಯಲ್ಲಿ ಭಾಗವಹಿಸಲಿದ್ದು ಮೊರೊಕ್ಕೊದ ರಾಜ ಹಸನ್ ಈ ಶೃಂಗಸಭೆ ಸೇರಿಸಲು ಪ್ರಯತ್ನ ಆರಂಭಿಸಿದ್ದನ್ನು ಶೃಂಗ ಸಭೆ ಮೇ 27 ರಂದು ಕರೆಯಲಾಗಿತ್ತು. PLO ಸಹ ಇಸ್ರೇಲ್ ಸರ್ಕಾರದ ಈ ಪ್ರಯತ್ನವನ್ನು ಖಂಡಿಸಿ, ಇದು ಶಾಂತಿ ಒಪ್ಪಂದವನ್ನು ಶಾಶ್ವತವಾಗಿ ಮುಗಿಸಿಬಿಡುವುದು. ಇಂತಿಫರಾವನ್ನು ಪುನ: ಆರಂಭಿಸಬೇಕಾಗಬಹುದು ಎಂದು ಎಚ್ಚರಿಸುತ್ತು.

ಆದರೆ ಇವ್ಯಾವಕ್ಕೂ ಇಸ್ರೇಲ್ ಸರ್ಕಾರ ಜಗ್ಗಿರಲಿಲ್ಲ. ಅಮೇರಿಕನ್ ಸಾಮ್ರಾಜ್ಯಶಾಹಿ ಕುಮ್ಮಕ್ಕು ಇರುವವರಗೆ ತಾನು ಏನೂ ಮಾಡಿದರೂ ನಡೆಯುತ್ತದೆ ಎಂಬ ದಿಮಾಕಿನಿಂದ ಇತ್ತು. ಆದರೆ ಅನಿರೀಕ್ಷಿತ ಬೆಳವಣಿಗೆಯೊಂದು ಸರ್ಕಾರ ತನ್ನ ನೀತಿಯನ್ನು ಬಿಟ್ಟುಕೊಟ್ಟು ಮಣಿಯ ಬೇಕಾದ ಪರಿಸ್ಥಿತಿ ಬಂದಿತು. ಇದು ಎರಡು ಅರಬ್ ಬೆಂಬಲಿತ ಪಕ್ಷಗಳು ಈ ವಿಷಯದ ಬಗ್ಗೆ ಸರ್ಕಾರದ ವಿರುದ್ಧ ತಂದ ಅವಿಶ್ವಾಸ ನಿರ್ಣಯ. ಈ ಎರಡು ಪಕ್ಷಗಳ ಐವರು ಸದಸ್ಯರು (ಇವರಲ್ಲಿ ಮೂವರು ಕಮ್ಯುನಿಸ್ಟರು) ತಂದ ಅವಿಶ್ವಾಸ ನಿರ್ಣಯದಿಂದ ಸರ್ಕಾರ ಉರುಳುವ ಸಂಭವವಿತ್ತು. ಏಕೆಂದರೆ ಇಸ್ರೇಲ್ ನ ಲೇಬರ್ ಸರ್ಕಾರ ಅದನ್ನು ಬೆಂಬಲಿಸುವ ಪಕ್ಷಗಳ ಜತೆ ಸೇರಿ ಕೇವಲ ಒಂದು ಸದಸ್ಯನ ಬಹುಮತ ಇದೆ. 120 ಸದಸ್ಯರ ಇಸ್ರೇಲ್ ಪಾರ್ಲಿಮೆಂಟಿನಲ್ಲಿ ಸರ್ಕಾರಕ್ಕೆ 61 ಸದಸ್ಯರ ಬೆಂಬಲವಿದೆ. ಇದರಲ್ಲಿ 5 ಅರಬ್ ಸದಸ್ಯರೂ ಸೇರುತ್ತಾರೆ. ಆದ್ದರಿಂದ ಅವಿಶ್ವಾಸ ನಿರ್ಣಯಕ್ಕೆ ಮತ ಏಣಿಕೆ ನಡೆದರೆ ಸರ್ಕಾರ ಉರುಳುವುದು ಖಚಿತವಿತ್ತು. ಹೀಗೆ ಮೊದಲು ಬಾರಿಗೆ ಇಸ್ರೇಲ್ ಸರ್ಕಾರದ ಹಟಮಾರಿತನ ಮಣಿಸಲು ಈ ಇಸ್ರೇಲಿ -ಅರಬ್ ಸದಸ್ಯರು ತಮ್ಮ ಸಂಖ್ಯಾಬಲ ಉಪಯೋಗಿಸುವಲ್ಲಿ ಯಶಸ್ವಿಯಾದರು. PLO ಬೆದರಿಕೆ, ಅರಬ್ ಶೃಂಗಸಭೆಯ ಬೆದರಿಕೆ ಸಾಧಿಸದ್ದನ್ನು ಇವರು ಸಾಧಿಸಿದ್ದರು.

ಆದರೆ ಇಸ್ರೇಲ್ ಈ ನಿರ್ಣಯವನ್ನು ಪೂರ್ಣವಾಗಿ ಹಿಂತೆಗೆದುಕೊಂಡಿಲ್ಲ, ತಡೆಹಿಡಿದಿದೆ ಇದಕ್ಕೆ ಪ್ರತಿಯಾಗಿ ಅರಬ್ ಶೃಂಗ ಸಭೆಯನ್ನು ಮುಂದೂಡಲಾಗಿದೆ. ಆದರೆ ಒಂಬತ್ತು ಅರಬ್ ದೇಶಗಳು ಪ್ಯಾಲೆಸ್ಟೇನ್ ಭೂಮಿ ಕಸಿದು ಕೊಳ್ಳುವ ನಿರ್ಣಯವನ್ನು ಪುನ: ಜಾರಿಮಾಡಿದರೆ, ಪುನ: ಶೃಂಗಸಭೆ ಕರೆದು ಕ್ರಮ ಕೈಗೊಳುವುದೆಂದು ಬೆದರಿಕೆ ಹಾಕಿದೆ.

ಅಲ್ಜೀರಿಯಾದಲ್ಲಿ ಜಾತ್ಯತೀತ ಶಕ್ತಿಗಳ ವಿರುದ್ಧ ಮೂಲಭೂತವಾದಿಗಳ

ಅಲ್ಜೀರೀಯಾದಲ್ಲಿ ಜಾತ್ಯತೀತ ಶಕ್ತಿಗಳ ವಿರುದ್ಧ ಮುಸ್ಲಿಂ ಮೂಲಭೂತವಾದಿಗಳು ಭಯೋತ್ಪಾದನೆ, ಹಿಂಸಾತ್ಮಕ ಬೆದರಿಕೆಯಲ್ಲಿ ತೊಡಗಿದ್ದಾರೆ. ಈ ವರೆಗೆ ಹಲವಾರು ಜಾತ್ಯತೀತ ಪತ್ರಕರ್ತರು, ಸಾಂಸ್ಕೃತಿಕ ವ್ಯಕ್ತಿಗಳು ಹಾಗೂ ಮಹಿಳೆಯರನ್ನು ಈ ಮೂಲಭೂತವಾದಿಗಳು ಹತ್ಯೆ ಮಾಡಿದ್ದಾರೆ. ಈಗ ಸೈನ್ಯ, ಪೋಲೀಸ್ ಅಥವಾ ಯಾವುದೇ ಸರ್ಕಾರಿ ಅಧಿಕಾರಿಗಳಿಗೆ ಸಂಬಂಧಿಸಿದ ಮಕ್ಕಳನ್ನು ಕೊಲ್ಲುವುದಾಗಿ ಅವರು ಬೆದರಿಕೆ ಹಾಕಿದ್ದಾರೆ.

ಈ ಬೆದರಿಕೆಯನ್ನು GIA ಎಂಬ ಸಶಸ್ತ್ರ ಇಸ್ಲಾಮಿಕ ಗುಂಪು ಲಂಡನ್ ನಿಂದ ಪ್ರಸಾರವಾಗುವ ಅರಬ್ ದೈನಿಕ ಅಲ್ ಹಮಾನ್‌ನಲ್ಲಿ ಪ್ರಕಟಿಸಿದ ನೋಟಿಸ್ ನಲ್ಲಿ ಹೇಳಿದೆ. ನಾಸ್ತಿಕರನ್ನು ಮದುವೆಯಾಗಿದರೂ ಎಲ್ಲಾ ಮಹಿಳೆಯರು ತಮ್ಮ ಗಂಡನನ್ನು ಪೂಜಿಸಬೇಕು ಇಲ್ಲವೆ ಮರಣ ಎದುರಿಸಬೇಕು ಎಂದು ಬೆದರಿಸಿದೆ. ಮೂಲಭೂತವಾದಿಗಳ 'ಭಾಷೆ'ಯಲ್ಲಿ ಇಸ್ಲಾಮಿಕ್ ಪ್ರಭುತ್ವ ವಿರೋಧಿಸುವವರು ಹಾಗೂ ಜಾತ್ಯತೀತತೆ ಬಂಬಲಿಸುವವರೆಲ್ಲ 'ನಾಸ್ತಿಕರು'.

GIA ಅಲ್ಜೀರಿಯಾದ ಮುಖ್ಯ ಮೂಲಭೂತವಾದಿ ಪಕ್ಷ FIS ನಿಂದ ಸಿಡಿದು ಬಂದ ಬಣ. FIS ಸಹ ಹಿಂಸಾತ್ಮಕ ಮುಸ್ಲಿಂ ಮೂಲಭೂತವಾದಿ ಪ್ರಭುತ್ವ ತರುವ ಉದ್ದೇಶಉಳ್ಳ ಸಂಘಟನೆ. ಮಹಿಳೆಯರ ಸ್ಥಾನ ಮನೆಯೊಳಗೆ ಮಾತ್ರ ಎಂಬ ಧೋರಣೆಯ ಈ ಸಂಘಟನೆಗಳು ಮಹಿಳೆಯರ ಮೇಲೆ ಹಲವಾರು ಹಲ್ಲೆಗಳನ್ನು ನಡೆಸಿವೆ. ಅಲ್ಜೀರಿಯಾದ ಸಮಾಜದಲ್ಲಿ ಮಹಿಳೆಯರು ಪರ್ದಾ ಧರಿಸುವುದಿಲ್ಲ, ಹಲವಾರು ಮಹಿಳೆಯರು ಕೆಲಸದಲ್ಲಿ ಇದ್ದಾರೆ. ಸಾಕಷ್ಟು ಸ್ವಾತಂತ್ರ್ಯ, ಸಮಾನತೆ ಅನುಭವಿಸುತ್ತಿದ್ದಾರೆ. ಇವೆಲ್ಲವನ್ನು ನಾಶಮಾಡುವುದು ಮೂಲಭೂತವಾದಿಗಳ ಉದ್ದೇಶ. ಪರ್ದಾ ಧರಿಸದ ಮಹಿಳೆಯರ ಹತ್ಯೆ ಮಾಡಿರುವ ಹಲವಾರು ಘಟನೆಗಳು ವರದಿಯಾಗಿವೆ.

ಈ ಎರಡು ಮೂಲ ಭೂತವಾದಿ ಗುಂಪುಗಳು ಈವರೆಗೆ ವಿದೇಶಿ ನಾಗರಿಕರ ಮೇಲೆ ಹಲ್ಲೆ, ಕೊಲೆ ಮಾಡುವ ಬೆದರಿಕೆ ಹಾಕುತ್ತಿದ್ದರು. ಈವರಗೆ 82 ವಿದೇಶಿ ನಾಗರಿಕರನ್ನು ಕೊಲೆಗೈದಿದ್ದಾರೆ. ಇದರಲ್ಲಿ ಅಲ್ಜೀರಿಯಾ ಸರ್ಕಾರದ ನೇರವಿಗೆ ಬಂದಿದ್ದ ಶಿಕ್ಷಕರು, ಪಾದ್ರಿಗಳು, ನಿರ್ಮಾಣ ತಾಂತ್ರಿಕರು, ಇಂಜಿನೀಯರುಗಳು ಹಾಗೂ ರಾಯಭಾರಿ ಸಿಬ್ಬಂದಿ ಸೇರಿದ್ದಾರೆ. ಈಗ ಈ ಮೂಲಭೂತವಾದಿಗಳು ಮಹಿಳೆಯರ ಮೇಲೆ ತಮ್ಮ ಕಣ್ಣು ಹಾಯಿಸಿದ್ದಾರೆ.

ಕೆಲಸಕ್ಕೆ ಸಂಬಂಧಪಟ್ಟ ಅಫಘಾತಗಳಿಂದ ವರ್ಷಕ್ಕೆ 2 ಲಕ್ಷ ಸಾವು

ಜಾಗತ್ತಿಕ ಆರೋಗ್ಯ ಸಂಸ್ಥೆ (WHO) ನಡೆಸಿದ ಅಧ್ಯಯನ ಒಂದರ ಪ್ರಕಾರ ಜಗತ್ತಿನಲ್ಲಿ ವರ್ಷಕ್ಕೆ ಎರಡು ಲಕ್ಷದಷ್ಟು ಜನ ಕೆಲಸಕ್ಕೆ ಸಂಬಂಧಿಸಿದ ಅಫಘಾತಗಳಿಂದ ಸಾಯುತ್ತಾರೆ. ಇಂತಹ 12 ಕೋಟಿ ಅಫಘಾತಗಳು ನಡೆಯುತ್ತವೆ. ಹಲವಾರು ಇಂತಹ ಅಫಘಾತಗಳಲ್ಲಿ ಮರಣ ವಾಗದಿದ್ದರೂ ತೀವ್ರವಾಗಿ ಗಾಯಗೊಳ್ಳುತ್ತಾರೆ.

ಜಗತ್ತಿನ ಕಾರ್ಮಿಕರಲ್ಲಿ ಶೇಕಡಾ 40 ರಿಂದ 50ರಷ್ಟು ಜನ, ತಮ್ಮ ಕಾರ್ಖಾನೆಗಳಲ್ಲಿ ರಾಸಾಯನಿಕ, ಜೈವಿಕ, ಮಾನಸಿಕ, ದೈಹಿಕ ಅಪಾಯಗಳನ್ನು ಎದುರಿಸುತ್ತಾರೆ. ಅಫಘಾತಗಳ ಅಂಚಿನಲ್ಲಿ ಕೆಲಸ ಮಾಡುತ್ತಾರೆ. ಸುಮಾರು ಒಂದು ಲಕ್ಷ ರಾಸಾಯನಿಕಗಳು, 200 ಜೈವಿಕ ಅಂಶಗಳು, 50 ದೈಹಿಕ ಅಪಾಯದ ಅಂಶಗಳು, 20 ಕೆಲಸ ಮಾಡುವ ಭಂಗಿಗೆ ಸಂಬಂಧಿಸಿದ ಅಪಾಯಗಳು ಹಾಗೂ ಅಸಂಖ್ಯಾತ ದೈಹಿಕ-ಮಾನಸಿಕ ಒತ್ತಡಕ್ಕೆ ಕಾರಣವಾಗುವ ಅಂಶಗಳನ್ನು ಗುರುತಿಸಲಾಗಿದೆ ಈ ವರದಿಯಲ್ಲಿ, ಸುಮಾರು 300-350 ರಾಸಾಯನಿಕಗಳ ಕ್ಯಾನ್ಸರ್ ಉಂಟುಮಾಡುವವು ಹಾಗೂ ಇದರಿಂದ ಕಾರ್ಮಿಕರಿಗೆ ರಕ್ಷಣೆ ಇಲ್ಲ ಎಂದು ವರದಿ ಗುರುತ್ತಿಸಿದೆ. ಅಭಿವೃದ್ಧ ದೇಶಗಳಲ್ಲಿ ಶೇಕಡಾ 30 ರಿಂದ 50 ಕಾರ್ಮಿಕರು ಕೆಲಸದ ಅತಿಹೆಚ್ಚು ಒತ್ತಡದಿಂದ ಮಾನಸಿಕ ಅಸ್ವಸ್ಥತೆ ಅನುಭವಿಸುತ್ತಿದ್ದಾರೆ.

ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಕೃಷಿ ಹಾಗೂ ಇತರ ಪ್ರಾಥಮಿಕ ಉತ್ಪಾದನಾ ಕಾರ್ಯದಲ್ಲಿ ತೊಡಗಿರುವ ಕಾರ್ಮಿಕರು ಅತಿ ಹೆಚ್ಚು ದೈಹಿಕ ಶ್ರಮ, ಹೆಚ್ಚು ಏಲ್ಲಡೆ ಧಗೆ, ಅಫಘಾತಗಳು, ಕೀಟನಾಶಕಗಳು ಇತ್ಯಾದಿಗಳಿಂದ ಅಪಾಯ ಎದುರಿಸುತ್ತಿದ್ದಾರೆ. ಇಂತಹ ಕೆಲಸಕ್ಕೆ ಸಂಬಂಧಿಸಿದ ಆರೋಗ್ಯ ಸಮಿಕ್ಷೆಗಳಿಂದ ಪರಿಹಾರ, ಶುಶ್ರೂಸೆಸಿಗುವುದು ಅಭಿವೃದ್ಧ ದೇಶಗಳಲ್ಲೂ ಕೇವಲ ಶೇಕಡಾ 20 ರಿಂದ 50 ಕಾರ್ಮಿಕರಿಗೆ ಮಾತ್ರ. ಅಭಿವೃದ್ಧಿ ದೇಶಗಳಲ್ಲಿ ಕೇವಲ ಶೇಕಡಾ 5 ರಿಂದ 10 ಕಾರ್ಮಿಕರಿಗೆ ಇಂತಹ ಸೌಲಭ್ಯ ದೊರಕುತ್ತದೆ.

ಕೈಗಾರಿಕೆಯ ವ್ಯವಸ್ಥಾಪಕ ವರ್ಗ, ಮಾಲಿಕರು ಹಾಗೂ ಸರ್ಕಾರಗಳು ಇಂತಹ ಕಾರ್ಖಾನೆಗಳಿಂದ ಕೋಟ್ಯಾಂತರ ರೂಪಾಯಿ ಲಾಭ ಸಂಪಾದಿಸುತ್ತಿದ್ದರೂ, ಈ ಸಮಸ್ಯೆಗಳಿಗೆ ಈ ವರೆಗೆ ಗಮನಕೊಟ್ಟಲ್ಲ ಎಂದು ಇದರ ಅರ್ಥ. ಈ ಬಗ್ಗೆ ಗಮನ ಸೆಳೆಯಲು ILO (ಅಂತರ್ರಾಷ್ಟ್ರೀಯ ಲೆಬರ್ ಆರ್ಗನೈಸೇಶನ್) ಜತೆ ಜಂಟಿ ಕಾರ್ಯಕ್ರಮ ಹಾಗಿಕೊಳ್ಳಬೇಕೆಂದು WHO ನಿರ್ಧರಿಸಿದೆ.

ಕೆನಡಾ ಕಮ್ಯುನಿಸ್ಟ್ ಪಕ್ಷದ 31 ನೇ ಕೇಂದ್ರೀಯ ಸಮಾವೇಶ

ಕೆನಡಾ ಕಮ್ಯುನಿಸ್ಟ್ ಪಕ್ಷದ 31ನೇ ಕೇಂದ್ರೀಯ ಸಮಾವೇಶ ಟೊರಾಂಟೊ ನಗರದಲ್ಲಿ ಮೇ 19 ರಿಂದ 22 ರವರೆಗೆ ನಡೆಯಿತು. ಪಕ್ಷ ಇತ್ತೀಚೆಗಷ್ಟೆ ಮಾರ್ಕ್ಸ್‌ವಾದ-ಲೆನಿನ್‌ವಾದ ಮತ್ತು ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯವಾದವನ್ನು, ತೀವ್ರ ಆಂತರಿಕ ಹೋರಾಟದ ನಂತರ ಎತ್ತಿ ಹಿಡಿದಿದೆ. ಸೋವಿಯತ್ ಒಕ್ಕೂಟದ ವಿಘಟನೆ ಹಾಗೂ ಸಮಾಜವಾದಕ್ಕೆ ಆದ ಹಿನ್ನಡೆ ನಂತರ ಆ ಪಕ್ಷ ಆ ಬಗ್ಗೆ ತೀವ್ರ ಆಂತರಿಕ ಚರ್ಚೆ ನಡೆಸಿತ್ತು.

ಕೆನಡಾದ ಆಳುವ ವರ್ಗಗಳು ಅನುಸರಿಸುತ್ತಿರುವ ನವ-ಲಿಬರಲ್ ನೀತಿಗಳ (ಮುಕ್ತ ವ್ಯಾಪಾರ, ಖಾಸಗೀಕರಣ, ಸರ್ಕಾರದ ಪಾತ್ರದಲ್ಲಿ ಕಡಿತ ಸಾರ್ವಜನಿಕ ಸೇವೆಗಳನ್ನು ಸಾರಸಗಟಾಗಿ ನಿಲ್ಲಿಸುವುದು) ವಿರುದ್ಧ ಪಕ್ಷ ಹೋರಾಡುತ್ತಿದೆ. ನಾಫ್ಟಾ ಒಪ್ಪಂದದ ಮೂಲಕ ಅಮೇರಿಕನ್ ಸಾಮ್ರಾಜ್ಯಶಾಹಿಯ ನಿಕಟ ಸಹವರ್ತಿಗಳಾಗಿರುವ ಕೆನಡಾ ಗುತ್ತೇದಾರಿ ಬಂಡವಾಳ ಶಾಹಿಯ ವಿರುದ್ಧ ಹೋರಾಡುತ್ತಿರುವ ಏಕ ಮಾತ್ರ ಪಕ್ಷ ವಿದು. ದೇಶದ ಆರ್ಥಿಕ ಆಂಶಿಕ ಚೇತರಿಕೆ ತೋರಿಸುತ್ತಿದ್ದರೂ, ನಿರುದ್ಯೋಗ ವಿಪರೀತ ಏರುತ್ತಿದೆ. ಆರ್ಥಿಕ ಚೇತರಿಕೆಯಿಂದ ಗುತ್ತೇದಾರಿಗಳ ಲಾಭ ಮಾತ್ರ ಚೇತರಿಸಿ ಕೊಂಡಿದೆ, ದೇಶದ ತುಂಬಾ ವರ್ಣಭೇದ ತಾಂಡವಾಡುತ್ತಿದೆ. ನವ-ಲಿಬರಲ್ ನೀತಿಗಳಿಗೆ ಬದಲಿ ಇಲ್ಲ ಎಂಬ ಆಳುವ ವರ್ಗದ ಪ್ರಚಾರಕ್ಕೆ ಪ್ರತಿಯಾಗಿ ಪಕ್ಷ ಪ್ರಜಾಸತ್ತಾತ್ಮಕ ಬದಲಿಯನ್ನು ಮುಂದಿಟ್ಟಿದೆ.

ಕೆನಡಾ ಇಂದು ತೀವ್ರ ಸಂವೈಧಾನಿಕ ಬಿಕ್ಕಟ್ಟು ಎದುರಿಸುತ್ತಿದೆ. ಕ್ವಿಬೆಕ್ ಎಂಬ ಫ್ರೆಂಚ್ ಮಾತನಾಡುವ ಪ್ರಾಂತ್ಯದಲ್ಲಿ ಪ್ರತ್ಯೇಕತಾ ಚಳುವಳಿ ಆರಂಭವಾಗಿದೆ. ಕ್ವಿಬೆಕ್ ಕೆನಡಾದ ಕಾನ್ಫಡೆರೆಲ್ ನಿಂದ ಹೊರಬಿದ್ದು ಒಂದು ಪ್ರತ್ಯೇಕ ದೇಶವಾಗಲು ಪ್ರತ್ಯೇಕತಾವಾದಿಗಳು ಪ್ರಯುತ್ನಿಸುತ್ತಿದ್ದಾರೆ. ಕೆನಡಾವನ್ನು ಈ ರೀತಿ ಒಡೆಯುವುದನ್ನು ಕಮ್ಯುನಿಸ್ಟ್ ಪಕ್ಷ ವಿರೋಧಿಸಿದೆ. ಇದು ಕ್ವಿಬೆಕ್‌ನ ಮಾತ್ರವಲ್ಲ ಇಡೀ ಕೆನಡಾ ದೇಶದ ದುಡಿಯುವ ವರ್ಗದ ಐಕ್ಯತೆಗೆ ಮಾರಕ. ಅವರ ಹಿತಾಸಕ್ತಿಗೆ ವಿರೋಧಿ ಎಂದು ತನ್ನ ಅಭಿಪ್ರಾಯ ಹೇಳಿದೆ. ಅದೇ ಸಮಯದಲ್ಲಿ ಕ್ವಿಬೆಕ್ ಸ್ವಯಂ ನಿರ್ಧಾರದ ಹಕ್ಕು ಇರಬೇಕಾದ ರಾಷ್ಟ್ರೀಯತೆ ಎಂದು ಪಕ್ಷ ಹಿಂದಿನಿಂದಲೂ ಹೇಳುತ್ತಾ ಬಂದಿದೆ. ಕ್ವಿಬೆಕ್‌ಗೆ ಸ್ವಯಂ-ನಿರ್ಧಾರದ ಹಕ್ಕು ಇರಬೇಕೆಂದು ಹೇಳಿದವರಲ್ಲಿ ಕಮ್ಯುನಿಸ್ಟ್ ಪಕ್ಷ ಮೊದಲ ರಾಜಕೀಯ ಪಕ್ಷ. ಕೆನಡಾದ ಫೆಡರಲ್ ಕಾನೂನು ಹಾಗೂ ಸಂವಿಧಾನ ದೇಶದ ಆದಿವಾಸಿಗಳು, ಹಾಗೂ ಕ್ವಿಬೆಕ್‌ನ ಜನರಿಗೆ ಸ್ವಯಂ-ನಿರ್ಧಾರದ ಹಕ್ಕು ಕೊಡದೆ, ಅವರ ದಮನಮಾಡಿದೆ. ಆದ್ದರಿಂದ ಸಮಾನ ಹಾಗೂ ಸ್ವಇಚ್ಛೆ ಆಧಾರಿತ ಕ್ವಿಬೆಕ್, ಆದಿವಾಸಿಗಳ ಹಾಗೂ ಇತರ ಕೆನಡಾ ಭಾಗಗಳ ಒಕ್ಕೂಟ ಸಾಧಿಸುವ ಪ್ರಜಾಸತ್ತಾತ್ಮಕ ಸಂವಿಧಾನಕ್ಕೆ ಪಕ್ಷ ಹೋರಾಡುವುದು. ಇದಕ್ಕೆ ವ್ಯಾಪಕ ವಿಭಾಗಗಳ ಬೆಂಬಲ ದೊರಕತೊಡಗಿದೆ. ಕೆನಡಾದ ಕಮ್ಯುನಿಸ್ಟ್ ಪಕ್ಷ, ಅಮೇರಿಕನ್ ಕಮ್ಯುನಿಸ್ಟ್ ಪಕ್ಷದ ಜತೆ ಸೇರಿ ಆಧುನಿಕ ತಂತ್ರಜ್ಞಾನ ಸಾಧ್ಯವಾಗಿಸಿರುವ ಆವಿಷ್ಕಾರಗಳಿಂದ, ಜಗತ್ತಿನ ಕಮ್ಯುನಿಸ್ಟ್ ಚಳುವಳಿಯ ಬೇರೆ ಬೇರೆ ಪಕ್ಷಗಳು ವೇಗವಾಗಿ ವಿಚಾರ ವಿನಿಮಯ, ಮಾಹಿತಿ ವಿನಿಮಯ ಮಾಡಿಕೊಳ್ಳಲು ಪ್ರಯುತ್ನಿಸುತ್ತಿದೆ.

ಸಿ.ಪಿ.ಐ(ಎಂ)ನ ಕೇಂದ್ರ ಸಮಿತಿ, ಕೆನಡಾ ಕಮ್ಯುನಿಸ್ಟ್ ಪಕ್ಷದ 31ನೇ ಕೇಂದ್ರಿಯ ಸಮಾವೇಶಕ್ಕೆ ಶುಭಹಾರೈಸುವ ಸಂದೇಶ ಕಳಿಸಿದೆ. ಕೆನಡಾ ಕಮ್ಯುನಿಸ್ಟ ಪಕ್ಷದ ಪ್ರತಿನಿಧಿಯೊಬ್ಬರು 15 ನೇ ಮಹಾದಿವೇಸನದಲ್ಲಿ ಸೌಹಾರ್ದ ಪ್ರತಿನಿಧಿಯಾಗಿ ಭಾಗವಹಿಸಿದ್ದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಕಾಂಗ್ರೆಸ್ ಮತ್ತೆ ಇಬ್ಭಾಗ

ಪುಟ 5 ರಿಂದ...

"ರಾಜಕೀಯ ದಸ್ತಾವೇಜ"ನ್ನು ಅಂಗೀಕರಿಸಿತು. ಅದರಲ್ಲಿ ಕೋಮುವಾದಿ ಶಕ್ತಿಗಳೊಂದಿಗೆ ರಾವ್ ಸರಕಾರದ ರಾಜಿ ನಿಲುವಿನ ಬಗ್ಗೆ ತೀವ್ರ ಟೀಕೆಯಿದೆ -"ಬಿಜೆಪಿ, ಆರ್.ಎಸ್.ಎಸ್. ಮತ್ತು ವಿ.ಹೆಚ್.ಪಿ.ಯೊಂದಿಗೆ ಪ್ರಧಾನ ಮಂತ್ರಿಗಳು ಒಂದು ಮಾತುಕತೆ ಆರಂಭಿಸಿದರು. ಹೀಗೆ ಮಾಡಬಾರದು ಎಂದು ತಿರುಪತಿ ನಿರ್ಣಯ ಸ್ಪಷ್ಟ ಮಾತುಗಳಲ್ಲಿ ವಿಧಿಸಿತ್ತು. ಈ ಮಾತುಕತೆಗಳಿಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಿಂದ ಅಧಿಕಾರವನ್ನೂ ಪಡೆದಿರಲಿಲ್ಲ.... ಕೋಮುವಾದಿಗಳು ಕಾಂಗ್ರೆಸ್ ಪಕ್ಷದೊಳಗೆ ಹಾಗೂ ಜಾತ್ಯಾತೀತತೆಯ ಆದರ್ಶಕ್ಕೆ ಸರ್ಕಾರದ ದೃಢ ಬದ್ಧತೆಯಲ್ಲಿ ಕಾಣಿಸುತ್ತಿದ್ದ ಅನಿಶ್ಚಿತತೆಯ ಪೂರ್ಣ ಲಾಭ ಪಡೆದರು. ಹೀಗಿರುವಾಗ ಅಯೋಧ್ಯೆಯಲ್ಲಿ ಅವರು ಬಾಬ್ರಿ ಮಸೀದಿ ಧ್ವಂಸ ಮಾಡಲು ಏಕ ಉದ್ದೇಶ ಹಾಗೂ ಪ್ರಯುತ್ನದಿಂದ ಮುನ್ನುಗ್ಗಿದಲ್ಲಿ ಏನೂ ಆಶ್ಚರ್ಯವಿಲ್ಲ... ಒಂದು ರಾಜಕೀಯ ಇಚ್ಛಾ ಶಕ್ತಿ ಇದ್ದಿದ್ದರೆ ಈ ಭಯಾನಕ ಕೃತ್ಯವನ್ನು ತಪ್ಪಿಸಬಹುದಾಗಿತ್ತು ಎಂಬುದಕ್ಕೆ ಭಾರತ ಸರಕಾರದ ದಾಖಲೆಗಳಲ್ಲೇ ಸಾಕಷ್ಟು ಪುರಾವೆಗಳು ಸಿಗುತ್ತವೆ" ಎಂದು ದಸ್ತಾವೇಜು ಟೀಕಿಸಿದೆ.

ಕೊನೆಯದಾಗಿ ಈ ದಸ್ತಾವೇಜು "ಜನ ಸಾಮಾನ್ಯರಲ್ಲಿ ಹರಡುತ್ತಿರುವ ನಿರಾಸೆಯ ಭಾವನೆಯನ್ನು ಹೋಗಲಾಡಿಸಲು ಹಾಗೂ ಈ ಸಂಘಟನೆಗೆ ದೇಶದ ವ್ಯವಹಾರಗಳನ್ನು ಸ್ಪಷ್ಟತೆಯಿಂದ ಹಾಗೂ ದೃಢ ನಿರ್ಧಾರದಿಂದ ನಿರ್ವಹಿಸಬಲ್ಲ ಸಾಮರ್ಥ್ಯ ಇದೆಯೆಂಬ ವಿಶ್ವಾಸ ತ್ವರಿತವಾಗಿ ಅಳಿದು ಹೋಗುತ್ತಿರುವುದನ್ನು ತಡೆಯಲು" ಕೆಲವು "ನಿರ್ದಿಷ್ಟ ಕ್ರಮಗಳ"ನ್ನು ಪಟ್ಟಿ ಮಾಡಿದೆ. ಶೇರು ಹಗರಣ, ಸಕ್ಕರೆ ಹಗರಣ, ಸಾರ್ವಜನಿಕ ವಲಯದ ಶೇರುಗಳ ಮಾರಾಟದ ಮೋಸ ಇವೆಲ್ಲವುದ ಬಗ್ಗೆ ತನಿಖೆ ನಡೆಸಲು ಒಬ್ಬ ಸುಪ್ರೀಂ ಕೋರ್ಟ್ ನ್ಯಾಯಾಧೀಶರ ನೇತೃತ್ವದಲ್ಲಿ ಒಂದು ಉಚ್ಛಮಟ್ಟದ ತನಿಖಾ ಸಮಿತಿ ನೇಮಕ, ಟಾಡಾ ರದ್ಧತಿ, ಭೂ ಸುಧಾರಣೆ ಇತ್ಯಾದಿಗಳು ಈ ಪಟ್ಟಿಯಲ್ಲಿವೆ.

ನಿರೀಕ್ಷಿಸಿದಂತೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಈ ಸಮಾವೇಶದ ಪ್ರಭಾವವನ್ನು ಗೌಣಗೊಳಿಸುವ ಪ್ರಯತ್ನ ನಡೆಸಿದೆ. ಆದರೆ ಅಂತಿಮವಾಗಿ ಈ ಸಮಾವೇಶದ ಸಂದೇಶವನ್ನು ಬುಡಮಟ್ಟದಲ್ಲಿ ಸಾಮಾನ್ಯ ಕಾಂಗ್ರೆಸ್ಸಿಗರ ನಡುವೆ ಎಷ್ಟರ ಮಟ್ಟಿಗೆ ಒಯ್ಯಲಾಗುತ್ತದೆ ಎಂಬುದರ ಮೇಲೆ ಎಲ್ಲವೂ ಅವಲಂಬಿಸಿದೆ. ದೇಶದ ಆರ್ಥಿಕ ಸಾರ್ವಭೌಮತೆಯ ರಕ್ಷಣೆಯಲ್ಲಿ, ರಾವ್ ಆಡಳಿತದ ಆರ್ಥಿಕ ನೀತಿಗಳ ವಿರುದ್ಧ, ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯ ರಕ್ಷಣೆಯಲ್ಲಿ ಹಾಗೂ ಕೋಮುವಾದದ ಕರಾಳ ಶಕ್ತಿಗಳ ವಿರುದ್ಧ ಸಾಮಾನ್ಯ ಕಾಂಗ್ರೆಸ್ಸಿಗರನ್ನು ಎಷ್ಟರ ಮಟ್ಟಿಗೆ ಅಣಿನೆರೆಸಲು ಅವರು ಸಮರ್ಥರಾಗುತ್ತಾರೆ ಎಂದು ನೋಡಬೇಕಾಗಿದೆ. ಮುಖಂಡತ್ವ ಗಂಭೀರವಾಗಿ ಪ್ರಯತ್ನ ಮುಂದುವರೆಸಿದರೆ ಹೆಚ್ಚೆಚ್ಚು ಮಂದಿಯನ್ನು ತಮ್ಮ ಬೆಂಬಲಕ್ಕೆ ಅಣಿನೆರೆಸಲು ಅವರಿಗೆ ಸಾಧ್ಯವಾಗುತ್ತದೆ.

ಕಾಂಗ್ರೆಸ್ಸಿನ ಇಬ್ಭಾಗ ರಾಜಕೀಯ ಸನ್ನಿವೇಶದಲ್ಲಿ ಒಂದು ಹೊಸ ಬದಲಾವಣೆ ತಂದಿದೆ. ಇದರಿಂದ ಯಾರಿಗೆ ಪ್ರಯೋಜನ? ಬಿಜೆಪಿಗೆ ಈ ಸನ್ನಿವೇಶದಿಂದ ಲಾಭ ಎಂಬ ಶಂಕೆ ವ್ಯಾಪಕವಾಗಿದೆ. ಬಿಜೆಪಿ ಒಡ್ಡಿರುವ ಅಪಾಯವನ್ನು ಸೋಲಿಸಲು ಎಡ-ಪ್ರಜಾಪ್ರಭುತ್ವ ಶಕ್ತಿಗಳು ಜಾಗರೂಕವಾಗಿರದಿದ್ದರೆ ಮಾತ್ರ ಇದು ಸಾಧ್ಯ. ಎಲ್ಲೆಲ್ಲಿ ಎಡ-ಪ್ರಜಾಪ್ರಭುತ್ವ ಶಕ್ತಿಗಳಿಗೆ ಗಮನಾರ್ಹ ಬಲವಿದೆಯೋ, ಎಲ್ಲೆಲ್ಲಿ ಇಂತಹ ಪರ್ಯಾಯ ಜನರ ಮುಂದಿದೆಯೋ ಅಲ್ಲೆಲ್ಲಾ ಜನ ಈ ಶಕ್ತಿಗಳಿಗೆ ಸ್ಪಂದಿಸಿದ್ದಾರೆ. ಇತ್ತೀಚಿನ ಚುನಾವಣೆಗಳಲ್ಲಿ ಹೆಚ್ಚಿನ ರಾಜ್ಯಗಳಲ್ಲಿ ಬಿಜೆಪಿಗೆ ದೊರೆತ ಮತಗಳು , ನಿಜವಾಗಿಯೂ ಕಾಂಗ್ರೆಸ್-ವಿರೋಧಿ ಮತಗಳು, ಪ್ರಜಾಪ್ರಭುತ್ವ ಶಕ್ತಿಗಳಿಗೆ ತಮ್ಮ ದೌರ್ಬಲ್ಯಗಳಿಂದಾಗಿ ಅವನ್ನು ಪಡೆಯಲು ಸಾಧ್ಯವಾಗಿರಲಿಲ್ಲವಷ್ಟೆ.

ಸಿಪಿಐ(ಎಂ)ನ 15ನೇ ಮಹಾಧಿವೇಶನ ಈ ಸವಾಲನ್ನು ಎದುರಿಸಲು ಎಡ ಪ್ರಜಾಪ್ರಭುತ್ವ, ಜಾತ್ಯಾತೀತ ಶಕ್ತಿಗಳ ಸಾಧ್ಯವಾದಷ್ಟು ವ್ಯಾಪಕ ಐಕ್ಯತೆಯಗೆ ಕರೆ ನೀಡಿದ್ದು ಸರಿಯಾಗಿಯೇ ಇದೆ. ಮುಂಬರುವ ದಿನಗಳಲ್ಲಿ ಆರ್ಥಿಕ ನೀತಿಗಳು ಹಾಗೂ ಕೋಮುವಾದಿ ಶಕ್ತಿಗಳ ವಿರುದ್ಧ ಸಾಮೂಹಿಕ ಆಂದೋಲನಗಳನ್ನು ಹರಿಯಬಿಡಬೇಕೆಂದು ಮಹಾಧಿವೇಶನ ಕರೆ ನೀಡಿದೆ. ಇಂತಹ ಒಂದು ವಾತಾವರಣ ಸೃಷ್ಟಿಯಾದರೆ ಮಾತ್ರವೇ ಕಾಂಗ್ರೆಸ್(ಐ) ಹಾಗೂ ಬಿಜೆಪಿ ಎರಡನ್ನೂ ಸೋಲಿಸಲು ಸಾಧ್ಯ.

ಕೊನೆಯದಾಗಿ ದೇಶದ ರಾಜಕೀಯ ರಂಗದಲ್ಲಿ ಮೇ 19 ರ ಸಮಾವೇಶದಿಂದ ಮೂಡಿಬಂದ ಹೊಸ ಕಾಂಗ್ರೆಸ್‌ನ ಸ್ಥಾನ ಏನು? ಈ ಬಗ್ಗೆ ಭವಿಷ್ಯವಾಣಿಗಳೇನನ್ನೂ ಮಾಡದೆ ಹೇಳಬಹುದಾದದ್ದು ಇಷ್ಟು - ಅವರು ಜನಗಳ ಬಳಿಗೆ ಹೋಗಿ ಪ್ರಸ್ತುತ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಕೋಮುವಾದಿ ಶಕ್ತಿಗಳ ವಿರುದ್ಧ ಅವರನ್ನು ಜಾಗೃತಗೊಳಿಸಿದರೆ ದೇಶವನ್ನು ಆರ್ಥಿಕ ರಂಗದಲ್ಲಿ ಮಾರಾಟ ಮಾಡುವುದರ ವಿರುದ್ಧ ಕೋಮುವಾದದ ವಿರುದ್ಧ ಆಂದೋಲನವನ್ನು ಬಲಪಡಿಸಲು ನೆರವಾಗುತ್ತವೆ.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462

ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಕೃಷಿ ಕೂಲಿಕಾರರಿಗೆ ಕೇಂದ್ರ ಸರ್ಕಾರದ ಕ್ರೂರ ವಂಚನೆ

ಕೇಂದ್ರ ಕಾರ್ಮಿಕ ಇಲಾಖೆ ಕೃಷಿ ಕಾರ್ಮಿಕರಿಗೆ ಒಂದು ಸಮಗ್ರ ಕೇಂದ್ರೀಯ ಶಾಸನದ ಪ್ರಶ್ನೆಯ ಮೇಲೆ ಒಂದು ನಿಲುವು ತಳೆಯಲು ನಿರಾಕರಿಸುವುದು ಖಂಡನೀಯ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಹೇಳಿದೆ. ಇದು ಒಂದು ಕೋಟಿ ಕೃಷಿ ಕಾರ್ಮಿಕರ ಜೀವನವನ್ನು ತಟ್ಟುವ ಪ್ರಶ್ನೆ ಎಂದು ಅದು ನೆನಪಿಸಿದೆ.

ಮೇ 25 ರಂದು ಸಂಘ ನೀಡಿದ ಹೇಳಿಕೆ "1980ರಿಂದ ಒಂದು ಕರಡು ಮಸೂದೆಯಿದೆ. ಆದರೆ ಅಂದಿನಿಂದ ಪ್ರತಿಯೊಂದು ಕೇಂದ್ರ ಸರಕಾರವೂ ಭೂಮಾಲಕರ ಒತ್ತಡದಿಂದ ಹಿಂದೇಟು ಹಾಕಿ ಅದನ್ನು ಸಂಸತ್ತಿನಲ್ಲಿ ಮಂಡಿಸುವ ಧೈರ್ಯ ತೋರಿರಲಿಲ್ಲ, ಕೇರಳದಲ್ಲಿ ಇಂತಹ ಒಂದು ಶಾಸನ 1974ರಿಂದಲೂ ಅಸ್ತಿತ್ವದಲ್ಲಿದ್ದು ಇದರಿಂದ ಈ ಜನವಿಭಾಗದ ಸಂಘಟನೆ ಸುಲಭಗೊಂಡಿರುವುದು ಮಾತ್ರವಲ್ಲ ಕೇರಳದ ಕೃಷಿ ಕೂಲಿಕಾರರು ಪಂಜಾಬಿನಲ್ಲಿ ಸಿಗುವಂತಹ ಕೂಲಿ ಪಡೆಯುಲು ಸಾಧ್ಯವಾಗಿದೆ. ಹೀಗಿದ್ದರೂ ಕೇಂದ್ರ ಸರಕಾರ ಹಿಂದೇಟು ಹೊಡೆಯುತ್ತಿದೆ" ಎಂದು ಹೇಳಿದೆ. ನರಸಿಂಹರಾವ್ ಸರಕಾರಕ್ಕೆ ಈ ಪ್ರಶ್ನೆಯನ್ನು ಒಂದು ಚುನಾವಣಾ ತಂತ್ರವಾಗಿ ಬಳಸುವುದರಲ್ಲಷ್ಟೇ ಆಸಕ್ತಿ ಎಂದು ಟೀಕಿಸಿರುವ ಹೇಳಿಕೆ ಈ ಪ್ರಶ್ನೆಯನ್ನು ಕುರಿತಂತೆ ಕಾರ್ಮಿಕ ಸಚಿವಾಲಯದ ಕ್ರೂರ ವಂಚನೆಯನ್ನು ಬಯಲಿಗೆಳೆದಿದೆ.

ಮೇ 5 ರಂದು ಸಂಸತ್ ಸದಸ್ಯ ಪಿ.ಸಿ. ಥಾಮಸ್ ರವರ ಪ್ರಶ್ನೆಗೆ ಉತ್ತರಿಸುತ್ತಾ ಕಾರ್ಮಿಕ ಮಂತ್ರಿಗಳು ಈ ಶಾಸನ ಬಗ್ಗೆ ಅಂತಿಮ ತೀರ್ಪು ತಗೊಂಡಿಲ್ಲ ಎಂದರು. ಮೇ 19 ರಂದು ಸಂಸತ್ ಸದಸ್ಯ ಹನ್ನನ್ ಮೊಲ್ಲಾ ರವರ ಪ್ರಶ್ನೆಗೆ ಉತ್ತರ ನೀಡುತ್ತಾ ಶೀಘ್ರದಲ್ಲೇ ಗ್ರಾಮೀಣ ಬಡವರ ಕುರಿತಾದ ರಾಷ್ಟ್ರೀಯ ಆಯೋಗದ ಶಿಫಾರಸುಗಳಿಗನುಗುಣವಾಗಿ ಒಂದು ಸಮಗ್ರ ಮಸೂದೆಯನ್ನು ಸಂಸತ್ತಿನೆದುರು ತರುವುದಾಗಿ ತಿಳಿಯಪಡಿಸಿದರು.

ಮರುದಿನ ಮೇ 20 ರಂದು ಸರಕಾರದ ಕ್ರೂರ ವಂಚನೆ ಕಾರ್ಮಿಕ ಮಂತ್ರಿಗಳ ಕೃತ್ಯದಿಂದ ಬಯಲಿಗೆ ಬಂತು. ಕಾರ್ಮಿಕ ಮಂತ್ರಿಗಳು ಒಂದು ದಸ್ತಾವೇಜನ್ನು ಶಾಸನವಾಗಿ ಮಾಡಬಹುದೆಂದು ಮಂಜೂರಾತಿ ನೀಡಿದರು. ಇದು ಅವರ ಪ್ರಕಾರ ಹೇಗೆ ಬೇಕಾದರೂ ಮಣಿಸಬಲ್ಲಂತುದು! ಈ ಶಾಸನ ಜೀತದ ಪ್ರಶ್ನೆಯ ಬಗ್ಗೆ ಏನೂ ಮಾಡುದಿಲ್ಲವಂತೆ! ಏಕೆಂದರೆ ಅದಕ್ಕೆ ಮಾನವ ಹಕ್ಕುಗಳ ಆಯೋಗವೇ ಸಾಕಂತೆ! ಇನ್ನು ಕೈಗಾರಿಕಾ ವಿವಾದ ಕಾಯ್ದೆಯಲ್ಲಿದ್ದಂತೆ ತ್ರಿಪಕ್ಷೀಯ ವಿವಾದ ಪರಿಹಾರ ವ್ಯವಸ್ಥೆಯ ರೂಪಿಸುವ ಪ್ರಸ್ತಾಪವೂ ಇಲ್ಲ, ಅಂದರೆ ಈ ಅತ್ಯಂತ ಬಡವಿಭಾಗಗಳ ಜನರ ಕೂಲಿ ಹಾಗೂ ಕೆಲಸದ ಶರತ್ತುಗಳನ್ನು ಮಾಲಕರು, ಪಂಚಾಯತುಗಳು, ಅಧಿಕಾರಶಾಹಿಗಳು ಮತ್ತು ಪೋಲೀಸರ ಮರ್ಜಿಗೆ ಬಿಡಬೇಕು ಎಂದು ಇದರರ್ಥ ಎಂದು ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ಹೇಳಿಕೆ ಟೀಕಿಸಿದೆ.

(ಐ.ಎನ್.ಎಸ್.)

ವಿದ್ಯಾರ್ಥಿ ಬಸ್ ಪಾಸ್ ಪದ್ಧತಿ ಪ್ರಕಟಣೆ: ಎಸ್.ಎಫ್.ಐ.ನ ತೀವ್ರ ಖಂಡನೆ

ವಿದ್ಯಾರ್ಥಿಗಳ ಬಸ್ ಪಾಸ್ ಪದ್ಧತಿಯಲ್ಲಿ ಗುರುತಿನ ಚೀಟಿ-ಸ್ಟಾಂಪ್ ಪದ್ಧತಿಯನ್ನು ಬದಲಾಯಿಸಿ ಹೊಸ ಪದ್ಧತಿಯನ್ನು ಜಾರಿಗೆ ತರುವ ಸರಕಾರದ ನಿರ್ಧಾರವು ಅತ್ಯಂತ ವಿದ್ಯಾರ್ಥಿ ವಿರೋಧಿ ನೀತಿಯಾಗಿದೆಯೆಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸಿದೆ. ಈ ನೀತಿಯ ಜಾರಿಯನ್ನು ತತ್ ಕ್ಷಣ ತಡೆಹಿಡಿಯಬೇಕೆಂದು ಕೆ.ಎಸ್.ಆರ್.ಟಿ.ಸಿ.ಯನ್ನು ಒತ್ತಾಯಿಸಿದೆ.

ಹೊಸ ನೀತಿಯಿಂದ ಇದುವರೆಗೆ ಯಾವ ಶುಲ್ಕವನ್ನು ಕೊಡಬೇಕಿಲ್ಲದಿದ್ದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಇನ್ನು ಮುಂದೆ ತಿಂಗಳಿಗೆ 15 ರೂ. ತೆರಬೇಕಾಗುತ್ತದೆ. ಪ್ರೌಢಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಶುಲ್ಕದ ಪ್ರಮಾಣ ಈಗಿರುವುದಕ್ಕಿಂತ ಮೂರು ಪಟ್ಟು ಹೆಚ್ಚಾಗಲಿದೆ. ಒಂದಕ್ಕಿಂತ ಹೆಚ್ಚು ಬಸ್ ನಲ್ಲಿ ಪ್ರಯಾಣಿಸಬೇಕಾದ ವಿದ್ಯಾರ್ಥಿಗಳಿಗೆ ಹೊಸ ನೀತಿಯಿಂದಾಗಿ ಶಿಕ್ಷಣ ಆಸೆಯನ್ನೆ ಕೈ ಬಿಡಬೇಕಾದ ಪರಿಸ್ಥಿತಿಯು ನಿರ್ಮಾಣವಾಗಲಿದೆ. ಸಂಜೆ ಕಾಲೇಜಿನ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚು ಹೊರ ಬೀಳಲಿದೆ.

ಕಳೆದ ಶೈಕ್ಷಣಿಕ ವರ್ಷದಲ್ಲಿಯೇ ಕಾಂಗ್ರೆಸ್ ಸರಕಾರವು ಕೂಪನ್ ಪದ್ಧತಿಯನ್ನು ಜಾರಿಗೆ ತರಲು ಯತ್ನಿಸಿತ್ತು. 'ವಿದ್ಯಾರ್ಥಿಗಳ ತೀವ್ರ ಪ್ರತಿರೋಧದಿಂದ ಕಾಲೇಜು ವಿದ್ಯಾರ್ಥಿಗಳಿಗೆ ಆ ಪದ್ಧತಿಯು ವಾಪಸ್ಸಾಗಿತ್ತು. ಈಗ ವಿದ್ಯಾರ್ಥಿ-ಪೋಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಅದೇವಿದ್ಯಾರ್ಥಿ ವಿರೋಧಿ ನೀತಿಯನ್ನು ಹೊಸ ರೂಪದಲ್ಲಿ ಜಾರಿ ಮಾಡಲು ಜನತಾದಳ ಸರಕಾರವು ಪ್ರಯತ್ನಿಸುತ್ತಿದೆ.

ಶಿಕ್ಷಣ ಒಂದು ಸಾಮಾಜಿಕ ಅಗತ್ಯ, ಲಾಭ-ನಷ್ಟದ ಲೆಕ್ಕಾಚಾರದಲ್ಲಿ ಈ ಬಗ್ಗೆ ವಿಚಾರ ಮಾಡುವುದು ಸಲ್ಲದು. ಅಂತಹ ಶಿಕ್ಷಣ -ವಿರೋಧಿ ನಿಲುವು ತಳೆದ ಕಾಂಗ್ರೆಸ್ ಸರಕಾರಕ್ಕೆ ವಿದ್ಯಾರ್ಥಿ-ಯುವಜನ ಸರಿಯಾದ ಪಾಠ ಕಲಿಸಿದ್ದಾರೆ. ಈ ಬಗ್ಗೆ ಜನತಾದಳ ಸರಕಾರ ಗಂಭೀರವಾಗಿ ಯೋಚಿಸಿ ಕೂಡಲೇ ಹೊಸ ನೀತಿಯನ್ನು ವಾಪಸ್ ಪಡೆಯದಿದ್ದ ಪಕ್ಷದಲ್ಲಿ ವಿದ್ಯಾರ್ಥಿಗಳ ಉಗ್ರ ಹೋರಾಟವನ್ನು ಎದುರಿಸಬೇಕಾದೀತೆಂದು ಎಸ್.ಎಫ್.ಐ. ಎಚ್ಚರಿಕೆ ನೀಡಿದೆ.

ಇದು ನಿಮಗೆ ಗೊತ್ತೇ?

ಚೀಣೀಯರು ಹೆಚ್ಚು ತಿಂದರೆ ಪಾಶ್ಚಿಮಾತ್ಯ 'ಪರಿಸರವಾದಿ'ಗಳಿಗೆ ಹೊಟ್ಟೆನೋವು!

ಚೀಣಾ, ಭಾರತದಂತಹ ದೇಶಗಳ ಜೀವನಮಟ್ಟ ಸುಧಾರಿಸುವುದೂ ಕೆಲವು ಪಾಶ್ಚಿಮಾತ್ಯ ತಜ್ಞರ ಕಣ್ಣು ಕೆಂಪಗೆ ಮಾಡುತ್ತದೆ. 1980ರ ದಶಕದಲ್ಲಿ ಚೀಣಾದ ಆರ್ಥಿಕತೆ ಸರಾಸರಿ ವಾರ್ಷಿಕ 9% ದರದಲ್ಲಿ ಬೆಳೆದಿರುವುದರಿಂದ ಚೀಣೀಯರು ಬಳಸುವ ಆಹಾರದ ಪ್ರಮಾಣ ಹೆಚ್ಚುತ್ತಿದೆ. ಇದು ಹೀಗೆ ಮುಂದುವರೆದರೆ ಚೀಣಾದ ಆಹಾರ ಅಭಾವ ವಿಶ್ವದ ಆಹಾರ ಅಭಾವವಾಗುತ್ತದೆ. ಆಗ ಚೀಣಾದ ಜನರ ಹೊಟ್ಟೆಗೆ ಅನ್ನ ಹಾಕುವವರಾರು ಎಂದು ಅಮೇರಿಕಾದ ವರ್ಲ್ಡ್ ವಾಚ್ ಇನ್ಸಿಟಿಟ್ಯೂಟ್‌ನ ಅಧ್ಯಕ್ಷ ಲೆಸ್ಟರ್ ಬ್ರೌನ್‌ರಿಗೆ ಆತಂಕ ಪಾಪ!

"ಯೋಚನೆ ಮಾಡಬೇಡಿ, ನಮ್ಮ ಹೊಟ್ಟೆ ಹೊರೆಯುವ ಆತಂಕ ನಿಮಗೆ ಬೇಡ" ಎಂದು ಚೀಣೀ ಪರಿಸರ ವ್ಯವಹಾರಗಳ ಮುಖ್ಯಸ್ಥ ಕ್ಷೀ ಝಿನ್ ಹುವೋ ಬ್ರೌನ್ ಸಾಹೇಬರಿಗೆ ಪ್ರತ್ಯುತ್ತರ ನೀಡಿದ್ದಾರೆ. ಅಷ್ಟೇ ಅಲ್ಲ ಪಾಶ್ಚಿಮಾತ್ಯರ ಇಂತಹ ಆತಂಕದ ಹಿಂದಿರುವ ಗೋಸುಂಬೆತನವನ್ನು, ಮಹಾ ಸ್ವಾರ್ಥವನ್ನು ಬಯಲಿಗೆಳೆದಿದ್ದಾರೆ.

"ಚೀಣೀಯರು ತಮ್ಮ ಜೀವನಮಟ್ಟ ಸುಧಾರಿಸಲು ಪ್ರಯತ್ನಿಸುತ್ತಿರುವುದು ತಪ್ಪೆಂಬ ಬ್ರೌನ್ ರವರ ಮಾತು ಅನ್ಯಾಯದ್ದು, ನಾವು ವಿಶ್ವದ 22% ಜನಸಂಖ್ಯೆಯ ಹೊಟ್ಟೆ ತುಂಬಲು ವಿಶ್ವದ ಕೇವಲ 7% ಕೃಷಿ ಭೂಮಿಯನ್ನು ಯಶಸ್ವಿಯಾಗಿ ಬಳಸುತ್ತಿದ್ದೇವೆ ಎಂಬುದನ್ನು ಬ್ರೌನ್ ಮರೆಯಬಾರದು. ಬ್ರೌನ್‌ರಂತವರ ಶ್ರೀಮಂತ ದೇಶಗಳ ಕೇವಲ 20% ಮಂದಿ ವಿಶ್ವದ 80% ಸಂಪನ್ಮೂಲಗಳನ್ನು, ವಿದ್ಯುತ್ಶಕ್ತಿಯನ್ನು ಬಳಸುತ್ತಿದ್ದಾರೆ ಎಂಬುದನ್ನೂ ಅವರು ಮರೆಯಬಾರದು.

"ನಮಗೆ ಬ್ರೌನ್‌ರವರ ಮಾತಿಂದ ಸಿಟ್ಟು ಅಥವಾ ಬೇಸರವಾಗಿಲ್ಲ, ನಮಗೆ ತಲೆಕೆಡಿಸಿಕೊಳ್ಳಲು ನಮ್ಮದೇ ದೇಶದ ತುರ್ತಿನ ಸಮಸ್ಯೆಗಳು ಹಲವು ಇವೆ. ಒಂದು ಇನ್ಸಿಟಿಟ್ಯೂಟ್ ನ ವರದಿ ಬಗ್ಗೆ ತಲೆ ಕೆಡಿಸಿಕೊಳ್ಳಲು ನಮಗೆ ಪುರುಸೊತ್ತೂ ಇಲ್ಲ, ನಾವು ಈಗಾಗಲೇ ಪರಿಸರ ರಕ್ಷಣೆ ಕ್ರಮಗಳನ್ನು ಅನುಸರಿಸುತ್ತಿದ್ದೇವೆ. ಕೃಷಿ ಉತ್ಪಾದಕತೆ ಹೆಚ್ಚಿಸಲು ಆದ್ಯತೆ ನೀಡುತ್ತಿದ್ದೇವೆ. ನಮ್ಮ ಕುಟುಂಬ ಯೋಜನಾ ಕಾರ್ಯಕ್ರಮ ಯಶಸ್ವಿಯಾಗಿದೆ. ವಿಜ್ಞಾನ, ತಂತ್ರಜ್ಞಾನ, ಆರ್ಥಿಕ ಪ್ರಗತಿ ನಮ್ಮನ್ನು ಪಾರು ಮಾಡುತ್ತದೆ" ಎಂಬ ಅವರ ಮಾತು ಬ್ರೌನ್‌ರಂತಹವರ ಹಾಗೂ ಕೆಲವು ಪರಿಸರವಾದಿಗಳ ಹುಸಿ ಆತಂಕದ ನಿಜ ಉದ್ದೇಶವನ್ನು ತೆರೆದಿಟ್ಟಿದೆ.

ದೇಶವನ್ನು ಅಪಾಯದಿಂದ ರಕ್ಷಿಸಲು ಕಾರ್ಮಿಕ ಸಂಘಗಳ ಐಕ್ಯತೆ

ಪುಟ 1 ರಿಂದ

ಗಳ ವಿಮರ್ಶೆ ಮಾಡುವುದಷ್ಟೇ ಅಲ್ಲದೇ ಎರಡು ವಿಷಯಗಳ ಮೇಲೆ -ಕೈಗಾರಿಕಾ ರೋಗಗ್ರಸ್ತತೆ ಮತ್ತು ಖಾಸಗೀಕರಣ -ವಿಶೇಷ ಚರ್ಚೆ ನಡೆಸುವ ಅಜೆಂಡಾವನ್ನು ಇಟ್ಟುಕೊಂಡಿತ್ತು,

ಸಿಐಟಿಯು ಬೆಳ್ಳಿ ಹಬ್ಬದ ಆಚರಣೆಯ ಸಂದರ್ಭದಲ್ಲಿ ತನ್ನ ಪತ್ರಿಕೆ "ವರ್ಕಿಂಗ್ ಕ್ಲಾಸ್" ನ ವಿಶೇಷಾಂಕವನ್ನು ಹೊರತರಲಾಗುವುದು ಎಂದಿರುವ ಡಾ. ಪಂಧೆ ದೇಶದ ವಿವಿಧೆಡೆ ಕಾರ್ಮಿಕ ಸಂಘಗಳ ಐಕ್ಯತೆ ಮತ್ತು ಸಿಐಟಿಯುನ ಸ್ಥಾಪಕ ಅಧ್ಯಕ್ಷ ಬಿ.ಟಿ. ರಣದಿವೆಯವರು 1978ರಲ್ಲಿ ಅಭಿವೃದ್ಧಿಗೊಳಿಸಿದ ಕಾರ್ಮಿಕ ಸಂಘಗಳ ಮಹಾಒಕ್ಕೂಟದ ಪರಿಕಲ್ಪನೆಯ ಬಗ್ಗೆ ಚರ್ಚಿಸಲು ವಿಚಾರ ಸಂಕಿರಣಗಳನ್ನು ಯೋಜಿಸಲಾಗಿದೆ ಎಂದು ವಿವರಿಸಿದರು.

ಈ ಮೂರು ತಿಂಗಳಲ್ಲಿ ಸಿಐಟಿಯುನ ಸಾಹಿತ್ಯ ಮತ್ತು ಪತ್ರಿಕೆಗಳ ಮಾರಾಟದ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಕಾರ್ಮಿಕ ಸಂಘಗಳ ಮಹಾ ಒಕ್ಕೂಟದ ವಿಚಾರದ ಬಗ್ಗೆ ಹಾಗೂ ಸಿಐಟಿಯು ಇತಿಹಾಸದ ಬಗ್ಗೆ ಎರಡು ಕಿರು ಹೊತ್ತಿಗೆಗಳನ್ನು ಹೊರತರಲಾಗುವುದು.

ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಸಿಐಟಿಯು ಸದಸ್ಯತ್ವ ಸಂಖ್ಯೆಯನ್ನು 30 ಲಕ್ಷದ ಗುರಿತಲುಪಿಸಲು ಈ ಹಿಂದೆ ಕರೆ ನೀಡಲಾಗಿತ್ತು, ಕೆಲವು ರಾಜ್ಯಗಳು ಈಗಾಗಲೇ ತಾವಿಟ್ಟುಕೊಂಡಿದ್ದ ಗುರಿಯನ್ನು ಪೂರೈಸಿದ್ದಾರೆ ಎಂದು ಡಾ. ಎಂ.ಕೆ. ಪಂಧೆ ಐ.ಎನ್.ಎಸ್.ಗೆ ತಿಳಿಸಿದ್ದಾರೆ.

'ಟಾಡಾ'ದ ಬದಲಿ ಮಸೂದೆಗೆ ಸಿಪಿಐ(ಎಂ) ವಿರೋಧವೇಕೆ?

ಬಿಜೆಪಿಯೇತರ ಪ್ರತಿಪಕ್ಷಗಳ ಸತತ ವಿರೋಧ ಹಾಗೂ ಕಾಂಗ್ರೆಸ್(ಐ)ನೊಳಗೇ ಒಂದು ಗಮನಾರ್ಹ ವಿಭಾಗದ ವಿರೋಧದಿಂದಾಗಿ ಬಿಜೆಪಿ ಬೆಂಬಲವಿದ್ದರೂ ನರಸಿಂಹರಾವ್ ಸರಕಾರಕ್ಕೆ ಕುಖ್ಯಾತ 'ಟಾಡಾ'ದ ಸ್ಥಾನದಲ್ಲಿ ಹೊಸದೊಂದು ಕಾನೂನನ್ನು ರಾಜ್ಯಸಭೆಯಲ್ಲಿ ಪಾಸು ಮಾಡಿಕೊಳ್ಳಲಾಗಲಿಲ್ಲ, ಇದರಿಂದ ಕಾಂಗ್ರೆ ಸರಕಾರಕ್ಕಿಂತ ಜಾಸ್ತಿಯಾಗಿ ತಾನೇ ಮುಂದಿನ ಆಳುವ ಪಕ್ಷ ಎಂಬ ಭ್ರಮೆಯಲ್ಲಿರುವ ಬಿಜೆಪಿಗೆ ಹೆಚ್ಚು ಕಸಿವಿಸಿಯಾದಂತಿದೆ.

ಟಾಡಾ(TADA) ಅಥವಾ ಭಯೋತ್ಪಾದಕ ಮತ್ತು ವಿಚ್ಛಿದ್ರಕಾರಿ ಚಟುವಟಿಕೆಗಳ ಕಾನೂನು ಮೇ ೨೩ರಂದು ಕೊನೆಗೊಂಡಿತು. ಅದರ ಸ್ಥಾನದಲ್ಲಿ ಸರಕಾರ ಕ್ರಿಮಿನಲ್ ಕಾನೂನು ತಿದ್ದುಪಡಿ ಮಸೂದೆ, 1995ನ್ನು ಮಂಡಿಸಿತು. ಅದನ್ನು ರಾಜ್ಯಸಭೆಯಲ್ಲಿ ಪಾಸು ಮಾಡಿಸಿಕೊಳ್ಳಲು ಬಿಜೆಪಿಯ ಬೆಂಬಲ ಪಡೆಯಲು ಅದರ ಒತ್ತಾಯಗಳಿಗೆ ಮಣಿಯಿತು. ಆದರೂ ಮಸೂದೆ ಪಾಸಾಗಲಿಲ್ಲ,

ಸಿಪಿಐ(ಎಂ) ಈ ಮಸೂದೆಯನ್ನು ಅದರ ಈಗಿನ ರೂಪದಲ್ಲಿ ವಿರೋಧಿಸುತ್ತಿದೆ. ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಛಿದ್ರಗೊಳಿಸುವ ಅಥವಾ ದೇಶದಿಂದ ಪ್ರತ್ಯೇಕಗೊಳ್ಳುವ ಉದ್ದೇಶದ ಭಯೋತ್ಪಾದಕ ಚಟುವಟಿಕೆಗಳನ್ನು ಎದುರಿಸಲು ಒಂದು ನಿರ್ದಿಷ್ಟ ಶಾಸನವನ್ನು ಪರಿಶೀಲಿಸಲು ಸಿಪಿಐ(ಎಂ) ಸಿದ್ಧವಾಗಿತ್ತು. ಆದರೆ ಸಂಸತ್ತಿನ ಸ್ಥಾಯೀ ಸಮಿತಿಯಲ್ಲಿಯೂ ವ್ಯಾಪಕ ಬೆಂಬಲ ಗಳಿಸಿದ ಸಿಪಿಐ(ಎಂ)ನ ತಿದ್ದುಪಡಿಗಳನ್ನು ಸರಕಾರ ಸ್ವೀಕರಿಸಲಿಲ್ಲ, ಬದಲಾಗಿ ಬಿಜೆಪಿ ಒತ್ತಡದಿಂದ ತಿದ್ದುಪಡಿಗಳನ್ನು ತಂದಿತು.

ಸಿಪಿಐ(ಎಂ) ಈ ಮಸೂದೆಯನ್ನು ವಿರೋಧಿಸಲು ಕಾರಣ ಬಿಜೆಪಿ ಒತ್ತಡಕ್ಕೊಳಗಾಗಿ ಸರಕಾರ ಹಿಂದಿನ ಟಾಡಾದ ಹಲವು ಕರಾಳ ಅಂಶಗಳನ್ನು ಮತ್ತೆ ಸೇರಿಸುವ ಹಲವು ತಿದ್ದುಪಡಿಗಳನ್ನು ತಂದಿದೆ. ಟಾಡಾದ ಕೆಲವು ಅನಿಷ್ಟಕಾರಿ ಅಂಶಗಳನ್ನು ಕೈಬಿಟ್ಟಿದ್ದರೂ ಹೊಸ ಸರಕಾರ ಸೂಚಿಸುತ್ತಿರುವ ಬಿಜೆಪಿ-ಬೆಂಬಲಿತ ತಿದ್ದುಪಡಿಗಳು ಪ್ರಗತಿವಿರೋಧಿ ಹಾಗೂ ಸಂಪೂರ್ಣ ಪ್ರಜಾಪ್ರಭುತ್ವ-ವಿರೋಧಿ.

ಸಿಪಿಐ(ಎಂ)ನ ಆಕ್ಷೇಪಣೆಗಳಲ್ಲಿ ಒಂದು "ಭಯೋತ್ಪಾದಕ ಕೃತ್ಯ"ದ ಬಗೆಗಿನ ನಿರ್ವಚನೆ. ಹೊಸ ತಿದ್ದುಪಡಿಯಲ್ಲಿ ಮತ್ತೆ ನೀಡಿರುವ ನಿರ್ವಚನೆ ಮತ್ತೊಮ್ಮೆ "ಭಯೋತ್ಪಾದಕ ಚಟುವಟಿಕೆ' ಎನ್ನುವುದರ ವ್ಯಾಪ್ತಿಯನ್ನು ಹೆಚ್ಚಿಸಿ ಅದರ ದುರುಪಯೋಗಕ್ಕೆ ಇನ್ನಷ್ಟು ಅವಕಾಶ ಒದಗಿಸಿದೆ.

ಇನ್ನೊಂದು ಆತಂಕಕಾರಿ ತಿದ್ದುಪಡಿಯೆಂದರೆ ವಿಚ್ಛಿದ್ರಕಾರಿ ಚಟುವಟಿಕೆಗಳು ಯಾವುವೆಂದು ಸ್ಪಷ್ಟಪಡಿಸುವ ಪ್ರಯತ್ನದಲ್ಲಿ ಈ ಮಸೂದೆ "ಕಾನೂನುಬದ್ಧ" ಕಾರ್ಮಿಕ ಸಂಘಟನೆಯ ಮತ್ತು ಸಾಮೂಹಿಕ ಸಂಘಟನೆಯ ಚಟುವಟಿಕೆ ಎಂದರೇನು ಎಂದು ನಿರ್ವಚಿಸಲು ಪ್ರಯತ್ನಿಸಿದೆ. ಇದು ಆಕ್ಷೇಪಣೀಯ. ಏಕೆಂದರೆ ಕಾರ್ಮಿಕ ಆಂದೋಲನ ಚಟುವಟಿಕೆ ಹಾಗೂ ಸಾಮೂಹಿಕ ಆಂದೋಲನಗಳನ್ನು ಸರಕಾರೀ ನಿರ್ವಚನೆಗೆ ಅಧೀನಗೊಳಿಸುವುದು ಸಲ್ಲದು.

ವ್ಯಾಪಕ ದುರುಪಯೋಗಕ್ಕೆ ಒಳಗಾಗಬಹುದಾದ ಇನ್ನೊಂದು ಅಂಶವೆಂದರೆ ಸಾರ್ವಜನಿಕ ಸೇವಕರ ಮೇಲೆ ಮಾತು ಅಥವಾ ಕೃತಿಯಲ್ಲಿ ಹಲ್ಲೆ ಎಂದರೆ ಏನೆಂಬುದನ್ನು ಕುರಿತಾದ ಸರಕಾರೀ ನಿರ್ವಚನೆ. ಇದನ್ನು ಭ್ರಷ್ಟ ಸಾರ್ವಜನಿಕ ಸಿಬ್ಬಂದಿಯನ್ನು ಟೀಕಿಸುವವರಿಗೆ, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುವವರಿಗೆ ಕಿರುಕುಳ ಕೊಡಲು, ಅವರನ್ನು ಬಂಧಿಸಲು ಕೂಡಾ ದುರುಪಯೋಗಪಡಿಸಿಕೊಳ್ಳಲು ಸಾಧ್ಯವಾಗುವಂತಿದೆ.

ಈ ಕಾನೂನಿನ ಪ್ರಕಾರ ಆಪಾದಿತನಿಗೆ ಹಣಕಾಸು ನೆರವು ನೀಡುವವರನ್ನು ಬಂಧಿಸಬಹುದು. ಮುಗ್ಧ ಜನರಿಗೆ ಕಿರುಕುಳ ಕೊಡಲು ಇದರಿಂದ ಸಾಕಷ್ಟು ಅವಕಾಶ ಒದಗಿಸಿದಂತಾಗಿದೆ. ಅಲ್ಲದೆ ಸಾಮಾನ್ಯ ಕಾನೂನುಗಳಿಗೆ ವ್ಯತಿರಿಕ್ತವಾಗಿ ಇಲ್ಲಿ ಆಪಾದಿತನೇ ತಾನು ನಿರಪರಾಧಿ ಎಂದು ಸಾಬೀತು ಮಾಡಬೇಕಾಗಿದೆ.

ಎಡಪಕ್ಷಗಳು, ಜನತಾದಳ ಹಾಗೂ ಆಳುವ ಪಕ್ಷದೊಳಗಿನ ವಿಭಾಗಗಳಿಂದ ಬಂದ ವ್ಯಾಪಕ ವಿರೋಧದಿಂದಾಗಿ ಸರಕಾರ 'ಟಾಡಾ'ವನ್ನು ರದ್ದು ಮಾಡಬೇಕಾಗಿ ಬಂತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. 'ಟಾಡಾ' ಒದಗಿಸಿದ ಕರಾಳ ಅವಕಾಶಗಳನ್ನು ಸರಕಾರ ವ್ಯಾಪಕವಾಗಿ ದುರುಪಯೋಗಪಡಿಸಿಕೊಂಡಿವೆ, ವಿಶೇಷವಾಗಿ ಮುಸ್ಲಿಂ ಅಲ್ಪಸಂಖ್ಯಾತರನ್ನು ಇಂತಹ ದುರುಪಯೋಗಕ್ಕೆ ಗುರಿಪಡಿಸಲಾಗಿದೆ ಎಂದು ಟಾಡಾದ ವಿರೋಧಿಗಳ ವಾದ. ಬಿಜೆಪಿ 'ಟಾಡಾ'ವನ್ನು ರದ್ದು ಮಾಡುವುದನ್ನು ಬಲವಾಗಿ ವಿರೋಧಿಸಿ ಮೇ 23, 1995ರಂದು ಕೊನೆಗೊಳ್ಳಲಿದ್ದ ಈ ಕಾನೂನನ್ನು ನವೀಕರಿಸಬೇಕೆಂದು ಒತ್ತಾಯಿಸಿತ್ತು.

ಆಗ ಸರಕಾರ ಟಾಡಾದ ಸ್ಥಾನದಲ್ಲಿ ಭಯೋತ್ಪಾದಕ ಚಟುವಟಿಕೆಗಳನ್ನುದಮನ ಮಾಡುವ ಉದ್ದೇಶದ, ಆದರೆ ಮುಗ್ಧ ನಾಗರಿಕರ ವಿರುದ್ಧ ಟಾಡಾದಂತೆ ದುರುಪಯೋಗ ಮಾಡಲು ಅವಕಾಶ ನೀಡುವ ಕಲಮುಗಳಿಲ್ಲದ ಒಂದು ಹೊಸ ಮಸೂದೆ ತರಲು ನಿರ್ಧರಿಸಿತು. ಸರಕಾರ ಮೊದಲು ತಂದ ಇಂತಹ ಮಸೂದೆ ಆತ್ಯಪ್ತಿಕರವಾಗಿತ್ತು. ಸಿಪಿಐ(ಎಂ) ಕೂಡಾ ಸೇರಿದಂತೆ ಪ್ರತಿಪಕ್ಷಗಳು ತಿದ್ದುಪಡಿಗಳನ್ನು ಸೂಚಿಸಿದವು. ಸರಕಾರ ಅವುಗಳನ್ನು ಪರಿಶೀಲಿಸಲು ಒಪ್ಪಿತು.

ರಾಜ್ಯಸಭೆಯಲ್ಲಿ ಚರ್ಚೆಯ ನಂತರ ಗೃಹಮಂತ್ರಿ ಎಸ್.ಬಿ.ಚವ್ಹಾಣ್ ಒಂಭತ್ತು ತಿದ್ದುಪಡಿಗಳನ್ನು ಸೂಚಿಸಿದರು. ಈ ತಿದ್ದುಪಡಿಗಳ ವಿವರವಾದ ಪರೀಕ್ಷಣೆ ಮಾಡಿದಾಗ ಸರಕಾರ ಬಿಜೆಪಿ ಒತ್ತಡಕ್ಕೆ ತಲೆಬಾಗಿ 'ಟಾಡಾ'ದಲ್ಲಿ ಹಲವು ಆಕ್ಷೇಪಣೀಯ ಕಲಮುಗಳನ್ನು ಮತ್ತೆ ಸೇರಿಸಿದೆ ಎಂದು ಕಂಡುಬಂತು. ರಾಜ್ಯಸಭೆಯಲ್ಲಿ ಈ ಮಸೂದೆಯನ್ನು ಪಾಸು ಮಾಡಿಸಿಕೊಳ್ಳಲು ಬಿಜೆಪಿ ಬೆಂಬಲ ಬೇಕಾಗಿದ್ದರಿಂದ ಸರಕಾರ ಅದರ ಒತ್ತಡಕ್ಕೆ ಮಣಿದಿತ್ತು. ಆದರೆ ಬಿಜೆಪಿಯೇತರ ಪ್ರತಿಪಕ್ಷಗಳು ಹಾಗೂ ಆಳುವ ಪಕ್ಷದಲ್ಲಿಯೂ ಸಾಕಷ್ಟು ಮಂದಿ ಬಲವಾಗಿ ಆಕ್ಷೇಪಿಸಿದ್ದರಿಂದ ಅದರ ಈ ಯೋಚನೆ ವಿಫಲಗೊಂಡಿತು. ಸರಕಾರ ಹಿಂದೇಟು ಹಾಕಬೇಕಾಯಿತು. ಪ್ರತಿಪಕ್ಷಗಳೊಂದಿಗೆ ಇನ್ನೊಂದು ಸುತ್ತಿನ ಮಾತುಕತೆ ನಡೆಸಲು ಮೇ 27ರಂದು ಒಪ್ಪಿಕೊಳ್ಳಬೇಕಾಯಿತು.

ಆದರೆ ಸಿಪಿಐ(ಎಂ) ಈ ಮಸೂದೆಯ ಕರಾಳ ಅಂಶಗಳನ್ನು ನಿವಾರಿಸಲು ಹಲವಾರು ಸೂಚನೆಗಳನ್ನು ನೀಡಿದರೂ ಸರಕಾರ ಇದುವರೆಗೆ ಮಸೂದೆಯಲ್ಲಿ ಗಮನಾರ್ಹ ಬದಲಾವಣೆ ತಂದಿಲ್ಲ, ಅದರ ಸದ್ಯದ ಸ್ವರೂಪದಲ್ಲಿ ಈ ಮಸೂದೆ ಹಳೆಯ 'ಟಾಡಾ'ದ ಕೆಲವು ಅಪಾಯಕಾರಿ ಅಂಶಗಳನ್ನು ಒಳಗೊಂಡಿರುವುದರಿಂದ ಈ ಮಸೂದೆಯನ್ನು ಪಾಸು ಮಾಡದೆ ಸರಕಾರ ಅದನ್ನು ಸಂಸತ್ತಿನ ಜಂಟಿ ಸೆಲೆಕ್ಷನ್ ಸಮಿತಿಗೆ ಆಮೂಲಾಗ್ರ ಚರ್ಚೆಗೆ ಒಪ್ಪಿಸಬೇಕು ಎಂಬುದು ಸಿಪಿಐ(ಎಂ)ನ ನಿಲುವು.